ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಏಪ್ರಿಲ್ 24 ಗುರುವಾರ 2025

₹4

ಸಂಪುಟ: 46 | ಸಂಚಿಕೆ: 9 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

ಅಭಿನಂದನೆ...



ಉದ್ಬೂರಲ್ಲಿ ರಸ್ತೆ ಕಾಮಗಾರಿಗೆ ಚಾಲನೆ ನೀಡಲು ಆಗಮಿಸಿದ್ದ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರನ್ನು ಕಾಂಗ್ರೆಸ್ ಮುಖಂಡ ಕೃಷ್ಣನಾಯಕ್, ಉದ್ಯಮಿ ಮಹೇಶ್ ಎ ಹಾಗೂ ಇತರರು ಆತ್ಮೀಯವಾಗಿ ಅಭಿನಂದಿಸಿದರು.

ಸಿಲಿಕಾನ್ ಮಾಧ್ಯಮ ಪ್ರಶಸ್ತಿ ಪ್ರದಾನ

ಮಾಧ್ಯಮ ಕ್ಷೇತ್ರ ದಿಕ್ಕಿಲ್ಲದೆ ಸಾಗುತ್ತಿದೆ: ಡಾ.ಕೆ.ವಿ.ನಾಗರಾಜು



ರೋಟರಿ ಮೈಸೂರು ಮಿಡ್‌ಟೌನ್ ವತಿಯಿಂದ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಹಿರಿಯ ವರದಿಗಾರ ಎಂ.ಟಿ.ಯೋಗೇಶ್‌ಕುಮಾರ್, ಆಕಾಶವಾಣಿ ನಿರೂಪಕಿ ಆರ್.ಲೋಕೇಶ್ವರಿ ಹಾಗೂ ವ್ಯಂಗ್ಯ ಚಿತ್ರಕಾರ ಎಂ.ವಿ.ನಾಗೇಂದ್ರಬಾಬು ಅವರಿಗೆ 'ಸಿಲಿಕಾನ್ ಮಾಧ್ಯಮ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮೈಸೂರು, ಏ.23(ಎಂಕೆ)– ರೋಟರಿ ಮೈಸೂರು ಮಿಡ್‌ಟೌನ್ ವತಿಯಿಂದ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಹಿರಿಯ ವರದಿಗಾರ ಎಂ.ಟಿ. ಯೋಗೇಶ್‌ಕುಮಾರ್, ಆಕಾಶವಾಣಿ ನಿರೂಪಕಿ ಆರ್.ಲೋಕೇಶ್ವರಿ ಹಾಗೂ ವ್ಯಂಗ್ಯ ಚಿತ್ರಕಾರ ಎಂ.ವಿ.ನಾಗೇಂದ್ರ ಬಾಬು ಅವರಿಗೆ 'ಸಿಲಿಕಾನ್ ಮಾಧ್ಯಮ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರೋಟರಿ ಮೈಸೂರು ಮಿಡ್‌ಟೌನ್ ಅಧ್ಯಕ್ಷ ಎಸ್.ಕುಮಾರ ಸ್ವಾಮಿ ಹಾಗೂ ಸಿಲಿಕಾನ್ ಕಂಟ್ರೋಲ್ ಪ್ರೈ.ಲಿಮಿಟೆಡ್‌ನ ಎಸ್.ರಾಘವೇಂದ್ರ ಪ್ರಶಸ್ತಿ ಪ್ರದಾನ ಮಾಡಿದರು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಮಿಜೋರಾಂ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಡಾ.ಕೆ.ವಿ. ನಾಗರಾಜು ಮಾತನಾಡಿ, ಇತ್ತೀಚಿನ ದಿನಗಳ ಪತ್ರಿಕೋದ್ಯಮದಲ್ಲಿ ಅಪ್ರಮಾಣಿಕತೆ ಮತ್ತು ಭ್ರಷ್ಟಾಚಾರ ಹೆಚ್ಚಾಗುತ್ತಿದೆ. ದಿಕ್ಕಿಲ್ಲದೆ ಸಾಗುತ್ತಿರುವ ಮಾಧ್ಯಮ ಕ್ಷೇತ್ರವನ್ನು ಸರಿದಾರಿಗೆ ತರುವ ಕಾರ್ಯ ತುರ್ತಾಗಿ ಆಗಬೇಕಿದೆ. ಅದರಲ್ಲೂ ಸಾಮಾಜಿಕ ಜಾಲತಾಣಗಳಿಗೆ ಕಡಿವಾಣ ಹಾಕಬೇಕಿದೆ. ಈ ನಿಟ್ಟಿನಲ್ಲಿ ಯುವ ಪತ್ರಕರ್ತರು ಶ್ರಮಿಸ ಬೇಕು ಎಂದರು.

ಮೊದಲೆಲ್ಲಾ ಸುದ್ದಿಗಾಗಿ ಅಲೆದಾಡಬೇಕಾದ ಪರಿಸ್ಥಿತಿ ಇತ್ತು. ಆದರೆ ಈಗ ಕೈ ಬೆರಳ ತುದಿಯಲ್ಲೇ ಸುದ್ದಿಗಳು ದೊರೆಯುತ್ತಿವೆ. ಸುದ್ದಿಗಾಗಿ ಕಷ್ಟಪಡುವ ಪ್ರಮಯವೇ ಇಲ್ಲದಂತಾಗಿದೆ. ಅದರಲ್ಲೂ ದೃಶ್ಯ ಮಾಧ್ಯಮಗಳು ವಿಶ್ವಾಸ ಕಳೆದುಕೊಳ್ಳುವ ಹಂತದಲ್ಲಿವೆ. ನಾನು ಅಸ್ಸಾಂನಲ್ಲಿದ್ದಾಗ ಸಾಮಾಜಿಕ ಜಾಲತಾಣದಿಂದ ಭಯದ ವಾತಾವರಣ ಸೃಷ್ಟಿಯಾಗಿತ್ತು. ಚಿಕ್ಕ ರಾಜ್ಯದಲ್ಲಿಯೇ ಅಂತಹ ಪರಿಣಾಮ ಬೀರಿದ್ದ ಸಾಮಾಜಿಕ ಜಾಲತಾಣಗಳು ಇನ್ನೂ ದೊಡ್ಡ ರಾಜ್ಯದ ಮೇಲೆ ಬೀರುವ ಪರಿಣಾಮ ಎಷ್ಟಿರಬಹುದು ಎಂಬುದನ್ನು ಊಹಿಸಿಕೊಂಡರೆ ಭಯವಾಗುತ್ತದೆ. ಸುಳ್ಳು ಸುದ್ದಿಗಳು ಹೆಚ್ಚಾಗುತ್ತಿವೆ ಕೃತಕ ಬುದ್ಧಿಮತ್ತೆ ಬಂದಾಗಿನಿಂದಂತೂ ಸುಳ್ಳು ಸುದ್ದಿಗಳ ಹಾವಳಿ ವಿಪರೀತವಾಗಿದೆ. ಹಾಗಾಗಿ ಸಾಮಾಜಿಕ ಜಾಲತಾಣಗಳ ಕಡಿವಾಣ ಅತ್ಯಗತ್ಯ ಎಂದು ಹೇಳಿದರು.

ಜನರಿಗೆ ಸತ್ಯಾಸತ್ಯತೆ ತಿಳಿಸುವ ನಿಟ್ಟಿನಲ್ಲಿ ಯುವ ಪತ್ರಕರ್ತರು ಎಚ್ಚೆತ್ತು ಕೊಳ್ಳಬೇಕು. ಪತ್ರಿಕೋದ್ಯಮದಲ್ಲಿರುವ ನ್ಯೂನ್ಯತೆಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಪತ್ರಕರ್ತರು ಕಾರ್ಯೋನ್ಮುಖರಾಗಬೇಕು ಎಂದು ಸಲಹೆ ನೀಡಿದರು. ರೋಟರಿ ಮೈಸೂರು ಮಿಡ್‌ಟೌನ್ ಕಾರ್ಯದರ್ಶಿ ಎಲ್ಯೆಜರ್ ಮಿಲ್ಟನ್, ಸಿಲಿಕಾನ್ ಕಂಟ್ರೋಲ್ ಪ್ರೈ.ಲಿಮಿಟೆಡ್‌ನ ಎಂ.ಎನ್.ನವೀನ್ ಚಂದ್ರ ಮತ್ತಿತರರು ಉಪಸ್ಥಿತರಿದ್ದರು.

ಸತೀಶ್ ಜಾರಕಿಹೊಳಿಗೆ ಅಭಿನಂದನೆ...



ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರ ಕಚೇರಿಗೆ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಬುಧವಾರ ಭೇಟಿ ನೀಡಿದರು. ಈ ವೇಳೆ ಗೌಡರು ಸಚಿವರನ್ನು ಆತ್ಮೀಯವಾಗಿ ಅಭಿನಂದಿಸಿದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಶಾಸಕ ಡಿ.ರವಿಶಂಕರ್, ಮುಖಂಡರಾದ ರವಿಕುಮಾರ್, ನವೀನ್ ಚಿತ್ರದಲ್ಲಿದ್ದಾರೆ.

2025ನೇ ಸಾಲಿನ ಉಚಿತ ಸಾಮೂಹಿಕ ವಿವಾಹ

ಮೈಸೂರು,ಏ.23– ಮೈಸೂರು ಜಿಲ್ಲೆಯಲ್ಲಿನ ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಬರುವ ಪ್ರಮುಖ ಪ್ರವರ್ಗ ಎ ಮತ್ತು ಬಿ ದೇವಸ್ಥಾನಗಳಲ್ಲಿ ಧಾರ್ಮಿಕ ದತ್ತಿ ಇಲಾಖೆ ವತಿಯಿಂದ ನೆರವೇರಿಸಲ್ಪಡುವ ಮಾಂಗಲ್ಯ ಭಾಗ್ಯ ಯೋಜನೆಯಡಿ 2025ನೇ ಸಾಲಿನ ಉಚಿತ ಸಾಮೂಹಿಕ ವಿವಾಹವನ್ನು ಮೇ 22ರಂದು ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದಲ್ಲಿ ಹಮ್ಮಿಕೊಳ್ಳಲಾಗಿದೆ

ಆಸಕ್ತ ಫಲಾನುಭವಿಗಳು ಸಂಬಂಧಪಟ್ಟ ತಾಲೂಕು ತಹಶೀಲ್ದಾರ್ ಕಚೇರಿಗಳಲ್ಲಿ ಹಾಗೂ ಪ್ರವರ್ಗ ಎ ಮತ್ತು ಬಿ ದೇವಸ್ಥಾನಗಳಲ್ಲಿ ಹಾಗೂ ಜಿಲ್ಲಾಧಿಕಾರಿಗಳ ಕಚೇರಿಯ ಮುಜರಾಯಿ ಶಾಖೆಯಲ್ಲಿ ಅರ್ಜಿ ನಮೂನೆಯನ್ನು ಪಡೆದು ಅರ್ಜಿಗಳಲ್ಲಿ ನಮೂದಿಸಿರುವ ದಾಖಲೆಗಳೊಂದಿಗೆ ಮೇ 12ರಂದು ಸಂಜೆ 5 ಗಂಟೆ ಒಳಗಾಗಿ ಸಲ್ಲಿಸಬೇಕು. ನಂತರ ಬರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಆದ್ದರಿಂದ ಧಾರ್ಮಿಕ ದತ್ತಿ ಇಲಾಖೆ ವತಿಯಿಂದ ನೆರವೇರಿಸಲ್ಪಡುವ ಮಾಂಗಲ್ಯ ಭಾಗ್ಯ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮದ ಅನುಕೂಲವನ್ನು ಸದುಪಯೋಗಪಡಿಸಿಕೊಳ್ಳಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಆಯಾಯ ತಾಲೂಕು ಕಚೇರಿಗಳಲ್ಲಿ ಹಾಗೂ ಪ್ರವರ್ಗ ಎ ಮತ್ತು ಬಿ ದೇವಾಲಯಗಳಲ್ಲಿ ಮತ್ತು ಜಿಲ್ಲಾಧಿಕಾರಿಗಳ ಕಚೇರಿ ಧಾರ್ಮಿಕ ದತ್ತಿ ಶಾಖೆಯಲ್ಲಿ ಪಡೆಯಬಹುದಾಗಿರುತ್ತದೆ ಎಂದು ಮೈಸೂರು ಜಿಲ್ಲಾಧಿಕಾರಿ ಜಿ.ಲಕ್ಷ್ಮಿ ಕಾಂತ್‌ರೆಡ್ಡಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಾವು ಕಡಿತದಿಂದ ರೈತ ಸಂಘದ ಉಪಾಧ್ಯಕ್ಷ ವಿಠಲ್‌ರಾವ್‌ಪವಾರ್ ಸಾವು

ಗಾವಡಗೆರೆ, ಏ.23– ನಿನ್ನೆ ರಾತ್ರಿ ಹಾವು ಕಡಿತದಿಂದ ಗಾವಡಗೆರೆ ರೈತ ಸೇವಾ ಸಹಕಾರ ಬ್ಯಾಂಕ್ ಆಡಳಿತ ಮಂಡಳಿ ಉಪಾಧ್ಯಕ್ಷ ವಿಠಲ್ ರಾವ್ ಪವಾರ್ (73) ಸಾವಿಗೀಡಾಗಿದ್ದಾರೆ.



ಸಮಾಜಮುಖಿ ಕೆಲಸದಲ್ಲಿ ಸದಾಕಾಲ ಮುಂದಿರುತ್ತಿದ್ದ ಇವರು, ಹಿಂದುಳಿದ ವರ್ಗಗಳ ವಸತಿನಿಲಯದ ನಿರ್ವಾಹಕರಾಗಿ ಕರ್ತವ್ಯ ನಿರ್ವಹಿಸಿ ನಿವೃತ್ತರಾಗಿದ್ದರು. ಗಾವಡಗೆರೆ ಶ್ರೀ ಕಾಲಭೈರವೇಶ್ವರ ಸ್ವಾಮಿ ದೇವಸ್ಥಾನದ ಅಭಿವೃದ್ಧಿ ಸಮಿತಿಯ ಅಧ್ಯಕ್ಷರಾಗಿದ್ದರು. ಮೃತರು ಪತ್ನಿ ಮಧುಮತಿ ಬಾಯಿ ಗ್ರಾ.ಪಂ. ಸದಸ್ಯರು (ಮಾಜಿ ಅಧ್ಯಕ್ಷರು), ಪುತ್ರ, ಪುತ್ರಿ ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮ ಹುಲ್ಯಾಳು ಗ್ರಾಮದಲ್ಲಿ ನೆರವೇರಿಸಲಾಯಿತು. ಈ ವೇಳೆ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಮತ್ತು ಕಾಂಗ್ರೆಸ್ ಮುಖಂಡರು ಸೇರಿದಂತೆ ಸಾವಿರಾರು ಮಂದಿ ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡಿದ್ದರು.

ಏಳು ದಿನಗಳ ಭಗಿನಿ ಸಂಗೀತೋತ್ಸವಕ್ಕೆ ಚಾಲನೆ

● ಬಿಎಸ್‌ಎಸ್ ವಿದ್ಯೋದಯ ಶಾಲೆಯ ವಿವಿಧ ಕೊಠಡಿಗಳ ಉದ್ಘಾಟನೆ ● ಸಂಪತ್ತನ್ನು ದಾನಕ್ಕೆ ವಿನಿಯೋಗಿಸಿದರೆ ದೇವರ ಪೂಜಿಸಿದಂತೆ ; ಶ್ರೀ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ





ಮೈಸೂರಿನ ಕೃಷ್ಣಮೂರ್ತಿಪುರಂನ ಬಿಎಸ್‌ಎಸ್ ವಿದ್ಯೋದಯ ಶಾಲೆ ಸಭಾಂಗಣದಲ್ಲಿ ಬುಧವಾರ ಭಗಿನಿ ಸಂಗೀತೋತ್ಸವಕ್ಕೆ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಚಾಲನೆ ನೀಡಿದರು. ಮತ್ತೊಂದು ಚಿತ್ರದಲ್ಲಿ ವಿದ್ವಾನ್ ಬಾಲುಮಸ್ತಿ ಅವರು ವೀಣಾ ವಾದನ ಕಾರ್ಯಕ್ರಮ ನಡೆಸಿಕೊಟ್ಟಿದ್ದನ್ನು ಕಾಣಬಹುದು.

ಮೈಸೂರು, ಏ.23(ಪಿಎಂ)– ಬಿಎಸ್‌ಎಸ್ ವಿದ್ಯೋದಯ ಶಾಲೆ ವತಿಯಿಂದ 'ಭಗಿನಿ ಸಂಗೀತೋತ್ಸವ–2025' ಶೀರ್ಷಿಕೆಯಡಿ ಹಮ್ಮಿಕೊಂಡಿರುವ ಏಳು ದಿನಗಳ ಶಾಸ್ತ್ರೀಯ ಸಂಗೀತ ಕಾರ್ಯಕ್ರಮಕ್ಕೆ ಬುಧವಾರ ಚಾಲನೆ ದೊರೆಯಿತು.

ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಬಿಎಸ್‌ಎಸ್ ವಿದ್ಯೋದಯ ಶಾಲೆಯ ನೂತನ ಸಭಾಂಗಣ 'ಪದ್ಮಜಾ ಶ್ರೀನಿವಾಸ್'ದಲ್ಲಿ ಏ.29ರವರೆಗೆ (ಪ್ರತಿದಿನ ಸಂಜೆ 6ರಿಂದ 9ರವರೆಗೆ) ಆಯೋಜಿಸಿರುವ ಸಂಗೀತೋತ್ಸವಕ್ಕೆ ಶಾಲೆಯ ಅಧ್ಯಕ್ಷರೂ ಆದ ಉಡುಪಿಯ ಶ್ರೀ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿಯವರು ದೀಪ ಬೆಳಗಿಸಿ ಚಾಲನೆ ನೀಡಿದರು. ಅಲ್ಲದೆ, 'ಪದ್ಮಜಾ ಶ್ರೀನಿವಾಸ್' ಸಭಾಂಗಣವನ್ನೂ ಉದ್ಘಾಟಿಸಿದರು.

ಬಳಿಕ ಅನುಗ್ರಹ ಸಂದೇಶ ನೀಡಿದ ಶ್ರೀಗಳು, ನಮ್ಮ ಮಾತೆ ಮತ್ತು ಮಾತೃ ಭೂಮಿಗೆ ಅತೀವ ಗೌರವ ಸಲ್ಲಿಸಬೇಕೆಂದು ರಾಮ ದೇವರು ಸಂದೇಶ ನೀಡಿದ್ದಾರೆ. ರಾಮ ದೇವರ ಆದರ್ಶಗಳನ್ನು ನಾವು ಪಾಲಿಸಬೇಕು. ಈ ಶಿಕ್ಷಣ ಸಂಸ್ಥೆ ನಿರ್ಮಾಣಕ್ಕೆ ಧನಸಹಾಯ ನೀಡಿದ ಮೈಸೂರಿನ ದಾನಿಗಳು, ಆ ಮೂಲಕ ರಾಮದೇವರ ಆದರ್ಶಗಳನ್ನು ಪಾಲಿಸಿದ್ದಾರೆ ಎಂದೇ ಭಾವಿಸಿದ್ದೇವೆ. ಗಳಿಸಿದ ಸಂಪತ್ತನ್ನು ಸಮಾಜ ಸೇವಾ ಕಾರ್ಯಗಳಿಗೆ ಉದಾತ್ತವಾಗಿ ದಾನ ಮಾಡಿದರೆ ದೇವರನ್ನು ಪೂಜಿಸಿದಂತೆ. ಬದುಕಿನಲ್ಲಿ ಸಂಸ್ಕಾರದ ಮಹತ್ವ ಅರಿಯಬೇಕು. ಬಾಲ್ಯದಲ್ಲೇ ಮಕ್ಕಳಿಗೆ ಸಂಸ್ಕಾರ ನೀಡಬೇಕು ಎಂದು ತಿಳಿಸಿದರು.

ಇದಕ್ಕೂ ಮುನ್ನ ಮಾತನಾಡಿದ ಉದ್ಯಮಿಯೂ ಆದ ಬಿಎಸ್‌ಎಸ್ ವಿದ್ಯೋದಯ ಶಾಲೆಯ ಗೌರವ ಅಧ್ಯಕ್ಷ ಡಾ.ಎಂ. ಜಗನ್ನಾಥ್ ಶೆಣೈ, ಈಗಿನ ಮಕ್ಕಳು ಬಹಳ ಬುದ್ಧಿವಂತರಿದ್ದಾರೆ. ಅಂಕ ಗಳಿಕೆಯಲ್ಲಿ ಮುಂದಿದ್ದಾರೆ. ನಮ್ಮ ಕಾಲದಲ್ಲಿ ನಾವು ಈಗಿನಂತೆ ಹೆಚ್ಚು ಅಂಕ ಗಳಿಸಲು ಸಾಧ್ಯವಿರಲಿಲ್ಲ ಆದರೆ ನಮಗೆ ಸಂಸ್ಕಾರ ದೊರೆಯಿತು. ಬಾಲ್ಯದಲ್ಲೇ ಸಂಸ್ಕಾರ ಬೆಳೆಸುವುದು ಅಗತ್ಯ. ಇದರಿಂದ ಸಮಾಜಕ್ಕೆ ಸ್ಪಂದಿಸುವ ಗುಣ ಸಹ ಬೆಳೆಯುತ್ತದೆ. ವಿದ್ಯೆಯ ಜೊತೆಯಲ್ಲಿ ಈ ಎಲ್ಲಾ ಸದ್ಗುಣ ಮಕ್ಕಳಿಗೆ ದೊರೆಯಬೇಕು. ನಮ್ಮ ಪರಂಪರೆ, ಸಂಸ್ಕೃತಿಯನ್ನು ಮಕ್ಕಳಿಗೆ ತಿಳಿಸಿಕೊಡಬೇಕು. ಈ ಅಂಶಗಳಿಗೆ ನಮ್ಮ ಶಾಲೆಯಲ್ಲಿ ಆದ್ಯತೆ ನೀಡಲಾಗಿದೆ ಎಂದು ಹೇಳಿದರು.

ಬಿಎಸ್‌ಎಸ್ ವಿದ್ಯೋದಯ ಶಾಲೆಯ ಗೌರವ ಕಾರ್ಯದರ್ಶಿ ಆರ್.ವಾಸುದೇವ ಭಟ್ ಮಾತನಾಡಿ, ವರ್ಷದ ಹಿಂದೆ ಈ ಶಾಲೆಯ ಉದ್ಘಾಟನೆ ನೆರವೇರಿಸಲಾಯಿತು. ಈ ಶಾಲೆಯ ಕಟ್ಟಡವನ್ನು 30 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗಿದೆ. ಜೊತೆಗೆ ಈ ಜಾಗದಲ್ಲಿ ಶ್ರೀರಾಮ ನೆಲೆಸಿದ್ದಾನೆ ಎಂಬ ಗಟ್ಟಿ ನಂಬಿಕೆ ಇದೆ. ದಾನಿಗಳು ನೀಡಿದ ದೇಣಿಗೆಯಿಂದಲೇ ಶಾಲೆಯ ಇಡೀ ಕಟ್ಟಡ ನಿರ್ಮಾಣಗೊಂಡಿದೆ. ಮಕ್ಕಳಿಗೆ ಗುಣಮಟ್ಟದ ಶಿಕ್ಷಣದೊಂದಿಗೆ ಸಂಸ್ಕಾರ ಕಲಿಸುವುದು ನಮ್ಮ ಈ ಶಾಲೆಯ ವಿಶೇಷತೆಯಾಗಿದೆ. ಯಾವುದೇ ಲಾಭವಿಲ್ಲದೇ ಕನಿಷ್ಠ ಶುಲ್ಕದಲ್ಲಿ ಗುಣಮಟ್ಟದ ಶಿಕ್ಷಣ ನೀಡಬೇಕೆಂಬುದು ಶಾಲೆಯ ಉದ್ದೇಶವಾಗಿದೆ ಎಂದು ತಿಳಿಸಿದರು. ಇದೇ ವೇಳೆ ದಾನಿಗಳ ನೆರವಿನಿಂದ ಶಾಲೆಯಲ್ಲಿ ನಿರ್ಮಾಣಗೊಂಡಿರುವ 'ವರ್ಡ್ಸ್ ವರ್ಲ್ಡ್' ಶೀರ್ಷಿಕೆಯ ಗ್ರಂಥಾಲಯ, 'ಆನಂದಕಕ್ಷ' ಶೀರ್ಷಿಕೆಯ ಚಟುವಟಿಕೆ ಕೊಠಡಿ, 'ಶೂನ್ಯ' ಶೀರ್ಷಿಕೆಯ ಕಂಪ್ಯೂಟರ್ ಲ್ಯಾಬ್, 'ಲೀಲಾವತಿ' ಶೀರ್ಷಿಕೆಯ ಗಣಿತ ಪ್ರಯೋಗಾಲಯ, 'ಚದುರಂಗ ಗೃಹಂ' ಶೀರ್ಷಿಕೆಯ ಚದುರಂಗ ಆಟದ ಕೊಠಡಿ ಉದ್ಘಾಟಿಸಲಾಯಿತು. ಅಲ್ಲದೆ, ಇವುಗಳ ದಾನಿಗಳನ್ನು ಸನ್ಮಾನಿಸಲಾಯಿತು.

ಬಳಿಕ ವಿದ್ವಾನ್ ಬಾಲುಮಸ್ತಿ ಅವರ ವೀಣಾ ವಾದನ ಕಾರ್ಯಕ್ರಮ ನಡೆಯಿತು. ಇವರಿಗೆ ವಿದ್ವಾನ್ ಸಿ.ಎಸ್.ಕೇಶವ ಚಂದ್ರ ಮತ್ತು ವಿದ್ವಾನ್ ಎಂ.ಶ್ರೀನಿಧಿ ಪಕ್ಕವಾದ್ಯದಲ್ಲಿ ಸಹಕಾರ ನೀಡಿದರು. ಶಾಲೆಯ ಕಾರ್ಯಾಧ್ಯಕ್ಷ ಬಿ.ಶ್ರೀನಿವಾಸ್, ಸಂಗೀತೋತ್ಸವದ ಅಧ್ಯಕ್ಷ ಕೆ.ಎಸ್. ಗುರುರಾಜ ಮತ್ತಿತರರು ಹಾಜರಿದ್ದರು.

ಪಹಲ್ಗಾಮ್ ಹತ್ಯಾಕಾಂಡದಲ್ಲಿ ಮೃತಪಟ್ಟವರಿಗೆ ಎಸ್‌ಡಿಪಿಐ ಕ್ಯಾಂಡಲ್ ಲೈಟ್ ಮೆರವಣಿಗೆ ಮೂಲಕ ಶ್ರದ್ಧಾಂಜಲಿ



ಎಸ್‌ಡಿಪಿಐ ವತಿಯಿಂದ ಕ್ಯಾಂಡಲ್ ಲೈಟ್ ಮೆರವಣಿಗೆ ನಡೆಸಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮೈಸೂರು, ಏ.23(ಎಂಕೆ)– ಜಮ್ಮು–ಕಾಶ್ಮೀರದ ಪಹಲ್ಗಾಮ್‌ನಲ್ಲಿ ಏ.22ರ ಮಂಗಳವಾರ ಪ್ರವಾಸಿಗರ ಮೇಲೆ ನಡೆದ ಉಗ್ರರ ದಾಳಿಯಲ್ಲಿ ಮೃತಪಟ್ಟ 28ಕ್ಕೂ ಹೆಚ್ಚು ಪ್ರವಾಸಿಗರಿಗೆ ಎಸ್‌ಡಿಪಿಐ ವತಿಯಿಂದ ಕ್ಯಾಂಡಲ್ ಲೈಟ್ ಮೆರವಣಿಗೆ ನಡೆಸಿ ಶ್ರದ್ಧಾಂಜಲಿ ಅರ್ಪಿಸಲಾಯಿತು.

ನಗರದ ಸೆಂಟ್ ಫಿಲೋಮಿನಾ ಚರ್ಚ್ ವೃತ್ತದಲ್ಲಿ ಜಮಾವಣೆಗೊಂಡ ಎಸ್‌ಡಿಪಿಐ ಕಾರ್ಯಕರ್ತರು ಉಗ್ರರ ಪೈಶಾಚಿಕ ಕೃತ್ಯವನ್ನು ಖಂಡಿಸಿದರು. ಕ್ಯಾಂಡಲ್ ಲೈಟ್ ಬೆಳಗಿಸಿ, ಮೌನಾಚರಣೆ ಮೂಲಕ ಮೃತರಿಗೆ ಶ್ರದ್ಧಾಂಜಲಿ ಸಲ್ಲಿಸಿದರು. ಈ ವೇಳೆ ಎಸ್‌ಡಿಪಿಐ ಜಿಲ್ಲಾಧ್ಯಕ್ಷ ರಫತ್ ಖಾನ್ ಮಾತನಾಡಿ, ಜಮ್ಮು– ಕಾಶ್ಮೀರದಲ್ಲಿ ಉಗ್ರರ ದಾಳಿಗೆ ಕರ್ನಾಟಕದ ಇಬ್ಬರು ಸೇರಿದಂತೆ ಒಟ್ಟು 28ಕ್ಕೂ ಹೆಚ್ಚು ಪ್ರವಾಸಿಗರ ನರಮೇಧ ನಡೆಸಿದ ಉಗ್ರರಿಗೆ ಗಲ್ಲುಶಿಕ್ಷೆ ಆಗಬೇಕು. ಈ ಘಟನೆ ಅತ್ಯಂತ ನೋವು ತರಲಿದ್ದು, ಮೃತರ ಕುಟುಂಬಕ್ಕೆ ದುಃಖ ಭರಿಸುವ ಶಕ್ತಿಯನ್ನು ಭಗವಂತ ನೀಡಬೇಕು ಎಂದು ಎಸ್‌ಡಿಪಿಐ ಪ್ರಾರ್ಥನೆ ಸಲ್ಲಿಸಲಿದೆ.

ಇದೊಂದು ಅತ್ಯಂತ ಖಂಡನೀಯ ಘಟನೆಯಾಗಿದೆ.. ಕಳೆದ 14 ವರ್ಷಗಳಿಂದ ದೇಶದಲ್ಲಿ ಉಗ್ರರ ಅಟ್ಟಹಾಸ ಮಿತಿ ಮೀರುತ್ತಿದೆ. ದೇಶದಲ್ಲಿ ಭದ್ರತೆಯೇ ಇಲ್ಲದಂತಾಗಿದೆ. ಈ ಘಟನೆಗೆ ಕೇಂದ್ರ ಸರ್ಕಾರದ ಭದ್ರತಾ ಲೋಪವೇ ಕಾರಣ. ಜಾತಿ–ಧರ್ಮಗಳ ನಡುವೆ ವಿಷ ಬೀಜ ಬಿತ್ತುವ ಮೂಲಕ ದೇಶದಲ್ಲಿ ಅಶಾಂತಿ ವಾತಾವರಣ ಸೃಷ್ಟಿಸಲಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು. ಎಸ್‌ಡಿಪಿಐ ಜಿಲ್ಲಾ ಉಪಾಧ್ಯಕ್ಷರಾದ ಸಫಿ, ಎಸ್.ಸ್ವಾಮಿ, ಫಿರ್ದೌಸ್, ಕಾರ್ಯದರ್ಶಿ ಸೌಮ್ಯ, ಖಜಾಂಚಿ ಮನ್ಸೂರ್ ಮತ್ತಿತರರಿದ್ದರು.

ಭಾರತದ ಪ್ರತೀಕಾರಕ್ಕೆ ಹೆದರಿ ಗಡಿಯುದ್ದಕ್ಕೂ ಫೈಟರ್ ಜೆಟ್‌ಗಳ ಹಾರಿಸಿದ ಪಾಕ್

ಇಸ್ಲಾಮಾಬಾದ್, ಏ.23– ಪಹಲ್ಗಾಮ್‌ನಲ್ಲಿ ನಡೆದ ಭೀಕರ ಭಯೋತ್ಪಾದಕ ದಾಳಿಯ ನಂತರ, ಗಡಿಯ ಬಳಿ ಪಾಕಿಸ್ತಾನದ ಅನುಮಾನಾಸ್ಪದ ಮಿಲಿಟರಿ ಚಟುವಟಿಕೆಗಳ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ಬಿತ್ತರವಾಗುತ್ತಿದೆ. ಪಾಕಿಸ್ತಾನ ಪ್ರಮುಖ ವಿಮಾನಗಳ ಅಸಾಮಾನ್ಯ ಸಂಚಾರವನ್ನು ತೋರಿಸುವ ವಿಮಾನ ಮೇಲ್ವಿಚಾರಣಾ ವೆಬ್‌ಸೈಟ್ Flightradar24ನ ಸ್ಕ್ರೀನ್‌ಶಾಟ್‌ಗಳನ್ನು ಮೈಕ್ರೋಬ್ಲಾಗಿಂಗ್ ಸೈಟ್ ಎಕ್ಸ್‌ನಲ್ಲಿ ವೈರಲ್ ಆಗುತ್ತಿದೆ ಕರಾಚಿ ಮೂಲದ ದಕ್ಷಿಣ ವಾಯುಪಡೆಯ ಕಮಾಂಡ್‌ನಿಂದ ಹಲವಾರು ಪಿಎಎಫ್ ವಿಮಾನಗಳು ಲಾಹೋರ್ ಮತ್ತು ರಾವಲ್ಪಿಂಡಿ ಬಳಿಯ ವಾಯುನೆಲೆಗಳಲ್ಲಿ ಹಾರಾಡಿವೆ.

ಮೈಸೂರು ಒಡೆಯರ್ ಸಾಮಾಜಿಕ ಪರಿವರ್ತನೆ, ಪ್ರಗತಿ ಪ್ರವರ್ತಕರು

ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್ ಅಭಿಪ್ರಾಯ



ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜು ನವಜ್ಯೋತಿ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ 'ಮುಮ್ಮಡಿ ಕೃಷ್ಣರಾಜ ಒಡೆಯರ ಸಾಂಸ್ಕೃತಿಕ ಕೊಡುಗೆಗಳು' ಕುರಿತ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಉದ್ಘಾಟಿಸಿದರು.

ಮೈಸೂರು, ಏ.23(ಜಿಎ)–ಮೈಸೂರು ಒಡೆಯರ್ ಸಾಮಾಜಿಕ ಪರಿವರ್ತನೆ ಮತ್ತು ಪ್ರಗತಿಯ ಪ್ರವರ್ತಕರಾಗಿದ್ದರು ಎಂದು ಮೈಸೂರು ವಿಶ್ವ ವಿದ್ಯಾ ನಿಲಯದ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ತಿಳಿಸಿದರು.

ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜು ನವ ಜ್ಯೋತಿ ಸಭಾಂಗಣದಲ್ಲಿ ಕಾಲೇಜಿನ ಇತಿ ಹಾಸ ವಿಭಾಗ ಹಾಗೂ ಮೈಸೂರು ವಿಶ್ವ ವಿದ್ಯಾನಿಲಯದ ಅಂಗಸಂಸ್ಥೆಯಾದ ಪ್ರಾಚ್ಯ ವಿದ್ಯಾ ಸಂಶೋಧನಾಲಯ ಸಹ ಯೋಗದೊಂದಿಗೆ 'ಮುಮ್ಮಡಿ ಕೃಷ್ಣರಾಜ ಒಡೆಯರ ಸಾಂಸ್ಕೃತಿಕ ಕೊಡುಗೆಗಳು' ಕುರಿತ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದರು.

ಮನುಷ್ಯ ಬದಲಾವಣೆಯಾಗಬೇಕಿದ್ದಲ್ಲಿ ಶಿಕ್ಷಣ ಅಗತ್ಯ ಎನ್ನುವುದನ್ನು ಮನಗಂಡ ಮುಮ್ಮಡಿ ಕೃಷ್ಣರಾಜ ಒಡೆಯರು ಶಿಕ್ಷಣಕ್ಕೆ ಆದ್ಯತೆ ನೀಡಿದರು. ಸಾಹಿತ್ಯ ಮತ್ತು ಚಿತ್ರಕಲೆಯಲ್ಲಿ ಅಪಾರ ಆಸಕ್ತಿ ಹೊಂದಿದ್ದ ಅರಸರು ಕನ್ನಡ ಮತ್ತು ಸಂಸ್ಕೃತ ಭಾಷೆ ಒಳಗೊಂಡಂತೆ ಐವತ್ತೆಂಟು ಕೃತಿಗಳನ್ನು ರಚಿಸಿದ್ದಾರೆ. ಮೈಸೂರು ರಾಜರು ಉತ್ತಮ ಪಾಂಡಿತ್ಯ ಪಡೆದಿದ್ದರು. ಇದು ಇಂದಿನ ರಾಜಕಾರಣಿಗಳಿಗೆ ಆದರ್ಶವಾಗಬೇಕು ಎಂದು ತಿಳಿಸಿದರು. ಹಿಂದೆ ರಾಜನಾದವರು ಉತ್ತಮವಾದ ಪಾಂಡಿತ್ಯವನ್ನು ಪಡೆಯುತ್ತಿದ್ದರು. 18ನೇ ವಯಸ್ಸಿಗೆ ರಾಜ್ಯವನ್ನು ಆಳುತ್ತಿದ್ದರು ಎಂದರೆ ಅವರ ಶಿಕ್ಷಣದ ಗುಣಮಟ್ಟದ ಬಗ್ಗೆ ಯೋಚಿಸಬೇಕು. ಮೂರನೇ ಕೃಷ್ಣರಾಜ ಒಡೆಯರ್ ಅವರ ಕಾಲದಲ್ಲಿ ಆದಂತಹ ಜನಪರ ಕೆಲಸಗಳು ಯಾವ ಪ್ರಾಂತ್ಯದಲ್ಲೂ ಆಗಿರಲಿಲ್ಲ.ಉತ್ತಮ ಕವಿಯಾಗಿದ್ದ ಅವರು 50ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದರು ಎಂಬುದು ದಾಖಲಾಗಿದೆ ಎಂದು ತಿಳಿಸಿದರು.

3ನೇ ಕೃಷ್ಣರಾಜ ಒಡೆಯರ್ ಅವರು ಚಿತ್ರಕಲೆಯಲ್ಲೂ ಪ್ರಾವೀಣ್ಯತೆ ಹೊಂದಿದ್ದರು. ಇಂದು ದಾಖಲೆಗಳನ್ನು ಸಂಗ್ರಹಿಸಲು ಕಂಪ್ಯೂಟರ್, ಪೆನ್, ಪುಸ್ತಕಗಳಿವೆ. ಆದರೆ ಹಿಂದೆ ರಾಜರು ಅನೇಕ ಸಂಗತಿ ಗಳನ್ನು ತಾಳೆಗರಿಗಳ ಮೇಲೆ ಬರೆ ಯುತ್ತಿದ್ದರು. ಇಂತಹ ಅಮೂಲ್ಯವಾದ ದಾಖಲೆಗಳನ್ನು ಓರಿಯಂಟಲ್ ರಿಸರ್ಚ್ ಇನ್ಸ್‌ಟಿಟ್ಯೂಟ್ ಸಂಗ್ರಹಿಸಿದೆ. ಇಂತಹ ಕಡೆ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಹೋಗಿ ಇತಿಹಾಸವನ್ನು ತಿಳಿದುಕೊಳ್ಳ ಬೇಕು ಎಂದರು.

ಪ್ರಾಚ್ಯ ವಿದ್ಯಾ ಸಂಶೋಧನಾಲಯದ ನಿರ್ದೇಶಕ ಡಾ.ಡಿ.ಪಿ.ಮಧುಸೂಧನಾ ಚಾರ್ಯ ಮಾತನಾಡಿ, ಮೈಸೂರು ಅರಸರ ಕೊಡುಗೆ ಸದಾ ಸ್ಮರಣೀಯವಾಗಿದೆ. ಅದರಲ್ಲೂ ಶ್ರೀ ಮುಮ್ಮಡಿ ಕೃಷ್ಣ ರಾಜ ಒಡೆಯರು ಲೋಕಕಲ್ಯಾಣ ಕಾರ್ಯ ಮಾಡುವಲ್ಲಿ ಅಗ್ರಗಣ್ಯರಾಗಿ ದ್ದಾರೆ. ಇವರು ಪ್ರಜೆಗಳ ಕಷ್ಟಗಳಿಗೆ ತಕ್ಷಣ ಸ್ಪಂದಿಸುವ ಗುಣವುಳ್ಳವರಾಗಿದ್ದರು. ಯುದ್ಧ ಕಲೆ, ನ್ಯಾಯ ನೀತಿ, ಗಣಿತಶಾಸ್ತ್ರ ಕುರಿತಂತೆ ಅಪಾರ ಪಾಂಡಿತ್ಯ ಪಡೆದಿದ್ದರು. ಕರ್ನಾಟಕವಲ್ಲದೆ ಆಂಧ್ರಪ್ರದೇಶ, ಮಹಾರಾಷ್ಟ್ರ, ತಮಿಳುನಾಡುಗಳಲ್ಲೂ ಅಭಿ ವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ. ನಾಡಿನ ಜನರು ಇವರನ್ನು ರಾಜರ್ಷಿ ಎಂದು ಗೌರವಿಸಿದ್ದಾರೆ ಎಂದು ತಿಳಿಸಿದ್ದಾರೆ.

ಪ್ರಾಚ್ಯ ವಿದ್ಯಾ ಸಂಶೋಧನಾಲಯ ದಲ್ಲಿ ಸುಮಾರು 70 ಸಾವಿರಕ್ಕೂ ಹೆಚ್ಚು ತಾಳೆಗರಿ ಗ್ರಂಥಗಳನ್ನು ಸಂಗ್ರಹಿಸಿದೆ. ಅದರಲ್ಲಿ ಅನೇಕ ಪ್ರಮುಖ ರಾಜರು ಸೇರಿದಂತೆ ಮುಮ್ಮಡಿ ಕೃಷ್ಣರಾಜ ಒಡೆ ಯರ್ ರಚಿಸಿರುವ ಶ್ರೀತತ್ವನಿಧಿ ಗ್ರಂಥವೂ ಸಹ ಸಂಗ್ರಹಿಸಲಾಗಿದೆ. ಶ್ರೀತತ್ವನಿಧಿಯಲ್ಲಿ ಐದು ಭಾಗಗಳನ್ನು ಪ್ರಕಟಿಸಲಾಗಿದ್ದು, ಇನ್ನುಳಿದ 4 ಭಾಗಗಳನ್ನು 6 ತಿಂಗಳೊ ಳಗಾಗಿ ಪ್ರಕಟಿಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕೆ.ಎಲ್.ರೇವಣ್ಣ ಸ್ವಾಮಿ, ಪ್ರಾಚಾರ್ಯ ಡಾ.ರೇಚಣ್ಣ, ನಿವೃತ್ತ ತಹಸಿಲ್ದಾರ್ ರಂಗನಾಥ್ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

24.04.2025 ಗುರುವಾರ, ಮಳೆ ನಕ್ಷತ್ರ: ಅಶ್ವಿನಿ 13.04.2025 ರಿಂದ 26.04.2025 ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಶತಭಿಷ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಯಕೃತ್ತಿನ ಸಮಸ್ಯೆಗೆ ಚಿಕಿತ್ಸಾ ಶಿಬಿರ, ಕುತ್ತಿಗೆ ಮತ್ತು ಬೆನ್ನು ನೋವಿಗೆ ಆಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಮಕ್ಕಳ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಚರ್ಮರೋಗ ಕುರಿತು ಚಿಕಿತ್ಸೆ ಹಾಗೂ ಪುನಶ್ಚೇತನ (ರೆಜುವಿನೇಷನ್) ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಆಸ್ಪತ್ರೆಯ ಶಾಲಾಕ್ಯತಂತ್ರ ಸ್ನಾತಕೋತ್ತರ ವಿಭಾಗದಿಂದ ನೇತ್ರ, ಕಿವಿ, ಮೂಗು, ಗಂಟಲು ಮತ್ತು ಶಿರೋರೋಗಗಳ ತಪಾಸಣೆ ಹಾಗೂ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಕಾನೂನು ಮಹಾವಿದ್ಯಾಲಯ, ಕುವೆಂಪುನಗರ, ಬೆಳಗ್ಗೆ 10 ರಿಂದ.

■ **ಪ್ರೀತಿ ಕ್ಯಾನ್ಸರ್ ಸೆಂಟರ್ :** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ.

■ **ಡಾ. ರಾಜ್‌ಕುಮಾರ್ ಕಲಾ ಸೇವಾ ಟ್ರಸ್ಟ್ :** ಡಾ. ರಾಜ್ ಹುಟ್ಟುಹಬ್ಬದ ಅಂಗವಾಗಿ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಕರ್ನಾಟಕ ಸುಗಮ ಸಂಗೀತ ಪರಿಷತ್ ಅಧ್ಯಕ್ಷ ನಾಗರಾಜ್ ವಿ. ಭೈರಿ, ಹಿರಿಯ ಸಮಾಜ ಸೇವಕ ಡಾ. ರಘುರಾಂ ವಾಜಪೇಯಿ, ಮೈಸೂರು ಜಿಲ್ಲಾ ಕುಸ್ತಿ ಸಂಘದ ಅಧ್ಯಕ್ಷ ಪೈ. ಎನ್. ಚಂದ್ರಶೇಖರ್, ಉದಯಕುಮಾರ್ ಅವರಿಗೆ ಡಾ. ರಾಜ್ ಕಲಾ ಸೇವಾರತ್ನ ಪ್ರಶಸ್ತಿ ಪ್ರದಾನ ಸಮಾರಂಭ, ಉಪಸ್ಥಿತರು : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸ್ಥಳ: ಮೈಸೂರು ಜಿಲ್ಲಾ ಪತ್ರಕರ್ತರ ಭವನ, ಬೆಳಗ್ಗೆ 10.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಹೆಣ್ಣು ಮನಸು ಮಾಡಿದರೆ ಸಾಧಕ ಮಹಿಳೆಯರ ಪರಿಚಯ ಮಾಲಿಕೆ, ಪ್ರಸ್ತುತಿ: ಪ್ರೊ.ಸಿ. ನಾಗಣ್ಣ, ನಿರ್ಮಾಣ–ಜಾಂಪಣ್ಣ ಆಶೀಹಾಳ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, 8.35 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ :ಹರಿಣಿ. ಆರ್ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಕಾಡಿನಲ್ಲಿನ ಕಥೆಗಳು. ಪ್ರಸ್ತುತಿ : ಜಿ. ಶಾಂತಕುಮಾರ್


ಮಧ್ಯಾಹ್ನ: 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಕನ್ನಡ ಚಿತ್ರಗೀತೆಗಳು, 4.00 ಜನಪದ ಸಂಗೀತ : ಹೆಚ್.ಸಿ. ಶಿವಬುದ್ಧಿ ಮತ್ತು ಸಂಗಡಿಗರಿಂದ ಜನಪದ ಗೀತೆಗಳು, 4.30 ಕನ್ನಡ ಭಾರತಿ, 6.50 ಕೃಷಿರಂಗ–ಕಿಸಾನ್ ವಾಣಿ, ಪ್ರಾಯೋಜಕರು: ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ನಂ ಕಂಪನಿ ರೈತ ಉತ್ಪಾದಕ ಸಂಸ್ಥೆಗಳ ಸಬಲೀಕರಣ ಕುರಿತ ಬಾನುಲಿ ಸರಣಿ ಕರಬೂಜ ಬೇಸಾಯ ಹಾಗೂ ಮಾರಾಟ ಈ ಕುರಿತು ಯಳಂದೂರು ತಾಲೂಕು ಆಗರ ಗ್ರಾಮದ ಮಾಕಮ್ಮ ರೈತ ಉತ್ಪಾದಕ ಕಂಪನಿಯ ಸದಸ್ಯರಾದ ಶಿವಮಲ್ಲು ಅವರೊಂದಿಗೆ ಸಂದರ್ಶನ. ಸಂದರ್ಶಕರು : ಎನ್. ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ : ಕುನ್ನುಕುಡಿ ವೈದ್ಯನಾಥನ್– ವೈಯೋಲಿನ್ ವಾದನ, 10.00 ನಾಟಕ–ಕಾಶೀಯಾತ್ರೆ, ರಚನೆ–ಮಂಜುನಾಥ್ ಬೆಳಕೆರೆ, ನಿರ್ಮಾಣ– ಉಮೇಶ್. ಎಸ್. ಎಸ್., 10.30 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು

■ **ಬಿಎಸ್‌ಎಸ್ ವಿದ್ಯೋದಯ :** ಭಗಿನಿ ಸಂಗೀತೋತ್ಸವ, ವಿದ್ವಾನ್ ಜಿ. ರವಿಕಿರಣ್ ಮತ್ತು ತಂಡದಿಂದ ಗಾಯನ, ಸ್ಥಳ: ಶಾಲಾ ಸಭಾಂಗಣ, ಕೃಷ್ಣಮೂರ್ತಿಪುರಂ, ಸಂಜೆ 6 ರಿಂದ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀ ಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಗಾನಭಾರತೀ :** ತರುಣಭಾರತಿ ಕಾರ್ಯಕ್ರಮ, ಸಂಜೆ 6 ರಿಂದ ಕು. ಶ್ರೇಯಾ ಭರತ್ ಅವರಿಂದ ಕೊಳಲು, ವಿದ್ವಾನ್ ಶುಭಾಂಗ್ ಸಾಮಗ–ಮೃದಂಗ, ವಿದ್ವಾನ್ ತುಮಕೂರು ಯಶಸ್ವಿ–ಪಿಟೀಲು; ಸಂಜೆ 7.15 ರಿಂದ ಕು. ಸುಹಾಸ್ ಮುರಳಿ–ಗಾಯನ, ವಿದ್ವಾನ್ ಶುಭಾಂಗ್–ಮೃದಂಗ, ವಿದ್ವಾನ್ ತುಮಕೂರು ಯಶಸ್ವಿ–ಪಿಟೀಲು, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ.

■ **ಯುವರಾಜ ಕಾಲೇಜು :** ಕಾಲೇಜು ವಾರ್ಷಿಕೋತ್ಸವ, ಉದ್ಘಾಟನೆ : ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ಎಂ.ಕೆ. ಸವಿತಾ, ಮುಖ್ಯ ಅತಿಥಿಗಳು : ಗಾಯಕ ರಘು ದೀಕ್ಷಿತ್, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಪ್ರೊ. ಎಸ್. ಮಹದೇವಮೂರ್ತಿ, ಸ್ಥಳ: ಶ್ರೀ ಜಯಚಾಮರಾಜೇಂದ್ರ ಒಡೆಯರ್ ಸಭಾಂಗಣ, ಮಧ್ಯಾಹ್ನ 2.30 ರಿಂದ.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಏಪ್ರಿಲ್ 24 ಗುರುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 9 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4



ಸುರೇಶ್‌ಗೆ ಮುಕ್ತಿ

ಪತ್ನಿ ಜೀವಂತವಿದ್ದರೂ ಹತ್ಯೆಗೈದ ಆರೋಪದಡಿ ಜೈಲು ಶಿಕ್ಷೆ; ಬಿಡುಗಡೆಯಾದರೂ ಕೋರ್ಟ್‌ಗೆ ಅಲೆಯುತ್ತಿದ್ದ ಆದಿವಾಸಿ ಅಮಾಯಕ; ಈತನ ಮೇಲಿನ ಆಪಾದನೆಯ ಎಲ್ಲಾ ದಾಖಲೆ ರದ್ದುಪಡಿಸಲು ಪೊಲೀಸರಿಗೆ ಸೂಚನೆ; ಸಂತ್ರಸ್ತ ಸುರೇಶ್‌ಗೆ ಲಕ್ಷ ರೂ. ಪರಿಹಾರ ನೀಡಲು ಗೃಹ ಇಲಾಖೆಗೆ ಸೂಚನೆ

ಮೈಸೂರು,ಏ.23(ಬಿಎಲ್‌ಯು)– ಪತ್ನಿಯನ್ನು ಕೊಲೆ ಮಾಡಿದ್ದಾನೆಂಬ ಪೊಲೀಸರ ನಿರ್ಧಾರದಿಂದಾಗಿ 2 ವರ್ಷ ಜೈಲು ಶಿಕ್ಷೆ ಅನುಭವಿಸಿ, ಕಳೆದ 4 ವರ್ಷದಿಂದ ಆರೋಪಿತನಾಗಿ ನ್ಯಾಯಾಲಯಕ್ಕೆ ಅಲೆಯುತ್ತಿದ್ದ ಕುಶಾಲನಗರದ ಅಮಾಯಕ ಸುರೇಶ್ ಕೊನೆಗೂ ಆಪಾದನೆಯಿಂದ ಮುಕ್ತಿ ಹೊಂದಿದ್ದಾನೆ. ಇಂದು (ಏ.23) ಮೈಸೂರಿನ 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಗುರುರಾಜ ಸೋಮಕ್ಕಳವರ್, ಸುರೇಶ್‌ನನ್ನು ದೋಷಮುಕ್ತನನ್ನಾಗಿ ಮಾಡಿ ಗೌರವಯುತವಾಗಿ ಪ್ರಕರಣದಿಂದ ಬಿಡುಗಡೆ ಮಾಡಿರುವುದಾಗಿ ಘೋಷಿಸಿದ್ದಾರೆ.

ಅಲ್ಲದೇ, ಕೊಲೆ ಆರೋಪಿ ಎಂದು ಬೆಟ್ಟದಪುರ ಠಾಣೆಯಲ್ಲಿ ಸುರೇಶ್ ವಿರುದ್ಧ ದಾಖಲಾಗಿರುವ ಪ್ರಕರಣವನ್ನು ರದ್ದುಪಡಿಸಿರುವುದಲ್ಲದೇ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲಾತಿಗಳಲ್ಲಿ ಉಲ್ಲೇಖವಾಗಿರುವ ಸುರೇಶ್ ಹೆಸರನ್ನು ತೆಗೆದು ಹಾಕಬೇಕು ಎಂದು ಬೆಟ್ಟದಪುರ ಠಾಣೆಯ ಎಸ್‌ಹೆಚ್‌ಓಗೆ ನಿರ್ದೇಶನ ನೀಡಿದ್ದಾರೆ.

ಬೆಟ್ಟದಪುರ ಠಾಣೆ ವ್ಯಾಪ್ತಿಯಲ್ಲಿ ದೊರೆತಿದ್ದ ಅಸ್ಥಿಪಂಜರದ ಸಂಬಂಧ ತನಿಖೆ ನಡೆಸಿ ನ್ಯಾಯಾಲಯಕ್ಕೆ ವರದಿ ಸಲ್ಲಿಸಬೇಕೆಂದು ಮೈಸೂರು ಜಿಲ್ಲಾ ಎಸ್ಪಿಯವರಿಗೆ ನ್ಯಾಯಾಧೀಶರು ನಿರ್ದೇಶನ ನೀಡಿದ್ದಾರೆ. ಪೊಲೀಸರು ನಡೆಸಿದ ತನಿಖೆಯ ದೋಷದಿಂದಾಗಿ 2 ವರ್ಷ ಜೈಲು ಶಿಕ್ಷೆ ಅನುಭವಿಸಿದ್ದಲ್ಲದೇ, ಸುಮಾರು 4 ವರ್ಷ ಆಪಾದಿತನಾಗಿ ಬಿಂಬಿತನಾಗಿ ನ್ಯಾಯಾಲಯಕ್ಕೆ ಅಲೆದಾಡಿದ ಸುರೇಶ್‌ಗೆ 1 ಲಕ್ಷ ರೂ. ಪರಿಹಾರ ನೀಡಬೇಕು ಎಂದು ರಾಜ್ಯ ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರಿಗೆ ನ್ಯಾಯಾಧೀಶರು ನಿರ್ದೇಶನ ನೀಡಿದ್ದಾರೆ.



ಕುಶಾಲನಗರದ ಸುರೇಶ್

ತೀವ್ರ ಕುತೂಹಲ ಕೆರಳಿಸಿದ್ದ ಈ ಪ್ರಕರಣದ ತೀರ್ಪು ಇಂದು ಪ್ರಕಟವಾಯಿತು. ನ್ಯಾಯಾಲಯದಲ್ಲಿ ವಕೀಲರು ಕಿಕ್ಕಿರಿದು ತುಂಬಿದ್ದರು. ಹಿರಿಯ ವಕೀಲರು ಮಾತ್ರವಲ್ಲದೆ, ಕಿರಿಯ ವಕೀಲರು, ಕಾನೂನು ವಿದ್ಯಾರ್ಥಿಗಳು, ಮಾಧ್ಯಮ ಪ್ರತಿನಿಧಿಗಳು ಕುತೂಹಲದಿಂದ ■ 6ನೇ ಪುಟಕ್ಕೆ

ಪ್ರಕರಣದ ತನಿಖಾ ತಂಡದ ವಿರುದ್ಧ ಇಲಾಖಾ ತನಿಖೆ; ಐಜಿಪಿಗೆ ಕೋರ್ಟ್ ನಿರ್ದೇಶನ

ಮೈಸೂರು: ಬೆಟ್ಟದಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 2020ರಲ್ಲಿ ಪತ್ತೆಯಾಗಿದ್ದ ಅಸ್ಥಿಪಂಜರಕ್ಕೆ ಸಂಬಂಧಿಸಿದಂತೆ ದಾಖಲಾಗಿದ್ದ ಯುಡಿಆರ್ ಪ್ರಕರಣದ ತನಿಖಾ ತಂಡದ ಅಂದಿನ ಸರ್ಕಲ್ ಇನ್‌ಸ್ಪೆಕ್ಟರ್ ಬಿ.ಜಿ.ಪ್ರಕಾಶ್, ಅಂದಿನ ಪ್ರೊಬೇಷನರಿ ಐಪಿಎಸ್ ಅಧಿಕಾರಿ ಜಿತೇಂದ್ರಕುಮಾರ್, ಸಬ್‌ಇನ್‌ಸ್ಪೆಕ್ಟರ್ ಮಹೇಶ್‌ಕುಮಾರ್, ಸಿಬ್ಬಂದಿಗಳಾದ ಪ್ರಕಾಶ್ ಎಂ.ಎತ್ತಿನಮನಿ ವಿರುದ್ಧ ಇಲಾಖಾ ತನಿಖೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ದಕ್ಷಿಣ ವಲಯ ಐಜಿಪಿಯವರಿಗೆ ನ್ಯಾಯಾಧೀಶರು ನಿರ್ದೇಶನ ನೀಡಿದ್ದಾರೆ.

ನ್ಯಾಯಾಧೀಶರ ನಿರ್ದೇಶನದಂತೆ ಈ ಅಧಿಕಾರಿಗಳ ವಿರುದ್ಧ ಇಲಾಖಾ ತನಿಖೆ ನಡೆಯಲಿದೆ. ತನಿಖೆ ವೇಳೆ ಅಧಿಕಾರಿಗಳನ್ನು ಅಮಾನತುಪಡಿಸುವುದು ದಕ್ಷಿಣ ವಲಯ ಐಜಿಪಿಯವರ ವಿವೇಚನೆಗೆ ಬಿಟ್ಟ ವಿಚಾರವಾಗಿದೆ. ಏಕೆಂದರೆ ನ್ಯಾಯಾಧೀಶರು ಇಲಾಖಾ ತನಿಖೆಗೆ ನಿರ್ದೇಶನ ನೀಡಿದ್ದಾರೆಯೇ ಹೊರತು, ಅಧಿಕಾರಿಗಳ ಅಮಾನತು ಬಗ್ಗೆ ಉಲ್ಲೇಖಿಸಿಲ್ಲ ಎಂಬುದು ಗಮನಾರ್ಹ.

ತನಿಖಾಧಿಕಾರಿಯೇ ವಿಚಾರಣೆ ಎದುರಿಸಬೇಕಾದ ದುರ್ಗತಿ!

ಮೈಸೂರು, ಏ.23– ಅಮಾಯಕ ಕುಶಾಲನಗರದ ಆದಿವಾಸಿ ಸುರೇಶ್‌ನನ್ನು ಪತ್ನಿ ಹತ್ಯೆ ಪ್ರಕರಣದಲ್ಲಿ ಬಂಧಿಸಿ, ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸುವ ಮೂಲಕ ಆತ ಎರಡು ವರ್ಷ ಜೈಲು ವಾಸ ಅನುಭವಿಸಿ, ಸುಮಾರು ನಾಲ್ಕು ವರ್ಷ ಪತ್ನಿ ಹತ್ಯೆ ಆರೋಪಿಯಾಗಿ ನ್ಯಾಯಾಲಯಕ್ಕೆ ಅಲೆಯಲು ಕಾರಣರಾದ ಪಿರಿಯಾಪಟ್ಟಣದ ಹಿಂದಿನ ಸರ್ಕಲ್ ಇನ್‌ಸ್ಪೆಕ್ಟರ್ (ಹಾಲಿ ಕುಶಾಲನಗರ ಟೌನ್ ಪೊಲೀಸ್ ಇನ್‌ಸ್ಪೆಕ್ಟರ್) ಬಿ.ಜಿ. ಪ್ರಕಾಶ್, ಇದೀಗ ತಾವೇ ಕ್ರಿಮಿನಲ್ ಪ್ರಕರಣದ ಆರೋಪಿಯಾಗಿ ನ್ಯಾಯಾಲಯದ ಮುಂದೆ ವಿಚಾರಣೆ ಎದುರಿಸಬೇಕಾದ ಪರಿಸ್ಥಿತಿ ಬಂದೊದಗಿದೆ.

ಸುರೇಶ್ ಪ್ರಕರಣದಲ್ಲಿ ಇಂದು ತೀರ್ಪು ನೀಡಿದ ಮೈಸೂರಿನ 5ನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಗುರುರಾಜ ಸೋಮಕ್ಕಳವರ್, ಬೆಟ್ಟದಪುರ ಠಾಣೆಯಲ್ಲಿ 2020ರಲ್ಲಿ ಅಸ್ಥಿಪಂಜರ ದೊರೆತ ಪ್ರಕರಣದ ತನಿಖಾಧಿಕಾರಿಯಾಗಿ, ಅಮಾಯಕ ಸುರೇಶ್ ವಿರುದ್ಧ ಸುಳ್ಳು ಸಾಕ್ಷಿಗಳನ್ನು ಸೃಷ್ಟಿಸಿ, ■ 6ನೇ ಪುಟಕ್ಕೆ

“ ನನ್ನ ಕಕ್ಷಿದಾರ ಸುರೇಶ್ ಅಮಾಯಕನಾಗಿದ್ದು, ಆತನಿಗೆ ನ್ಯಾಯ ದೊರೆತಿದೆ. ಆದರೂ, ಅದರಲ್ಲಿ ನನಗೆ ಸಂಪೂರ್ಣ ತೃಪ್ತಿ ಇಲ್ಲ. ಈ ಪ್ರಕರಣದಲ್ಲಿ ಪೊಲೀಸ್ ಇನ್‌ಸ್ಪೆಕ್ಟರ್ ಬಿ.ಜಿ.ಪ್ರಕಾಶ್ ವಿರುದ್ಧ ಮಾತ್ರ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ನ್ಯಾಯಾಧೀಶರು ಆದೇಶಿಸಿದ್ದಾರೆ. ಆದರೆ, ಇಡೀ ತನಿಖಾ ತಂಡದ ವಿರುದ್ಧವೇ ಕ್ರಿಮಿನಲ್ ಪ್ರಕರಣ ದಾಖಲಾಗಬೇಕಾಗಿದೆ. ಸುರೇಶ್‌ಗೆ ಒಂದು ಲಕ್ಷ ರೂ. ಪರಿಹಾರ ನಿಗದಿಪಡಿಸಿರುವುದು ಸರಿಯಲ್ಲ. ಆತ 2 ವರ್ಷ ಅನವಶ್ಯಕವಾಗಿ ಜೈಲಿನಲ್ಲಿದ್ದ, 4 ವರ್ಷ ಆರೋಪಿಯಾಗಿ ನ್ಯಾಯಾಲಯಕ್ಕೆ ಅಲೆದಾಡಿದ್ದಾನೆ. ಇದರಿಂದಾಗಿ ಆತನ ಕೌಟುಂಬಿಕ ಜೀವನದ ಮೇಲೆ ತೀವ್ರ ತರಹದ ಪರಿಣಾಮ ಬೀರಿದೆ. ಹೀಗಾಗಿ ಆತನಿಗೆ ಕನಿಷ್ಠ 2 ಕೋಟಿ ರೂ. ಪರಿಹಾರ ನೀಡಬೇಕಾಗಿದೆ. ಅಲ್ಲದೇ, ಮಲ್ಲಿಗೆ ನಾಪತ್ತೆ ಪ್ರಕರಣ ದಾಖಲಿಸಿಕೊಂಡಿದ್ದ ಕುಶಾಲನಗರ ಗ್ರಾಮಾಂತರ ಠಾಣೆ ಪೊಲೀಸರು ಆಕೆಯ ಪತ್ತೆಗಾಗಿ ಯಾವುದೇ ರೀತಿಯ ಕ್ರಮ ವಹಿಸದೇ ನಿರ್ಲಕ್ಷ್ಯ ತೋರಿರುವುದರಿಂದ ಅವರ ವಿರುದ್ಧವೂ ಕ್ರಮ ಜರುಗಿಸಬೇಕಾಗಿದೆ. ಈ ಎಲ್ಲಾ ವಿಚಾರಗಳನ್ನು ಇಟ್ಟುಕೊಂಡು ಹೈಕೋರ್ಟ್ ಮೊರೆ ಹೋಗುತ್ತೇವೆ. **–ಪಾಂಡು ಪೂಜಾರಿ, ಸುರೇಶ್ ಪರ ವಕೀಲ**



ಪಾಂಡು ಪೂಜಾರಿ

ಇಂದಿನಿಂದ ದ್ವಿತೀಯ ಪಿಯುಸಿ ಪರೀಕ್ಷೆ–2

ಬೆಂಗಳೂರು: ನಾಳೆ (ಏ.24)ಯಿಂದ ಮೇ 8ರವರೆಗೆ ದ್ವಿತೀಯ ಪಿಯುಸಿ ಪರೀಕ್ಷೆ–2 ನಡೆಯಲಿದೆ. ಈಗಾಗಲೇ ದ್ವಿತೀಯ ಪಿಯುಸಿ ಪರೀಕ್ಷೆಯನ್ನು ಯಶಸ್ವಿಯಾಗಿ ನಿರ್ವಹಿಸಲಾಗಿದೆ. ಅದೇ ರೀತಿಯಾಗಿ ದ್ವಿತೀಯ ಪಿಯುಸಿ ಪರೀಕ್ಷೆ–2ನ್ನು ಸಹ ಗಂಭೀರವಾಗಿ ಪರಿಗಣಿಸಿ, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ ನೀಡಿರುವ ಮಾರ್ಗಸೂಚಿಗಳನ್ನು ಎಲ್ಲ ಹಂತದ ಅಧಿಕಾರಿಗಳು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಇಲಾಖೆ ಸೂಚನೆ ನೀಡಿದೆ. ಮುಕ್ತ ಹಾಗೂ ನ್ಯಾಯಸಮ್ಮತವಾಗಿ ಪರೀಕ್ಷಾ ಪಾವಿತ್ರ್ಯತೆ ಕಾಪಾಡಿ ಪರೀಕ್ಷಾ ಕಾರ್ಯವನ್ನು ಯಶಸ್ವಿಗೊಳಿಸಬೇಕು ಎಂದು ಸೂಚಿಸಲಾಗಿದೆ.

ನಿಮ್ಮನ್ನು ಪೀಸ್ ಪೀಸ್ ಮಾಡಿ ಫ್ರಿಡ್ಜ್‌ಗೆ ತುಂಬುತ್ತೇವೆ!

ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿಕೆಶಿಗೆ ಕೊಲೆ ಬೆದರಿಕೆ

ಬೆಂಗಳೂರು: ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕರ ಗುಂಡಿನ ದಾಳಿಗೆ ಇಡೀ ದೇಶವೇ ಬೆಚ್ಚಿಬಿದ್ದಿದೆ. ಇದರ ನಡುವೆಯೇ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿಕೆ ಶಿವಕುಮಾರ್ ಅವರಿಗೆ ಬೆದರಿಕೆ ಮೇಲ್ ಒಂದು ಬಂದಿದೆ ಸಿಂದಾರ್ ರಜಪೂತ್ ಎಂಬುವರ ಹೆಸರಿನಲ್ಲಿ ಬೆದರಿಕೆ ಮೇಲ್ ಬಂದಿದ್ದು, ನಿಮ್ಮಿಬ್ಬರನ್ನು ಕೊಲೆ ಮಾಡಿ, ಪೀಸ್ ಪೀಸ್ ಮಾಡಿ ಫ್ರಿಡ್ಜ್ ಹಾಗೂ ಟ್ರ್ಯಾಲಿ ಬ್ಯಾಗ್‌ಗೆ ತುಂಬ್ತೀನಿ ಎಂದು ಬರೆಯಲಾಗಿದೆ ಎಂಬ ಮಾಹಿತಿ ತಿಳಿದುಬಂದಿದೆ.

ಸಿಂದಾರ್ ರಜಪೂತ್ ಎಂಬುವರ ಹೆಸರಿನಲ್ಲಿ ಇ ಮೇಲ್ ಬಂದಿದೆ. ರಾಮಪುರ ಪ್ರಭಾಕರ್‌ಗೆ ಒಂದು ಕೋಟಿ ಸಾಲ ಕೊಟ್ಟಿದ್ದೇನೆ. ಆತ ಇದುವರೆಗೂ ಸಾಲ ವಾಪಸ್ ಕೊಟ್ಟಿಲ್ಲ. ಪ್ರಭಾಕರ್‌ಗೆ ಬೇಗ ಸಾಲ ವಾಪಸ್ ಕೊಡೋಕೆ ಹೇಳಿ. ಆತ ಹಣ ವಾಪಸ್ ಕೊಡದಿದ್ದರೆ ಪ್ರಭಾಕರ್‌ನ ಕೊಲೆ ಮಾಡ್ತೀನಿ. ನೀವು ಹಣ ಕೊಡಿಸಿಲ್ಲ ಅಂದ್ರೆ ನಿಮ್ಮನ್ನು ಕೊಲೆ ಮಾಡ್ತೀನಿ ಅಂತ ಇ–ಮೇಲ್ ಮಾಡಿದ್ದಾನೆ

ಲಾಭದ ಆಸೆಗೆ 68 ಲಕ್ಷ ಕಳೆದುಕೊಂಡ ವ್ಯಾಪಾರಿ

ಮೈಸೂರು,ಏ.23(ಪಿಎಂ)– ಹೂಡಿದ ಹಣಕ್ಕೆ ಮೂರು ಪಟ್ಟು ಲಾಭ ನೀಡುವುದಾಗಿ ಅಪರಿಚಿತನೊಬ್ಬ ಮೊಬೈಲ್ ಕರೆಯಲ್ಲಿ ಹೇಳಿದ್ದನ್ನು ನಂಬಿದ ವ್ಯಾಪಾರಿಯೊಬ್ಬರು ಆನ್‌ಲೈನ್ ಮೂಲಕ 68 ಲಕ್ಷಕ್ಕೂ ಅಧಿಕ ಹಣ ಪಾವತಿಸಿ ವಂಚನೆಗೆ ಒಳಗಾಗಿರುವ ಸಂಬಂಧ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಿನ ವಿವಿ ಮೊಹಲ್ಲಾದ ಕಾಳಿದಾಸ ರಸ್ತೆಯ ವ್ಯಾಪಾರಿಯೇ ವಂಚನೆಗೆ ಒಳಗಾದವರು.

ಪಹಲ್ಗಾಮ್ ಉಗ್ರರ ಪೈಶಾಚಿಕ ದಾಳಿಗೆ ತಕ್ಷಣದ ಪ್ರತೀಕಾರ; ಉಗ್ರರ ಪೋಷಕ ಪಾಕ್ ವಿರುದ್ಧ ಕಠಿಣ ರಾಜತಾಂತ್ರಿಕ ಕ್ರಮ

ಪಾಕ್‌ಗೆ ಭಾರತದ ಬಾಗಿಲು ಬಂದ್

■ ವೀಸಾ ತಕ್ಷಣದಿಂದಲೇ ಸ್ಥಗಿತ ■ ರಾಯಭಾರಿ ಕಚೇರಿ ಸಿಬ್ಬಂದಿ ದೇಶ ತೊರೆಯಲು ಸೂಚನೆ ■ ಪಾಕ್ ಪ್ರಜೆಗಳು ಸಹ ದೇಶ ಬಿಡಲು ಗಡುವು ■ ಸಿಂಧೂ ನದಿ ಒಪ್ಪಂದ ರದ್ದು ■ ಅಂತಿಮವಾಗಿ ಮಿಲಿಟರಿ ಕ್ರಮದ ಆಯ್ಕೆ ■ ಕೇಂದ್ರ ಸಂಪುಟ ಸಮಿತಿ ಮಹತ್ವದ ನಿರ್ಧಾರ

ನವದೆಹಲಿ, ಏ.23– ಭಾರತ ಮತ್ತು ಪಾಕಿಸ್ತಾನ ಗಡಿಯಲ್ಲಿರುವ ಅಟ್ಟಾರಿ ಚೆಕ್ ಪೋಸ್ಟ್ ಅನ್ನು ತಕ್ಷಣದಿಂದ ಮುಚ್ಚುವುದು, ಸಾರ್ಕ್ ವೀಸಾ ವಿನಾಯಿತಿ ಯೋಜನೆ ಪಾಕಿಸ್ತಾನದವರಿಗೆ ರದ್ದು, ರಾಯಭಾರ ಕಚೇರಿ ಸಿಬ್ಬಂದಿ ಹಂತ ಹಂತವಾಗಿ ಕಡಿತ ಸೇರಿದಂತೆ ಹಲವು ಕಠಿಣ ನಿರ್ಧಾರಗಳನ್ನು ಕೇಂದ್ರ ಸಂಪುಟ ಸಮಿತಿ ಬುಧವಾರ ತೆಗೆದುಕೊಂಡಿದೆ ಎಂದು ವಿದೇಶಾಂಗ ಕಾರ್ಯದರ್ಶಿ ವಿಕ್ರಂ ಮಿಸ್ರಿ ತಿಳಿಸಿದ್ದಾರೆ.

ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪ್ರವಾಸಿಗರನ್ನು ಗುರಿಯಾಗಿಸಿ ನಡೆದ ಭಯೋತ್ಪಾದಕರ ದಾಳಿಯಲ್ಲಿ 28 ಜನ ಮೃತಪಟ್ಟಿದ್ದರು. ಇದರ ಹೊಣೆಯನ್ನು 'ಕಾಶ್ಮೀರ್ ರೆಸಿಸ್ಟೆನ್ಸ್' ಹೊತ್ತುಕೊಂಡಿದ್ದು, ■ 6ನೇ ಪುಟಕ್ಕೆ



ಪ್ರಧಾನಿ ಮೋದಿ ನೇತೃತ್ವದಲ್ಲಿ ಬುಧವಾರ ಉನ್ನತ ಮಟ್ಟದ ಸಭೆ ನಡೆಯಿತು.

ಇಂದು ಸರ್ವಪಕ್ಷ ಸಭೆ

ಭಯೋತ್ಪಾದಕ ದಾಳಿಗೆ ಸಂಬಂಧಿಸಿದ ಪರಿಸ್ಥಿತಿ ಕುರಿತು ನಾಳೆ (ಏ.24) ಸರ್ವಪಕ್ಷ ಸಭೆ ಕರೆಯಲಾಗಿದ್ದು, ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಎಲ್ಲಾ ಪಕ್ಷಗಳೊಂದಿಗೆ ಈ ಬಗ್ಗೆ ಮಾತನಾಡಲಿದ್ದಾರೆ.

ದೆಹಲಿ ತಲುಪಿದ 26 ಪ್ರವಾಸಿಗರ ಮೃತದೇಹಗಳು

ಕರ್ನಾಟಕದ ಮೂವರ ದೇಹ ಮುಂಜಾನೆ ರಾಜ್ಯಕ್ಕೆ

ನವದೆಹಲಿ: ಪಹಲ್ಗಾಮ್‌ನಲ್ಲಿ ಮಂಗಳವಾರ ಉಗ್ರರ ದಾಳಿಗೆ ಬಲಿಯಾದ 26 ಪ್ರವಾಸಿಗರ ಮೃತದೇಹಗಳನ್ನು ಇಂದು ರಾತ್ರಿ ದೆಹಲಿಗೆ ತರಲಾಗಿದೆ. ಸದ್ಯ, ದೆಹಲಿ ವಿಮಾನ ನಿಲ್ದಾಣದಲ್ಲಿ ಮೃತದೇಹಗಳಿದ್ದು, ಕರ್ನಾಟಕದ ಮೂವರ ದೇಹಗಳು ನಾಳೆ (ಏ.24) ಮುಂಜಾನೆ ಬೆಂಗಳೂರು ತಲುಪುವ ನಿರೀಕ್ಷೆ ಇದೆ.

ಉಗ್ರರ ದಾಳಿ ಹಿನ್ನೆಲೆಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಕಾಶ್ಮೀರಕ್ಕೆ ಆಗಮಿಸಿದ್ದರು. ಇಂದು ಬೆಳಗ್ಗೆ ಅವರು ದಾಳಿಗೆ ಬಲಿಯಾದವರಿಗೆ ಅಂತಿಮ ಗೌರವ ಸಲ್ಲಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ಮೇರೆಗೆ ನಿನ್ನೆಯೇ ಕಾಶ್ಮೀರಕ್ಕೆ ತೆರಳಿದ್ದ ಕಾರ್ಮಿಕ ಸಚಿವ ಸಂತೋಷ್ ಲಾಡ್, ಸ್ಥಳೀಯ ಆಡಳಿತ, ಭದ್ರತಾ ಪಡೆಗಳು ಹಾಗೂ ಕೇಂದ್ರ ಸರ್ಕಾರದೊಂದಿಗೆ ■ 6ನೇ ಪುಟಕ್ಕೆ




ಭಾರತ–ಪಾಕಿಸ್ತಾನ ಗಡಿಯ ಅಟ್ಟಾರಿ ಚೆಕ್‌ಪೋಸ್ಟ್ ಬಂದ್ ಆಗಲಿದೆ.

ಸ್ವಂತ ಹಣದಲ್ಲೇ 180 ಕನ್ನಡಿಗರ ಕರೆತರುತ್ತಿರುವ ಸಚಿವ ಸಂತೋಷ್ ಲಾಡ್

ಬೆಂಗಳೂರು: ಜಮ್ಮು–ಕಾಶ್ಮೀರದ ಪಹಲ್ಗಾಮ್‌ನ ಭಯೋತ್ಪಾದಕರ ದಾಳಿಯಲ್ಲಿ ಬಲಿಯಾದ ಮೂವರು ಕನ್ನಡಿಗರ ಹೊರತಾಗಿ 180 ಕನ್ನಡಿಗರು ಸುರಕ್ಷಿತರಾಗಿದ್ದು, ಅವರನ್ನು ನಾಳೆ (ಏ.24) ಬೆಳಗ್ಗೆ ಸಚಿವ ಸಂತೋಷ್ ಲಾಡ್ ತಮ್ಮ ಸ್ವಂತ ಹಣದಿಂದಲೇ ಬೆಂಗಳೂರಿಗೆ ವಿಮಾನದಲ್ಲಿ ಕರೆತರುತ್ತಿದ್ದಾರೆ. ಸದ್ಯ ಶ್ರೀನಗರದಲ್ಲಿರುವ ಕನ್ನಡಿಗರು ನಿಟ್ಟುಸಿರು ಬಿಟ್ಟಿದ್ದಾರೆ.

ಭದ್ರತಾ ಸಂಸ್ಥೆಗಳಿಂದ ಮೂವರ ರೇಖಾಚಿತ್ರ ಬಿಡುಗಡೆ

ಶ್ರೀನಗರ: ದಕ್ಷಿಣ ಕಾಶ್ಮೀರದ ಪಹಲ್ಗಾಮ್ ಬಳಿ 28 ಜನ ಪ್ರವಾಸಿಗರನ್ನು ಹತ್ಯೆಗೈದ ಉಗ್ರರ ದಾಳಿಯಲ್ಲಿ ಭಾಗಿಯಾಗಿರುವ ಶಂಕಿತ ಮೂವರು ಉಗ್ರರ ರೇಖಾಚಿತ್ರಗಳನ್ನು ಭದ್ರತಾ ಸಂಸ್ಥೆಗಳು ಬಿಡುಗಡೆ ಮಾಡಿವೆ. ಶಂಕಿತ ಮೂವರನ್ನು ಆಸಿಫ್ ಫೌಜಿ, ಸುಲೇಮಾನ್ ಶಾ ಮತ್ತು ಅಬು ತಲ್ಹಾ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಮೂಸಾ, ಯೂನಸ್ ಮತ್ತು ಆಸಿಫ್ ಎಂಬ ಕೋಡ್ ಹೆಸರನ್ನು ಹೊಂದಿದ್ದ ಈ ಮೂವರು ಉಗ್ರರು ಪೂಂಚ್‌ನಲ್ಲಿ ನಡೆದ ಭಯೋತ್ಪಾದನೆ ಸಂಬಂಧಿತ ಘಟನೆಗಳಲ್ಲಿ ಭಾಗಿಯಾಗಿದ್ದರು. ಪೈಶಾಚಿಕ ದಾಳಿಯಿಂದ ಬದುಕುಳಿದಿರುವವರ ಸಹಾಯದಿಂದ ರೇಖಾಚಿತ್ರಗಳನ್ನು ಸಿದ್ಧಪಡಿಸಲಾಗಿದೆ ಎಂದು ಹೇಳಿದ್ದಾರೆ.

ಮಾದಪ್ಪನ ಸನ್ನಿಧಿಯಲ್ಲಿ ಇಂದು ಸಂಪುಟ ಸಭೆ





ಮಲೆ ಮಹದೇಶ್ವರಬೆಟ್ಟ ಗುರುವಾರ ನಡೆಯಲಿರುವ ರಾಜ್ಯ ಸಚಿವ ಸಂಪುಟ ಸಭೆಗೆ ಎಲ್ಲಾ ಸಿದ್ಧತೆ ಪೂರ್ಣಗೊಂಡಿದ್ದು, ಬುಧವಾರ ಸಂಜೆಯೇ ಡಿಸಿಎಂ ಡಿ.ಕೆ.ಶಿವಕುಮಾರ್ ಪರಿಶೀಲನೆ ನಡೆಸಿದರು.

● ಸಿದ್ದಲಿಂಗಸ್ವಾಮಿ

ಚಾಮರಾಜನಗರ,ಏ.23–ಜಿಲ್ಲೆಯ ಪವಿತ್ರ ಯಾತ್ರಾ ಸ್ಥಳ ಮಲೆ ಮಹದೇಶ್ವರ ಬೆಟ್ಟದಲ್ಲಿ ನಾಳೆ (ಏ.24) ಸಂಪುಟ ಸಭೆ ನಡೆಯಲಿದೆ. ಹಾಗಾಗಿ ಜಿಲ್ಲೆಯ ಜನತೆ ಅಭಿವೃದ್ಧಿ ಕೊಡುಗೆಗಳ ನಿರೀಕ್ಷೆಯಲ್ಲಿದ್ದಾರೆ.

ಬೆಟ್ಟದ ವಜ್ರಮಲೆ ಭವನದ ಎದುರು ತಾತ್ಕಾಲಿಕವಾಗಿ ನಿರ್ಮಿಸಿರುವ ಜರ್ಮನ್ ಟೆಂಟ್‌ನಲ್ಲಿ ಮಧ್ಯಾಹ್ನ 12 ಗಂಟೆಗೆ ಸಂಪುಟ ಸಭೆ ನಡೆಯಲಿದೆ.

ಮುಖ್ಯಮಂತ್ರಿಗಳು ಬೆಳಗ್ಗೆ ಮಹದೇಶ್ವರ ಬೆಟ್ಟಕ್ಕೆ ಆಗಮಿಸಲಿದ್ದು, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಹಲವು ಸಚಿವರು ರಾತ್ರಿಯೇ ಬೆಟ್ಟಕ್ಕೆ ಆಗಮಿಸಿ ವಾಸ್ತವ್ಯ ಹೂಡಿದ್ದಾರೆ. ಮತ್ತೆ ಕೆಲ ಸಚಿವರು ಬೆಳಗ್ಗೆ ಆಗಮಿಸಲಿದ್ದಾರೆ.

ಸಿದ್ಧತೆ ಪೂರ್ಣ: ಸಚಿವ ಸಂಪುಟ ಸಭೆಯ ಹಿನ್ನೆಲೆಯಲ್ಲಿ ಮಹದೇಶ್ವರಬೆಟ್ಟ ಸಿಂಗಾರಗೊಂಡಿದೆ. ದೇವಸ್ಥಾನಕ್ಕೆ ಹಾಗೂ ಮಾದಪ್ಪನ ಪ್ರತಿಮೆಗೆ ವಿದ್ಯುತ್ ದೀಪಾಲಂಕಾರ ಮಾಡಲಾಗಿದೆ. ಉದ್ಘಾಟನೆಗೊಳ್ಳುವ ಕಟ್ಟಡಗಳಿಗೂ ಸಹ ದೀಪಾಲಂಕಾರ ಮಾಡಲಾಗಿದೆ. ಬೆಟ್ಟದ ತಳಭಾಗದಲ್ಲಿ ತಾಳಬೆಟ್ಟದಲ್ಲಿ 'ಜಾನಪದ ನಗರಿ ಚೆಲುವ ಚಾಮರಾಜನಗರಕ್ಕೆ ಸ್ವಾಗತ' ಕಮಾನು ನಿರ್ಮಿಸಲಾಗಿದೆ.

2ನೇ ಸಂಪುಟ ಸಭೆ: ಎಸ್.ಎಂ.ಕೃಷ್ಣ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಯಳಂದೂರು ತಾಲೂಕಿನ ಬಿಳಿಗಿರಿರಂಗನ ಬೆಟ್ಟದಲ್ಲಿ ಮಿನಿ ಸಂಪುಟ ಸಭೆ ನಡೆಸಲಾಗಿತ್ತು. ಇದೀಗ ಜಿಲ್ಲೆಯ ಮಹದೇಶ್ವರ ಬೆಟ್ಟದಲ್ಲಿ ಸಚಿವ ಸಂಪುಟ ಸಭೆ ನಡೆಯುತ್ತಿದೆ. ಈ ಸಭೆ ಪೂರ್ಣ ಪ್ರಮಾಣದ ಕ್ಯಾಬಿನೆಟ್ ಸಭೆಯಾಗಿರುವುದು ಮತ್ತೊಂದು ವಿಶೇಷವಾಗಿದೆ.

ಗರಿಗೆದರಿದ ನಿರೀಕ್ಷೆಗಳು: ಜಿಲ್ಲೆಯಲ್ಲಿ ಸಂಪುಟ ಸಭೆ ನಡೆಯುತ್ತಿರುವುದರಿಂದ ಜನರು ಹಲವಾರು ನಿರೀಕ್ಷೆಗಳನ್ನು ಹೊಂದಿದ್ದು, ಈ ಭಾಗದ ಸಮಗ್ರ ಅಭಿವೃದ್ಧಿಗೆ ವಿಶೇಷ ಅನುದಾನ ಘೋಷಿಸಬಹುದು. ಸಾಕಷ್ಟು ಪ್ರವಾಸಿತಾಣಗಳಿದ್ದು ಅವುಗಳ ಅಭಿವೃದ್ಧಿಗಾಗಿ ಹಣ ಬಿಡುಗಡೆಗೊಳಿಸುವ ಮೂಲಕ ಜಿಲ್ಲೆಯನ್ನು ಅಭಿವೃದ್ಧಿಗೊಳಿಸಬಹುದು. ಒಳಚರಂಡಿ ವ್ಯವಸ್ಥೆ, ಕುಡಿಯುವ ನೀರಿನ ಸಮಸ್ಯೆ, ಕೋವಿಡ್ ಸಮಯದಲ್ಲಿ ಆಕ್ಸಿಜನ್ ಕೊರತೆಯಿಂದ ಮೃತಪಟ್ಟಿರುವ ಕುಟುಂಬಕ್ಕೆ ಉದ್ಯೋಗ ನೀಡುವ ಯೋಜನೆ, ವಸತಿರಹಿತರಿಗೆ ಮನೆ ನಿರ್ಮಾಣ, ಕೆರೆಗಳಿಗೆ ನೀರು ತುಂಬಿಸುವ ಯೋಜನೆಗಳನ್ನು ಈ ಸಂಪುಟ ಸಭೆಯಲ್ಲಿ ಘೋಷಿಸಬಹುದೆಂಬ ಆಶಾಭಾವನೆಯನ್ನು ಜನತೆ ವ್ಯಕ್ತಪಡಿಸುತ್ತಿದ್ದಾರೆ. ಜಿಲ್ಲೆಯ ನಾಲ್ವರು ಶಾಸಕರು ಈಗಾಗಲೇ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಆಗಬೇಕಾದ ಅಭಿವೃದ್ಧಿ ಕೆಲಸಗಳ ಬಗ್ಗೆ ಪ್ರಸ್ತಾವನೆ ಸಲ್ಲಿಸಿದ್ದಾರೆ.

“ ಏ.24ರಂದು ನಡೆಯುತ್ತಿರುವ ಮಹತ್ವದ ಸಂಪುಟ ಸಭೆಯಲ್ಲಿ ಮೈಸೂರು, ಮಂಡ್ಯ, ಕೊಡಗು ಹಾಗೂ ಚಾಮರಾಜನಗರಕ್ಕೆ ಸಂಬಂಧಿಸಿದ ನೀರಾವರಿ ಮತ್ತು ಪ್ರವಾಸೋದ್ಯಮ ಅಭಿವೃದ್ಧಿಯ 35 ಯೋಜನೆಗಳಿಗೆ ಅನುಮೋದನೆ ದೊರಕಲಿದೆ. ಕಾವೇರಿ, ಕಬಿನಿ, ಹಾರಂಗಿ, ಹೇಮಾವತಿ ಸೇರಿದಂತೆ ವಿವಿಧ ನದಿ ಮೂಲದ ನೀರಾವರಿ ಯೋಜನೆ, ಬಹಳ ದಿನಗಳಿಂದ ನೆನೆಗುದಿಗೆ ಬಿದ್ದಿರುವ ಪ್ರವಾಸೋದ್ಯಮ ಅಭಿವೃದ್ಧಿ ಯೋಜನೆಗೆ ನಾಳೆ ಸಂಪುಟ ಸಭೆಯಲ್ಲಿ ಬಂಪರ್ ಕೊಡುಗೆ ದೊರೆಯಲಿದೆ.

ನಕ್ಕರೆ ಅದೇ ಸ್ವರ್ಗ

ಮಹಿಳೆ : ಅಣ್ಣ, ಒಂದು ಸೂಪರ್ ಆಗಿರೋ ಸೀರೆ ತೋರಿಸಿ. ಅದನ್ನು ನೋಡಿ ನನ್ನ ಒರಗಿತ್ತಿ ಹೊಟ್ಟೆ ಉರ್ಕೊಂಡು ಸಾಯಬೇಕು.

ಅಂಗಡಿಯವ : ಮೇಡಂ, ಆ ತರಹದ್ದು ಒಂದೇ ಸೀರೆ ಇತ್ತು. ಅದು ಈಗ ತಾನೇ ನಿಮ್ಮ ಒರಗಿತ್ತಿ ತೊಗೊಂಡು ಹೋದ್ರು.

ಮೈಸೂರು ಮಿತ್ರ

ಗುರುವಾರ, 24 ಏಪ್ರಿಲ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಎಲ್ಲರನ್ನೂ ಮೆಚ್ಚಿಸುವಂತೆ ಬದುಕುವ ಕಲೆಯನ್ನು ನೀನು ರೂಢಿಸಿಕೊಂಡ ದಿನವೇ ನಿನ್ನ ಕೊನೆಯ ದಿನವಾಗುವುದು. – ಪಿ. ಲಂಕೇಶ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬೆಕ್ಕು ಕಣ್ಮುಚ್ಚಿ ಹಾಲು ಕುಡಿದರೆ ಜಗತ್ತಿಗೆ ಗೊತ್ತಾಗಲ್ವಾ?

ನಿಮ್ಮ ಪತ್ರಗಳು

■ ಮೈಸೂರಿನ ಆಮ್ಲಜನಕ ರಾಘವನ್

ಮಾನ್ಯರೆ,



ಮೈಸೂರಿನ ಎಲ್ಲಾ ರಸ್ತೆಗಳಲ್ಲೂ ನಿಮಗೆ ಮರಗಳನ್ನು ಕಾಪಾಡಲು ಸಹಸ್ರಾರು ಕಬ್ಬಿಣದ ಮರ ರಕ್ಷಕಗಳನ್ನು (ಟ್ರೀ ಗಾರ್ಡ್) ನೀಡಿ ಮೈಸೂರನ್ನು ಹಸಿರುಗೊಳಿಸುವಲ್ಲಿ ಮೈಸೂರಿನ ಪ್ರತಿಷ್ಠಿತ ರಘುಲಾಲ್ ಮೆಡಿಕಲ್ಸ್‌ನ ರಘುಲಾಲ್ ರಾಘವನ್ ಮುಂಚೂಣಿಯಲ್ಲಿದ್ದಾರೆ. ಪ್ರತಿ ಕಬ್ಬಿಣದ ಟ್ರೀ ಗಾರ್ಡ್‌ಗಳಿಗೆ ಸಹಸ್ರಾರು ರೂಪಾಯಿ ಬಂಡವಾಳ ಹಾಕಿ ಎಲ್ಲಾ ಪರಿಸರ ಪ್ರಿಯರಿಗೆ ಉಚಿತವಾಗಿ ಇದುವರೆಗೂ ಸಹಸ್ರಾರು ಮರ ರಕ್ಷಕ ಟ್ರೀ ಗಾರ್ಡ್‌ಗಳನ್ನು ವಿತರಿಸಿ ಮೈಸೂರನ್ನು ಹಸಿರುಮಯ ಮಾಡುವಲ್ಲಿ ರಘುಲಾಲ್ ಅವರ ಕೊಡುಗೆ ಅಪಾರ. ಪ್ರತಿಯೊಬ್ಬ ಮೈಸೂರಿಗರು ಇವರನ್ನು ಸದಾ ಜ್ಞಾಪಿಸಿಕೊಳ್ಳಬೇಕು. ಅವರಿಗೆ ನಾವು ಮಾಡುವ ಸನ್ಮಾನಕ್ಕಿಂತ ನಗರದ ಬೀದಿ ಬೀದಿಯಲ್ಲಿರುವ ಮರಗಳ ಕಲರವವೇ ದೊಡ್ಡ ಗೌರವ.

ಮೈಸೂರಿನಲ್ಲಿ ಹಲವಾರು ಪರಿಸರ ಪ್ರೇಮಿಗಳಿಗೆ ಗಿಡಗಳನ್ನು ನೆಡಲು ರಘುಲಾಲ್ ಅವರು ಕಬ್ಬಿಣದ ಟ್ರೀ ಗಾರ್ಡ್‌ಗಳನ್ನು ಉಚಿತವಾಗಿ ನೀಡುತ್ತಾ ಬಂದಿದ್ದಾರೆ. ಒಂದು ಟ್ರೀಗಾರ್ಡ್‌ಗೆ ಕನಿಷ್ಠ 3–4 ಸಾವಿರ ರೂಪಾಯಿ ಆಗುತ್ತದೆ. ಅವುಗಳನ್ನು ಬಳಸಿಕೊಂಡು ಸಾವಿರಾರು ಗಿಡಮರಗಳನ್ನು ನೆಟ್ಟು ಬೆಳೆಸಿದ್ದಾರೆ. ನನಗೂ 20 ಗಾರ್ಡ್‌ಗಳನ್ನು ನೀಡಿದ್ದರು. ದುರಂತ ಎಂದರೆ ಅವುಗಳನ್ನು ನೆಟ್ಟ ಕೆಲವೇ ದಿನಗಳಲ್ಲಿ ದುಷ್ಕರ್ಮಿಗಳು ಅವುಗಳನ್ನು ಕದ್ದು ಗುಜರಿಗೆ ಮಾರಿಬಿಡುತ್ತಾರೆ. ನನ್ನ 4 ಟ್ರೀ ಗಾರ್ಡ್‌ಗಳು ಕಳುವಾದವು ಇದರ ಜೊತೆಗೆ ನಾವು ನೆಟ್ಟ ಸಸಿಗಳು ಹಾಳಾಗಿ ಬಿಡುತ್ತವೆ. ಈ ಟ್ರೀಗಾರ್ಡ್ ಕಳ್ಳರನ್ನು ಹಿಡಿದು ಶಿಕ್ಷಿಸಬೇಕಾಗಿ ಕೋರುತ್ತೇನೆ.

ರಾಘವನ್ ಈಗಾಗಲೇ ಲಕ್ಷದ ಹತ್ತಿರ ಸಸಿಗಳನ್ನು ನೆಟ್ಟು, ನೀರೆರೆದು, ಟ್ರೀ ಗಾರ್ಡ್‌ಗಳ ಅಳವಡಿಸಿ ಪೋಷಿಸಿದ್ದಾರೆ. ಇವರಿಂದ ನೆಡಲ್ಪಟ್ಟ ಸಸಿಗಳು ಮರಗಳಾಗಿ ಸಮೃದ್ಧ ನೆರಳು ಮತ್ತು ಗಾಳಿಯನ್ನು ನೀಡುತ್ತಿದೆ. ಇಂತಹ ನಿಜವಾದ ಪರಿಸರವಾದಿಗೆ ಸಲ್ಲಬೇಕಾದ ಅದೆಷ್ಟೋ ಗೌರವಗಳು ಅನರ್ಹರಿಗೆ ಸಲ್ಲುತ್ತಿರುವುದು ನಮ್ಮ ರಾಜ್ಯದ ದುರಂತವೇ ಸರಿ.

–ಅರಕೆರೆ ದೇವರಾಜು, ಮೈಸೂರು.

■ ಶ್ರೀ ಕೃಷ್ಣದೇವರಾಯ ಸಮಾಧಿ ಮಂಟಪದಲ್ಲಿ ಪಾವಿತ್ರ್ಯತೆ ಕಾಪಾಡಿ

ಮಾನ್ಯರೆ,

ವಿಜಯನಗರ ಸಾಮ್ರಾಜ್ಯವನ್ನು ಆಳಿದ ರಾಜರುಗಳಲ್ಲೇ ಅತ್ಯಂತ ಯಶಸ್ವಿ ರಾಜಾಡಳಿತ ನಡೆಸಿದ ರಾಜ ಎಂದರೆ ಶ್ರೀ ಕೃಷ್ಣದೇವರಾಯ. ಭಾರತೀಯ ಇತಿಹಾಸದಲ್ಲಿ ಶ್ರೇಷ್ಠ ಆಡಳಿತಗಾರರಾಗಿದ್ದ ಶ್ರೀ ಕೃಷ್ಣದೇವರಾಯ ಅವರ ಸಮಾಧಿ 64 ಕಂಬಗಳ ಮಂಟಪದಿಂದ ಕೂಡಿದ್ದು ಅತ್ಯಂತ ಸುಂದರವಾಗಿದ್ದು ನೋಡಲು ಎರಡು ಕಣ್ಣುಗಳು ಸಾಲದು. ಕೆಲವು ಸ್ಥಳೀಯರು ಇದರ ಮಹತ್ವ ಅರಿಯದೆ ಮಾಂಸ ಮಾರಾಟ ನಡೆಸುತ್ತಿರುವುದು ತುಂಬಾ ಖಂಡನೀಯ. ಔರಂಗಜೇಬನ ಸಮಾಧಿಗೆ ಪುರಾತತ್ವ ಇಲಾಖೆ (ASI) ತೆರಿಗೆಯಿಂದ ಬರುವ ಹಣದಲ್ಲಿ ಸಂರಕ್ಷಣೆ ಮಾಡುತ್ತಿದ್ದು, ಕನ್ನಡ ನಾಡಿನ ಅಸಾಮಾನ್ಯ ಆಡಳಿತಗಾರ, ಅಪ್ರತಿಮ ದಂಡನಾಯಕ ಶ್ರೀ ಕೃಷ್ಣದೇವರಾಯರ ಸಮಾಧಿ ಮಂಟಪಕ್ಕೆ ಏಕೆ ಈ ರೀತಿಯಾದ ದಿವ್ಯ ನಿರ್ಲಕ್ಷ್ಯ ಎಂಬುದು ತಿಳಿಯುತ್ತಿಲ್ಲ. ಇನ್ನಾದರೂ ಸಂಬಂಧಪಟ್ಟವರು (ಜಿಲ್ಲಾಡಳಿತ) ಎಚ್ಚೆತ್ತುಕೊಂಡು ಇಲ್ಲಿ ನೈರ್ಮಲ್ಯದಿಂದ ಕೂಡಿದ ವಾತಾವರಣ ಮತ್ತು ಸಮಾಧಿ ಮಂಟಪದಲ್ಲಿ ಪಾವಿತ್ರ್ಯತೆಯನ್ನು ಕಾಪಾಡುವ ನಿಟ್ಟಿನಲ್ಲಿ ತುರ್ತಾಗಿ ಕಾರ್ಯಪ್ರವೃತ್ತರಾಗುವುದು ಸೂಕ್ತ.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

■ ವಿಜಯನಗರ ನೀರಿನ ಟ್ಯಾಂಕ್ ಬಳಿ ರಸ್ತೆ ಡುಬ್ಬ ನಿರ್ಮಿಸಿ

ಮಾನ್ಯರೆ,

ಮೈಸೂರು ವಿಜಯನಗರ ವಾಟರ್ ಟ್ಯಾಂಕ್‌ನಿಂದ ತ್ರಿನೇತ್ರ ವೃತ್ತದ ಮುಖ್ಯ ರಸ್ತೆಯಲ್ಲಿ ಇದೀಗ ವಾಹನ ಸಂಚಾರ ಅಧಿಕವಾಗಿದೆ. ತ್ರಿನೇತ್ರ ವೃತ್ತದಿಂದ ಬರುವ ವಾಹನಗಳು ರೈಲ್ವೆ ಬಡಾವಣೆಗೆ ತಿರುಗುವ ಸ್ಥಳದಲ್ಲಿ ವಾಹನ ಸಂಚಾರರು ಕಷ್ಟಪಡುತ್ತಿದ್ದು, ಅದೇ ರೀತಿ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿಂದ ಮುಖ್ಯ ರಸ್ತೆಗೆ ಬರುವ ವಾಹನಗಳು ಕೂಡಾ ತೊಂದರೆಗೊಳಗಾಗುತ್ತಿವೆ. ವಾಟರ್ ಟ್ಯಾಂಕಿನಿಂದ ಇಳಿಜಾರಿನತ್ತ ಬರುವ ವಾಹನಗಳು, ಬಹುಶಃ ಇಳಿಜಾರಿನ ಪ್ರಯುಕ್ತ ಬಹುತೇಕ ವೇಗವಾಗಿಯೇ ಬರುತ್ತಿದ್ದು, ಎದುರಿನಿಂದ ವಾಹನಗಳು ಬಲ ತಿರುವು ತೆಗೆದುಕೊಳ್ಳಲು ಕಷ್ಟವಾಗುತ್ತಿದೆ. ಇದನ್ನು ತಪ್ಪಿಸಿ ಸಂಚಾರ ವ್ಯವಸ್ಥೆ ಸುಗಮವಾಗುವಂತೆ ಅನುವಾಗಲು ಸಪ್ತಗಿರಿ ಗ್ಲಾಸ್ ಅಂಗಡಿಯ ಮುಂದೆ, ಕೆಎಫ್‌ಸಿ ಮುಂದೆ ಹಾಗೂ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ಕಡೆಗೆ ಸೂಕ್ತ ರಸ್ತೆ ಡುಬ್ಬಗಳನ್ನು ನಿರ್ಮಿಸಿದಲ್ಲಿ ವಾಹನ ಸವಾರರಿಗೆ ಅನುಕೂಲವಾಗುವುದಲ್ಲದೇ, ಅನಾಹುತಗಳನ್ನು ತಪ್ಪಿಸಬಹುದಾಗಿದೆ. ಈ ಕೆಲ ತಿಂಗಳ ಹಿಂದೆ ನಗರಪಾಲಿಕೆಯವರು ಓದುಗರ ಪತ್ರಕ್ಕೆ ಸ್ಪಂದಿಸಿ ರಸ್ತೆ ವಿಭಜಕ ತೆರವುಗೊಳಿಸಿರುವಂತೆ, ಈಗಲೂ ಸಂಬಂಧಿಸಿದ ಪಾಲಿಕೆ ಅಧಿಕಾರಿಗಳು ಇಲ್ಲಿ ರಸ್ತೆ ಡುಬ್ಬ ನಿರ್ಮಿಸಿ ಅನುಕೂಲ ಮಾಡಿಕೊಡುವಂತೆ ಈ ಮೂಲಕ ಮನವಿ ಮಾಡಲಾಗಿದೆ.

–ವಿಜಯ್ ಹೆಮ್ಮಿಗೆ, ಮೈಸೂರು

■ ಕನ್ನಡಿಗರಿಗೆ ವರವಾಗಿ ಬಂದ ವರನಟ

ಮಾನ್ಯರೆ,

ಇಂದಿನ ಮುಂದಿನ ಪೀಳಿಗೆಗೆ ಆದರ್ಶ ನಾಯಕ,
ನಟಸಾರ್ವಭೌಮ ಅಭಿನಯ ಕಲಾ ಕುಲ ತಿಲಕ,
ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ವಿಜೇತ ಸರ್ವಜ್ಞಮೂರ್ತಿ,
ಬಡವರ ಬಂಧು ನಿಮ್ಮಯ ಪಾತ್ರಗಳಿಗೆ ಸಾವಿಲ್ಲ ಎಂದೆಂದೂ,
ಗಾಜನೂರು ಗಂಡು ಮುತ್ತುರಾಜ್ ಬಂಗಾರದ ಮನುಷ್ಯ,
ಬಹದ್ದೂರ್ ಗಂಡು ಮಿಸ್ಟರ್ ರಾಜಕುಮಾರ್ ದೇವತಾ ಮನುಷ್ಯ,

ಬೇಡರ ಕಣ್ಣಪ್ಪನಾಗಿ ಉದಯಿಸಿದ ನವತಾರೆ,
ಅಣ್ಣಾವ್ರು ಕನ್ನಡ ಚಿತ್ರರಂಗದ ಧ್ರುವತಾರೆ,
ಡಾ॥ ರಾಜ್ ಭಾರತೀಯ ಚಿತ್ರರಂಗದ ಮೇರುನಟ,
ಕನ್ನಡಿಗರಿಗೆ ವರವಾಗಿ ಬಂದ ವರನಟ,
ನೀವು ಜನಿಸಿದ್ದು ಈ ನಾಡಿನ ಭಾಗ್ಯ,
ನಿಮ್ಮನ್ನು ಪಡೆದ ಕನ್ನಡಿಗರು ನಾವೇ ಭಾಗ್ಯವಂತರು.

–ಅಹಲ್ಯ ಸಿ.ನಾ. ಚಂದ್ರ, ಜನತಾನಗರ, ಮೈಸೂರು

ಮಂಥನ



ನಿವೇದಿತ ಹೆಚ್.
ಇಂಗ್ಲಿಷ್ ಉಪನ್ಯಾಸಕಿ
ಯುವರಾಜ ಕಾಲೇಜು
ಮೈಸೂರು.

ಕಥೆ ಹೇಳುವೇ ಪುಸ್ತಕದ ಕಥೆ ಹೇಳುವೆ...!

ಪುಸ್ತಕಗಳ ನಡುವೆ ಬೆಳೆಯುವ ಅವಕಾಶವಿಲ್ಲದಿರುವುದು ಒಂದು ಮಗುವಿಗಾಗುವ ಅತ್ಯಂತ ಘೋರ ನಷ್ಟ ಎಂದು ಅಬ್ರಹಾಂ ಲಿಂಕನ್ ಹೇಳುತ್ತಾರೆ. ಇದಕ್ಕಿಂತ ಸರಳವಾಗಿ ನಾವು ಪುಸ್ತಕದ ಪ್ರಾಮುಖ್ಯತೆಯನ್ನು ಹೇಳಲಾಗುವುದಿಲ್ಲ. ಒಂದು ಉತ್ತಮ ಪುಸ್ತಕ 10 ಉತ್ತಮ ಸ್ನೇಹಿತರಿಗೆ ಸಮ ಎನ್ನುವ ಮಾತನ್ನು ನಾವೆಲ್ಲ ಕೇಳಿದ್ದೇವೆ. ಅದು ಅಪ್ಪಟ ಸತ್ಯ ಎಂಬುದು ಓದಿನ ರುಚಿ ತಿಳಿದವರಿಗೆ ಮಾತ್ರ ಅರ್ಥವಾಗುತ್ತದೆ. ಪುಸ್ತಕಗಳು ವಿಶ್ವವನ್ನು ನಮಗೆ ತೆರೆದಿಡುವ ಬೆಳಕಿನ ಕಿಂಡಿಗಳು. ನಮ್ಮ ಪುಟ್ಟ ಜೀವನದಲ್ಲಿ ನಾವು ಭೂಮಿಯ ಮೇಲಿನ ಎಲ್ಲ ಅದ್ಭುತಗಳನ್ನು ಅನುಭವಿಸಲು ಸಾಧ್ಯವಿಲ್ಲವೆಂಬುದನ್ನು ಮನಗಂಡೇ ಪುಸ್ತಕಗಳ ಆವಿಷ್ಕಾರವಾಯಿತೇನೋ!


ನಿನ್ನೆ ಏಪ್ರಿಲ್ 23ಕ್ಕೆ ಇಡೀ ವಿಶ್ವಾದ್ಯಂತ ಅಂತಾರಾಷ್ಟ್ರೀಯ ಪುಸ್ತಕ ದಿನ ಆಚರಿಸಲ್ಪಟ್ಟಿದೆ. ಪ್ರಪಂಚದಾದ್ಯಂತ ಹರಡಿರುವ ಪುಸ್ತಕ ಪ್ರಿಯರೆಲ್ಲ ತಮ್ಮ ನೆಚ್ಚಿನ ಹವ್ಯಾಸದ ಮಹತ್ವವನ್ನು ಎಲ್ಲರಿಗೂ ತಿಳಿಯಪಡಿಸಿದರು. ಏಪ್ರಿಲ್ 23ರಂದು ಪುಸ್ತಕ ದಿನ ಮಾತ್ರವಲ್ಲ, ಹಕ್ಕುಸ್ವಾಮ್ಯ (ಕೃತಿಸ್ವಾಮ್ಯ) ದಿನವನ್ನು ಆಚರಿಸಲಾಗುತ್ತದೆ. ಭೂತ ಭವಿಷ್ಯವನ್ನು ಬೆಸೆದು ವರ್ತಮಾನವನ್ನು ಸುಂದರವಾಗಿಸುವ ಪುಸ್ತಕ ಪ್ರಪಂಚದ ಪರಿಚಯ ಇರುವವರು ಸಂಭ್ರಮಿಸಲು ಒಂದು ಕಾರಣವಾದರೆ, ಅದರ ಪರಿಚಯ ಇಲ್ಲದವರಲ್ಲಿ ಆ ಬಗ್ಗೆ ಕುತೂಹಲ ಮೂಡಿಸುವ ಗುರುತರ ಆಶಯ ಇದರ ಹಿಂದಿದೆ.

1922ರಲ್ಲಿಯೇ ಪುಸ್ತಕ ದಿನವನ್ನು ಆಚರಿಸುವ ಪದ್ಧತಿ ಪ್ರಾರಂಭವಾಗಿತ್ತು ಎಂದರೆ ನಿಮಗೆ ಆಶ್ಚರ್ಯವಾಗಬಹುದು. ಹೌದು, ಸ್ಪೇನ್‌ನ ಪ್ರಸಿದ್ಧ ಪತ್ರಕರ್ತ, ಸಾಹಿತಿ, ಅನುವಾದಕ, ಪ್ರಕಾಶಕನಾಗಿದ್ದ ವಿಸೆಂಟೇ ಕ್ಲಾವೆಲ್, ವಿಶ್ವ ಪುಸ್ತಕ ದಿನದ ಪಿತಾಮಹ ಎಂದು ಗೌರವಿಸಲಾಗುತ್ತದೆ. ಡಾನ್ ಕಿ ಹೋತೆ (ಡಾನ್ ಕ್ವಿಕ್ಸಾಟ್ ಎಂದು ಜನಜನಿತ) ಅಂತಹ ಮಹತ್ತರ ಕೃತಿಯನ್ನು ನೀಡಿದ ಸೆರ್ವಾಂತೆ (ಸೆರ್ವಾಂಟೆಸ್)ಯ ಪ್ರಖರ ಅಭಿಮಾನಿಯಾಗಿದ್ದ ಕ್ಲಾವೆಲ್, ಸೆರ್ವಾಂತೆಯ ಪುಸ್ತಕಗಳ ಮಹತ್ವವನ್ನು ಜನರಿಗೆ ಅರ್ಥ ಮಾಡಿಸುವ ಸಲುವಾಗಿ, ಸೆರ್ವಾಂತೆ ಹುಟ್ಟಿದ ದಿನ ಎಂದು ನಂಬಲಾಗಿರುವ ಅಕ್ಟೋಬರ್ 7 ಅನ್ನು ಪುಸ್ತಕ ದಿನವನ್ನಾಗಿ ಘೋಷಿಸಿದ. ಬಾರ್ಸಿಲೋನಾದ ಬುಕ್ ಛೇಂಬರ್ ಆಗ ಬಹಳ ಚಟುವಟಿಕೆಯಿಂದಿದ್ದು, ಪುಸ್ತಕ ದಿನದ ಆಚರಣೆಯನ್ನು ಬೆಂಬಲಿಸಿತು. ಅಲ್ಲದೆ, ಆಗ ಸ್ಪೇನಿನ ರಾಜನಾಗಿದ್ದ 13ನೇ ಅಲ್ಫೋನ್ಸೋ, 1926ರಲ್ಲಿ ಅಕ್ಟೋಬರ್ 7 ಅನ್ನು ಪುಸ್ತಕ ದಿನವನ್ನಾಗಿ ಘೋಷಿಸಿ ರಾಜಾಜ್ಞೆಯನ್ನೂ ಹೊರಡಿಸಿಬಿಟ್ಟ!

ನಂತರ ಪುಸ್ತಕ ಸಂಸ್ಕೃತಿಯ ಮಹತ್ವವನ್ನು ಮನಗಂಡ ವಿಶ್ವಸಂಸ್ಥೆ, 1995ರಲ್ಲಿ ಪ್ಯಾರಿಸ್‌ನಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ, ಅಧಿಕೃತವಾಗಿ ಅಂತಾರಾಷ್ಟ್ರೀಯ ಪುಸ್ತಕ ದಿನವನ್ನು ಆಚರಿಸಲು ನಿರ್ಧರಿಸಿತು. ಪುಸ್ತಕ ಲೋಕದ ಅವಿಭಾಜ್ಯ ಅಂಗವಾದ ಹಕ್ಕುಸ್ವಾಮ್ಯ ದಿನವನ್ನೂ ಅಂದೇ ಆಚರಿಸುವುದು ಅತ್ಯಂತ ಸೂಕ್ತವೆಂದು ಯೋಚಿಸಿತು. ಆದರೆ, ಅಕ್ಟೋಬರ್ 7ರ ಬದಲಾಗಿ, ಸೆರ್ವಾಂತೆ ನಿಧನನಾದ ಏಪ್ರಿಲ್ 23ರ ದಿನಾಂಕವನ್ನು ನಿಗದಿ ಮಾಡಿತು. ಇದಕ್ಕೆ ಸೆರ್ವಾಂತೆಯ ಜೊತೆಗೆ, ವಿಶ್ವಮಾನ್ಯ ನಾಟಕಕಾರನಾದ ಷೇಕ್ಸ್‌ಪಿಯರ್ ಮತ್ತು ಸ್ಪೇನ್ ಮೂಲದ ಪೆರುವಿನ ಕತೆಗಾರ ಗಾರ್ಸಿಲಾಸೊ ಡಿ ಲಾ ವೇಗಾ ಮರಣಿಸಿದ ದಿನಾಂಕವೂ ಏಪ್ರಿಲ್ 23. (ಷೇಕ್ಸ್‌ಪಿಯರ್ ಹುಟ್ಟಿದ್ದೂ ಏಪ್ರಿಲ್ 23ರಂದೇ!) ಈ ಮೂವರೂ ಸಾಹಿತ್ಯಮೇರುಗಳಿಗೆ ಗೌರವ ಸಲ್ಲಿಸಿದ ಹಾಗಾಗುತ್ತದೆ ಎಂದು, ವಿಶ್ವಸಂಸ್ಥೆ ಏಪ್ರಿಲ್ 23 ಅನ್ನು ಅಂತಾರಾಷ್ಟ್ರೀಯ ಪುಸ್ತಕ ದಿನವನ್ನಾಗಿ ಆಚರಿಸುವ ನಿರ್ಣಯ ಕೈಗೊಂಡಿತು.

ಅಂದಿನಿಂದ ಅವ್ಯಾಹತವಾಗಿ ನಡೆದುಕೊಂಡು ಬರುತ್ತಿರುವ ಈ ದಿನಾಚರಣೆ, ಪುಸ್ತಕಗಳ ಮಹತ್ವವನ್ನು ಜನರಿಗೆ ಅರ್ಥ ಮಾಡಿಸಲೆತ್ನಿಸುತ್ತದೆ. ಪ್ರತಿವರ್ಷವೂ ಒಂದೊಂದು ಘೋಷವಾಕ್ಯವನ್ನು ನೀಡುತ್ತದೆ. ಈ ಬಾರಿ, Read Your Way ಎಂದಿದೆ.

ಇದರ ಜೊತೆಗೆ, ಪ್ರತಿವರ್ಷವೂ ಪ್ರಪಂಚದ ಯಾವುದಾದರೂ ಮೂಲೆಯಲ್ಲಿರುವ ಒಂದು ನಗರವನ್ನು ಆರಿಸಿ, ಆ ಪ್ರಸಕ್ತ ವರ್ಷಕ್ಕೆ ಅದನ್ನು WorldBook



Capital ಎಂದು ಘೋಷಿಸಿ, ಇಡೀ ವರ್ಷ ಅಲ್ಲಿ ಓದಿನ ಹವ್ಯಾಸವನ್ನು, ಪುಸ್ತಕ ಪ್ರೀತಿ ಬೆಳೆಸುವ ಚಟುವಟಿಕೆಗಳನ್ನು ಆಯೋಜನೆ ಮಾಡಲಾಗುತ್ತದೆ. 2001ರಿಂದ ಆರಂಭಗೊಂಡ ಈ ಯೋಜನೆಯ ಮೊದಲ ನಗರವಾಗಿ, ಪುಸ್ತಕ ದಿನದ ಪರಿಕಲ್ಪನೆಯ ಮಾತೃಭೂಮಿಯಾದ ಸ್ಪೇನ್‌ನ ಮಾಡ್ರಿಡ್ ಅನ್ನು ಆರಿಸಲಾಗಿತ್ತು. ಈ ವರ್ಷ ಬ್ರಝಿಲ್‌ನ ರಿಯೋ ಡಿ ಜನೈರೋ ಆಯ್ಕೆಯಾಗಿದೆ. 2003ರಲ್ಲಿ ನಮ್ಮ ದೇಶದ ರಾಜಧಾನಿ ದೆಹಲಿ World Book Capital ಆಗಿ ಆಯ್ಕೆಯಾಗಿತ್ತು.

ಪ್ರಪಂಚದಲ್ಲಿ ಮೊದಲ ಆಧುನಿಕ ಪುಸ್ತಕ ಚೀನಾದಲ್ಲಿ ಮುದ್ರಿತವಾಗಿತ್ತು. ಬುದ್ಧನ ತತ್ವಗಳನ್ನು ಸಾರುವ ಡೈಮಂಡ್ ಸೂತ್ರ ಎನ್ನುವ ಪುಸ್ತಕ, 868ರಲ್ಲಿ ವುಡ್ ಬ್ಲಾಕ್ ಪ್ರಿಂಟಿಂಗ್ ವಿಧಾನದಲ್ಲಿ ಮುದ್ರಿತವಾದ ಈ ಪುಸ್ತಕ ಚೀನಾದ ಟ್ಯಾಂಗ್ ರಾಜಮನೆತನದ ಕಾಲದ್ದು.

ಆದರೆ ಇದಕ್ಕೂ ಸಾವಿರಾರು ವರ್ಷಗಳ ಹಿಂದೆಯೇ, ತಾಳೆಗರಿಯಲ್ಲಿ ನಮ್ಮ ದೇಶದಲ್ಲಿ ವೇದ ಉಪನಿಷತ್ತು, ಪುರಾಣಗಳು, ರಾಮಾಯಣ, ಮಹಾಭಾರತ, ಭಾಗವತ, ಪಂಚತಂತ್ರದಂತಹ ಅಮರ ಕೃತಿಗಳು ಬರೆಯಲ್ಪಟ್ಟಿದ್ದವು. ಇವುಗಳ ಅಸಂಖ್ಯ ಪ್ರತಿಗಳನ್ನು ಮಾಡಿಸಿ ಎಲ್ಲರ ಕೈಗೆ ದೊರಕುವಂತೆ ಮಾಡುವ ವ್ಯವಸ್ಥೆ ಆಗ ಜಾರಿಯಲ್ಲಿತ್ತು. ದಾನ ಚಿಂತಾಮಣಿ ಎಂದು ಹೆಸರಾಗಿದ್ದ ಅತ್ತಿಮಬ್ಬೆ, ಪೊನ್ನನ ಶಾಂತಿ ಪುರಾಣದ 1000 ಪ್ರತಿ ಮಾಡಿಸಿ ಹಂಚಿದ್ದನ್ನು ನಾವು ತಿಳಿದಿದ್ದೇವೆ. ಶಿಲಾಶಾಸನಗಳೂ ಹಲವು ಕತೆ ಹೇಳುತ್ತವೆ.

ಮೆಸಪಟೋಮಿಯನ್ನರು, ಜೇಡಿಮಣ್ಣಿನ ಹಲಗೆಗಳ ಮೇಲೆ ಬರೆಯುತ್ತಿದ್ದು, 20000ಕ್ಕೂ ಹೆಚ್ಚು ಅಂತಹ ಹಲಗೆಗಳು ದೊರಕಿವೆ. ಹರಪ್ಪಾ ಮೊಹೆಂಜೊದಾರೋದಲ್ಲಿ ನಡೆದ ಉತ್ಖನನದಲ್ಲಿಯೂ ವೇದಗಳ ಸಾಲುಗಳು ಬರೆಯಲ್ಪಟ್ಟ ಇಂತಹ ಜೇಡಿಮಣ್ಣಿನ ಹಲಗೆಗಳು ದೊರೆತಿವೆ. (ಶಂಕರ ಮೊಕಾಶಿ ಪುಣೇಕರರು ತಮ್ಮ ಅವಧೇಶ್ವರಿ ಕಾದಂಬರಿಯಲ್ಲಿ ಹೀಗೆ ದೊರೆತ ಹಲಗೆಯ ಉಲ್ಲೇಖವನ್ನು ಅತ್ಯಂತ ಕ್ರಿಯಾಶೀಲವಾಗಿ ಮಾಡಿರುವುದು ಇಲ್ಲಿ ನೆನಪಾಗುತ್ತಿದೆ.)

ಚೈನಾದಲ್ಲಿ, ಬಿದಿರಿನ ಪಟ್ಟಿಗಳು, ರೇಷ್ಮೆ ವಸ್ತ್ರ, ಮೂಳೆಗಳು ಮತ್ತು ಮರಗಳನ್ನು ಬರವಣಿಗೆಗಾಗಿ ಬಳಕೆ ಮಾಡಿರುವುದು ತಿಳಿದು ಬಂದಿದೆ. ಈಜಿಪ್ಟ್‌ನಲ್ಲಿ ಪ್ಯಾಪಿರಸ್ ಎಂಬ ತೆಳುವಾದ ಹಾಳೆ ಮೊದಲು ತಯಾರಾದರೂ, ಪೇಪರ್‌ನ ಆವಿಷ್ಕಾರದ ಹೆಗ್ಗಳಿಕೆ ಚೈನಾದವರದ್ದೇ.

ಪೇಪರ್‌ನ ಆವಿಷ್ಕಾರದ ನಂತರ, ಪುಸ್ತಕ ಮುದ್ರಣದ ನಾಗಾಲೋಟ ಮಾತ್ರವಲ್ಲ, ಜ್ಞಾನ ಸಾರ್ವತ್ರಿಕವಾಗಿ ಎಲ್ಲರಿಗೂ ದೊರೆಯುವಂತಾಯಿತು. ಜ್ಞಾನಸಾಗರದ ಪ್ರವೇಶ, ಅನುಭವ, ಆಹ್ಲಾದ, ಆನಂದ ಎಲ್ಲರಿಗೂ ಪ್ರಾಪ್ತವಾದುದೇ ಮಾನವಕುಲಕ್ಕೆ ದೊರೆತ ಸೌಭಾಗ್ಯ. ಓದುಗರ ಮನತಣಿಸಲು ಸರ್ಕಾರಿ ಗ್ರಂಥಾಲಯಗಳು ಇವೆಯಾದರೂ, ಪುಸ್ತಕ ಪ್ರಿಯರ ಮನೆಗಳಲ್ಲೂ ಗ್ರಂಥಾಲಯಗಳು ಮೈದಳೆದಿರುತ್ತವೆ.

ಸಾಂಪ್ರದಾಯಿಕ ಪುಸ್ತಕಗಳು ಮಾತ್ರವಲ್ಲದೆ, ತಂತ್ರಜ್ಞಾನದಲ್ಲಿ ಉಂಟಾಗಿರುವ ಕಲ್ಪನಾತೀತ ಬೆಳವಣಿಗೆಯಿಂದಾಗಿ ಪುಸ್ತಕಗಳು ಹೊಸರೂಪ ತಳೆದಿವೆ. ಈಗ ಪುಸ್ತಕಗಳು ಪೇಪರ್‌ನ ಮೇಲೆ ಮಾತ್ರವಲ್ಲ, ಡಿಜಿಟಲ್ ಪರದೆಯ ಮೇಲೆ ಇ–ಪುಸ್ತಕಗಳ ರೂಪದಲ್ಲಿ ನಮ್ಮ ಕೈಲಿರುವ ಮೊಬೈಲ್‌ಗಳವರೆಗೂ ಬಂದು ತಲುಪಿವೆ. ಓದುವ ಮನಸ್ಸಿದ್ದು, ಒಂದೆಡೆ ಕುಳಿತು ಓದುವ ವ್ಯವಧಾನ, ಸಮಯ ಇಲ್ಲದವರಿಗಾಗಿ ಕೇಳುವ ಪುಸ್ತಕಗಳು, ಅಂದರೆ ಆಡಿಯೋ ಪುಸ್ತಕಗಳು ಈಗ ಲಭ್ಯವಿದೆ. ಕೆಲಸ ಮಾಡುತ್ತಿರುವಾಗ, ನಡೆಯುತ್ತಿರುವಾಗ, ಓಡುತ್ತಲಿರುವಾಗ, ವಿಶ್ರಾಂತಿ ತೆಗೆದುಕೊಳ್ಳುತ್ತಿರುವಾಗ, ಪ್ರಯಾಣದಲ್ಲಿರುವಾಗ, ನಮಗಿಷ್ಟವಾದ ಪುಸ್ತಕವನ್ನು ಯಾರೋ ಓದಿ ಹೇಳುತ್ತಾರೆಂದರೆ!!

> ❝ ಕೋವಿಡ್‌ನ ನಂತರ ಬಹುತೇಕರು ಎಲ್ಲದ್ದಕ್ಕೂ ಮೊಬೈಲ್‌ನ ಮೊರೆ ಹೋಗುತ್ತಿದ್ದಾರೆ. ಪುಸ್ತಕ, ವೃತ್ತಪತ್ರಿಕೆಗಳ ಲಭ್ಯತೆ ಇದ್ದರೂ, ಅವುಗಳ ಡಿಜಿಟಲ್ ಕಾಪಿಗಳನ್ನು ಓದುವ ಅಭ್ಯಾಸ ಮಾಡಿಕೊಂಡಿದ್ದಾರೆ. ಕಾಲದ ಜೊತೆ ನಾವೂ ದಾಪುಗಾಲು ಹಾಕಬೇಕು ನಿಜ. ಆದರೆ ಪುಸ್ತಕವನ್ನು ಕೈಲಿ ಹಿಡಿದು ಓದಿದಾಗ ಆಗುವ ಅನುಭವ ಮೊಬೈಲ್ ಅಥವಾ ಟ್ಯಾಬ್ ಅನ್ನು ಹಿಡಿದು ಓದಿದಾಗ ಆಗುವುದಿಲ್ಲ. ಓದಿದ ವಿಷಯಗಳು ಮನಸ್ಸಿನಲ್ಲಿ ಉಳಿಯುವುದು ಪುಸ್ತಕವನ್ನು ಕೈಲಿ ಹಿಡಿದು ಓದಿದಾಗಲೇ.

ಹೌದು, ಸರ್ಕಾರಗಳು ಮತ್ತು ತಂತ್ರಜ್ಞಾನಗಳೇನೋ ನಮ್ಮನ್ನು ಪುಸ್ತಕಗಳ ಬಹು ಸನಿಹಕ್ಕೆ ಕರೆದೊಯ್ಯುವ ಆವಿಷ್ಕಾರಗಳನ್ನು ಮಾಡುತ್ತಲೇ ಇದೆ. ಆದರೆ ಇದರಿಂದಾಗಿ ನಾವೆಷ್ಟು ಪುಸ್ತಕ ಪ್ರಿಯರಾಗಿದ್ದೇವೆ, ನಾವೆಷ್ಟು ಪುಸ್ತಕ ಪ್ರೀತಿ ಬೆಳೆಸಿಕೊಂಡಿದ್ದೇವೆ ಎಂಬುದನ್ನು ಅವಲೋಕಿಸಿಕೊಂಡರೆ ಉತ್ತರ ನಮ್ಮನ್ನು ನಿರಾಶರಾಗಿಸುವುದರಲ್ಲಿ ಸಂಶಯವಿಲ್ಲ.

ಮೊಬೈಲ್‌ನ ಕಬಂಧಬಾಹುಗಳು, ನಮ್ಮ ಎಲ್ಲ ಒಳ್ಳೆಯ ಹವ್ಯಾಸಗಳನ್ನು, ಅಭ್ಯಾಸಗಳನ್ನು ಆಪೋಶನ ತೆಗೆದುಕೊಂಡುಬಿಟ್ಟಿವೆ. ಅದರಲ್ಲೂ ಈಗ ರೀಲ್ಸ್ ಮತ್ತು ಶಾಟ್ಸ್‌ಗಳ ಹುಚ್ಚು ಉತ್ತುಂಗಕ್ಕೇರಿ, ಏಕಾಗ್ರತೆಯ ಅತೀವ ಕೊರತೆ, ದೊಡ್ಡವರು–ಚಿಕ್ಕವರೆನ್ನದೆ ಎಲ್ಲರನ್ನೂ ಕಾಡುತ್ತಿದೆ. 10 ನಿಮಿಷಕ್ಕಿಂತ ಹೆಚ್ಚಾಗಿ ಮಕ್ಕಳಿಗೆ ಏಕಾಗ್ರತೆ ಸಾಧಿಸಲು ಸಾಧ್ಯವಾಗುತ್ತಿಲ್ಲ ಎಂಬ ಕಟುಸತ್ಯ ಇಂದಿನ ವಾಸ್ತವವಾಗಿದೆ. ಮಕ್ಕಳು ಮಾತ್ರವಲ್ಲ, ದೊಡ್ಡವರ ಪಾಡೂ ಇದೇ.

ಮನೆಗೆ ಬರುವ ದಿನಪತ್ರಿಕೆಯನ್ನು ಗಚ್ಚಿತವಾಗಿ ಕುಳಿತು ಓದುವಷ್ಟು ಸಹನೆ ನಮ್ಮಲ್ಲಿ ಇಲ್ಲವಾಗಿದೆ. ಇನ್ನು ಮಕ್ಕಳಲ್ಲಿ ಚಂಚಲತೆ ಮೇರೆ ಮೀರಿದೆ.

ಒಂದು ಅಧ್ಯಯನದ ಪ್ರಕಾರ, ಕೋವಿಡ್‌ನ ನಂತರ ಬಹುತೇಕರು ಎಲ್ಲದ್ದಕ್ಕೂ ಮೊಬೈಲ್‌ನ ಮೊರೆ ಹೋಗುತ್ತಿದ್ದಾರೆ. ಪುಸ್ತಕ, ವೃತ್ತಪತ್ರಿಕೆಗಳ ಲಭ್ಯತೆ ಇದ್ದರೂ, ಅವುಗಳ ಡಿಜಿಟಲ್ ಕಾಪಿಗಳನ್ನು ಓದುವ ಅಭ್ಯಾಸ ಮಾಡಿಕೊಂಡಿದ್ದಾರೆ. ಕಾಲದ ಜೊತೆ ನಾವೂ ದಾಪುಗಾಲು ಹಾಕಬೇಕು ನಿಜ. ಆದರೆ ಪುಸ್ತಕವನ್ನು ಕೈಲಿ ಹಿಡಿದು ಓದಿದಾಗ ಆಗುವ ಅನುಭವ ಮೊಬೈಲ್ ಅಥವಾ ಟ್ಯಾಬ್ ಅನ್ನು ಹಿಡಿದು ಓದಿದಾಗ ಆಗುವುದಿಲ್ಲ. ಓದಿದ ವಿಷಯಗಳು ಮನಸ್ಸಿನಲ್ಲಿ ಉಳಿಯುವುದು ಪುಸ್ತಕವನ್ನು ಕೈಲಿ ಹಿಡಿದು ಓದಿದಾಗಲೇ.

ಇತ್ತೀಚೆಗೆ ನೆದರ್‌ಲ್ಯಾಂಡ್‌ನ ಸರ್ಕಾರ ತೆಗೆದುಕೊಂಡ ನಿರ್ಣಯದ ಬಗ್ಗೆ ನೀವೆಲ್ಲರೂ ಓದಿಯೇ ಇರುತ್ತೀರಿ. 10 ವರುಷಗಳಷ್ಟು ಹಿಂದೆಯೇ ನೆದರ್‌ಲ್ಯಾಂಡ್ ಸರ್ಕಾರ ತಂತ್ರಜ್ಞಾನದ ಪೂರ್ಣ ಪ್ರಮಾಣದ ಉಪಯುಕ್ತತೆಯನ್ನು ಪಡೆಯುವ ಹುಮ್ಮಸ್ಸಿನಲ್ಲಿ ಡಿಜಿಟಲ್ ಪಠ್ಯ ಪುಸ್ತಕಗಳನ್ನು ಬಳಸಲು ಉತ್ತೇಜನ ನೀಡಿತ್ತು. ಆದರೆ ಅದು ಮಕ್ಕಳಲ್ಲಿನ ಸೃಜನಶೀಲತೆಯನ್ನು ಕೊಲ್ಲುತ್ತಿರುವುದು ಅರಿವಾಗಿ ಇದೀಗ ಮರಳಿ ಹಳೆಯ ಪಠ್ಯ ಪುಸ್ತಕ ಪದ್ಧತಿಗೆ ಮರಳಲು ಆದೇಶ ನೀಡಿದೆ.

ಪುಸ್ತಕಗಳು, ಪುಸ್ತಕ ಓದುವ ಹವ್ಯಾಸ ಓದುಗರಲ್ಲಿ ಉಂಟುಮಾಡುವ ಪರಿಣಾಮವೇ ಅದ್ಭುತ. ಏಕಾಗ್ರತೆಯಿಂದ ಓದಿದರೆ ಪುಸ್ತಕ ನಮ್ಮ ಜ್ಞಾನವನ್ನು ಅಭಿವೃದ್ಧಿ ಮಾಡಿ, ನಮ್ಮ ಭಾಷೆಯನ್ನು ಚಂದಗೊಳಿಸುತ್ತದೆ. ನಮ್ಮ ಶಬ್ದಭಂಡಾರವನ್ನು ಸಮೃದ್ಧವಾಗಿಸಿ ನಮ್ಮ ಕಲ್ಪನಾಶೀಲತೆಯನ್ನು ವೃದ್ಧಿಸುತ್ತದೆ. ಲೋಕದ ವ್ಯವಹಾರಗಳ ಅಂದಾಜು ಸಿಗುವಂತೆ ನಮ್ಮನ್ನು ತರಬೇತುಗೊಳಿಸುತ್ತದೆ. ಮನುಷ್ಯರ ಭಾವಲೋಕಕ್ಕೊಂದು ಪ್ರವೇಶ ದೊರಕಿಸಿ ನಾವು ಸಹೃದಯಿಗಳಾಗುವಂತೆ ಮಾಡುತ್ತದೆ. ಕಲ್ಪನಾಶೀಲ ಕೃತಿಗಳು ನಮ್ಮನ್ನು ನಾವು ಕಾಣದ, ಆದರೆ ನಾವು ಎದುರಿಸಲೇಬೇಕಾದ ಜೀವನಕ್ಕೆ ತಯಾರು ಮಾಡುತ್ತವೆ. (ಪುಸ್ತಕದ ಬದನೆಕಾಯಿ ಎಂಬ ನುಡಿಗಟ್ಟು ಇದೆಯಾದರೂ ಅದು ಎಲ್ಲ ಸಮಯದಲ್ಲಿಯೂ ನಿಜವಲ್ಲ!) ನಮ್ಮ ಸರ್ವತೋಮುಖ ಬೆಳವಣಿಗೆಗೆ ಸದ್ದಿಲ್ಲದೆ ಶ್ರಮಿಸುವ ನಿಸ್ವಾರ್ಥ ವಸ್ತುಗಳು ಪುಸ್ತಕಗಳು.

ಇನ್ನು ವಿವಿಧ ಜ್ಞಾನ ಶಾಖೆಗಳಿಗೆ ಸಂಬಂಧಿಸಿದ ಪುಸ್ತಕಗಳ ಉಪಯುಕ್ತತೆಯ ಬಗ್ಗೆ ವಿಶೇಷವಾಗಿ ಹೇಳಬೇಕಿಲ್ಲ. ಇಂದು ಗೂಗಲ್ ಎಐ ಚಾಟ್ ಜಿಪಿಟಿಗಳು ಇದ್ದರೂ, ಪುಸ್ತಕಗಳಿಗೆ ಬೇಡಿಕೆ ಕಡಿಮೆಯಾಗಿಲ್ಲ. ಪುಸ್ತಕಗಳಿಂದಾಗಿ 147 ಬಿಲಿಯನ್ ಗಟ್ಟಲೆ ವ್ಯವಹಾರ ವಾರ್ಷಿಕವಾಗಿ ಜಾಗತಿಕ ಮಟ್ಟದಲ್ಲಿ ನಡೆದರೆ, ಭಾರತದಲ್ಲಿಯೇ 14 ಬಿಲಿಯನ್‌ವರೆಗೂ ಇದೆ ಎಂದರೆ ಊಹಿಸಿಕೊಳ್ಳಿ.

ಆದರೆ ಪುಸ್ತಕ ಓದುವವರ ಸಂಖ್ಯೆ ಇಂದು ಭಾರತದಲ್ಲಿ ಕಡಿಮೆಯಾಗುತ್ತಿರುವುದೂ ಅಷ್ಟೇ ನಿಜ. National Literacy Trust ನಡೆಸಿದ ಸರ್ವೇ ಪ್ರಕಾರ ವರ್ಷದಿಂದ ವರ್ಷಕ್ಕೆ ಓದುಗರ ಸಂಖ್ಯೆ 8%ರಷ್ಟು ಕ್ಷೀಣಿಸುತ್ತಿದೆ. ಹೊಸ ಹೊಸ ರೀತಿಯ ಚಿಂತನೆಗಳುಳ್ಳ ಪುಸ್ತಕಗಳು, ಅತ್ಯುತ್ಸಾಹಿಯುವ ಬರಹಗಾರರು ಬರುತ್ತಿದ್ದಾರೆ. ಆದರೂ ಓದಿನ ಬಗೆಗಿನ ಪ್ರೀತಿ, ಹುಚ್ಚು, ಸೆಳೆತ ಕಡಿಮೆಯಾಗುತ್ತಿರುವುದು ವಿಷಾದಕರ.

ಶಾಲೆಗಳಲ್ಲಿ ಗ್ರಂಥಾಲಯದ ಅವಧಿಯನ್ನು ಬೇರೆ ಬೇರೆ ಉತ್ಪಾದಕ ವಿಷಯಗಳಿಗೆ ಬಳಸಿಕೊಳ್ಳುವ ಅಭ್ಯಾಸ, ಅತಿಯಾದ ಸ್ಪರ್ಧಾತ್ಮಕತೆ, ಯಾಂತ್ರಿಕ ಜೀವನ ದಂಡುಪಾಲಿಸಿರುವ ನಾಗಾಲೋಟ, ಮೊಬೈಲ್‌ನ ಬಳಕೆ ಎಲ್ಲವೂ ಸೇರಿ ನಮ್ಮನ್ನು ಪುಸ್ತಕಗಳಿಂದ ದೂರ ಮಾಡಿವೆ. ಜ್ಞಾನಿಗಳು ತಮ್ಮ ಪರಿಶ್ರಮದ ಕಲಿಕೆಯನ್ನು ಒಂದಷ್ಟು ಪುಟಗಳಿಗೆ ಭಟ್ಟಿ ಇಳಿಸಿ ಕೊಡುವ ಪುಸ್ತಕಗಳಲ್ಲಿ ಅದೆಂತಹಾ ಸಾರವಿರಬಹುದು

ಪುಸ್ತಕ ಸೃಷ್ಟಿಸಿಕೊಡುವ ಲೋಕ ಅದೆಷ್ಟು ಮಧುರ ಎಂಬುದು ಬಲ್ಲವರೇ ಬಲ್ಲರು! ನಾವೆಲ್ಲ ಚಿಕ್ಕವರಿದ್ದಾಗ (ಈಗಲೂ!) ಓದಿದ ಬಾಲಮಂಗಳ, ಚಂದಮಾಮ, ಬಾಲಮಿತ್ರ, ಮಂಗಳ, ಸುಧಾ, ತರಂಗ, ಮಯೂರ, ಭಾವನಾ, ತುಷಾರ, ಕರ್ಮವೀರಗಳಂತಹ ಪತ್ರಿಕೆಗಳು ನಮ್ಮನ್ನು ಪ್ರಪಂಚಕ್ಕೆ ಪರಿಚಯಿಸಿದ್ದು ಮಾತ್ರವಲ್ಲ ನಮಗೆ ಹೊಸ ಪ್ರಪಂಚವನ್ನೇ ಸೃಷ್ಟಿಸಿಕೊಟ್ಟಿದ್ದವು. ಈಗ ಚಂದಮಾಮ, ಬಾಲಮಿತ್ರ, ಬಾಲಮಂಗಳ, ಮಂಗಳ, ಭಾವನಾ ಸೇರಿದಂತೆ ಅದೆಷ್ಟೋ ಪತ್ರಿಕೆಗಳು ಮತ್ತು ನಿಯತಕಾಲಿಕೆಗಳು ಕೊನೆಯುಸಿರೆಳೆದಿರುವುದೇ ಪರಿಸ್ಥಿತಿಯನ್ನು ವಿವರಿಸುತ್ತದೆ.

ಪುಸ್ತಕಗಳು ಹೇಗೆ ಪ್ರಭಾವಿಸುತ್ತವೆ ಓದುಗರನ್ನು ಎನ್ನುವುದಕ್ಕೆ, ರಸ್ಕಿನ್ ಅನ್ನು ಓದಿದ ಗಾಂಧೀಜಿ, ಅನಕೃ ಅವರನ್ನು ಓದಿದ ಬೀಚಿ ಅವರಲ್ಲಿ ಆದ ಅಗಾಧ ಬದಲಾವಣೆ ನಮಗೆ ಒಂದೆರಡು ಸಣ್ಣ ಉದಾಹರಣೆಗಳಷ್ಟೇ.

ಪುಸ್ತಕಗಳನ್ನು ಓದುವ ಹವ್ಯಾಸವನ್ನು ಬಲವಂತವಾಗಿಯಾದರು ಬೆಳೆಸಿಕೊಂಡು ಪೋಷಿಸುವ ಜರೂರು ಇಂದು ನಮ್ಮದಾಗಿದೆ. ಈ ಪುಟ್ಟ ಲೇಖನದಲ್ಲಿ ಪುಸ್ತಕದ ಓದಿನಿಂದ ವಿಮುಖರಾಗುತ್ತಿರುವ ನಾನು ಕಳೆದುಕೊಳ್ಳುತ್ತಿರುವುದೇನು ಎಂಬುದನ್ನು ಪೂರ್ಣವಾಗಿ ವಿವರಿಸಲು ಅಸಾಧ್ಯ. ಆದರೆ ಹೀಗೆಯೇ ಮುಂದುವರೆದರೆ ಅಮೂಲ್ಯವಾದ ಅನುಭವವನ್ನು ಕಳೆದುಕೊಳ್ಳುವ ನತದೃಷ್ಟರು ನಾವಾಗುತ್ತೇವೆ ಎಂಬ ಅರಿವು ಆದರೆ ಅದೇ ಉತ್ತಮ ಬದಲಾವಣೆ. ಪ್ರತಿ ಮನೆಯಲ್ಲಿಯೂ ಪುಟ್ಟ ಗ್ರಂಥಾಲಯ ಒಂದನ್ನು ಸ್ಥಾಪಿಸಿ ಪುಸ್ತಕಗಳು ಸದಾ ಕಣ್ಣಿಗೆ ಬೀಳುತ್ತಿರುವ ಹಾಗೆ ಪೋಷಕರು ನೋಡಿಕೊಂಡರೆ, ನಮ್ಮ ಮುಂದಿನ ಪ್ರಜೆಗಳು ಪ್ರಾಜ್ಞರಾಗುತ್ತಾರೆ, ಬದುಕು ಸಹ್ಯವಾಗುತ್ತದೆ.

ರಾಜರಾಜೇಶ್ವರಿನಗರದಲ್ಲಿ ಪ್ರತಿಷ್ಠಿತ ಡೆವಲಪರ್ ಜಿ–ಸ್ಕ್ವಯರ್‌ನಿಂದ

ಪ್ರೀಮಿಯಂ ರೆಸಿಡೆನ್ಷಿಯಲ್ ಪ್ಲಾಟ್‌ಗಳ ದಾಖಲೆ ಮಾರಾಟ

ಮೈಸೂರು, ಏ.23(ಎಂಕೆ)– ಮೈಸೂರಿನ ರಾಜರಾಜೇಶ್ವರಿನಗರದಲ್ಲಿ ದಕ್ಷಿಣ ಭಾರತದ ಪ್ರತಿಷ್ಠಿತ ರಿಯಲ್ ಎಸ್ಟೇಟ್ ಡೆವಲಪರ್ ಜಿ–ಸ್ಕ್ವಯರ್, 2ನೇ ಹಂತದ ಆಲ್ಕೆಮಿ ಪ್ಲಗ್–ಅಂಡ್–ಪ್ಲೇ ಪ್ರೀಮಿಯಂ ರೆಸಿಡೆನ್ಷಿಯಲ್ ಪ್ಲಾಟ್‌ಗಳ ಮಾರಾಟ ಆರಂಭಿಸಿದ್ದು, ಬುಕಿಂಗ್ ಆರಂಭವಾದ 56 ಗಂಟೆಗಳಲ್ಲಿ 1ನೇ ಹಂತದ 264 ಪ್ರೀಮಿಯಂ ರೆಸಿಡೆನ್ಷಿಯಲ್ ಪ್ಲಾಟ್‌ಗಳಲ್ಲಿ 230 ಪ್ಲಾಟ್‌ಗಳು ಬುಕಿಂಗ್ ಆಗಿದ್ದು 150 ಕೋಟಿ ರೂ.ಗಳಿಗೂ ಅಧಿಕ ವಹಿವಾಟು ನಡೆಸಿದೆ ಎಂದು ಜಿ–ಸ್ಕ್ವಯರ್ ವ್ಯವಸ್ಥಾಪಕ ನಿರ್ದೇಶಕ ಬಾಲ ರಾಮಾಜೆಯಂ ತಿಳಿಸಿದ್ದಾರೆ.

ರಾಜರಾಜೇಶ್ವರಿನಗರದಲ್ಲಿ ಭೂಮಿಯ ಮಾರುಕಟ್ಟೆ ದರವು ಪ್ರತಿ ಚದರ ಅಡಿಗೆ ರೂ.7000 ರೂ.ಗಳಿದ್ದು, ಜಿ ಸ್ಕ್ವಯರ್ ಪ್ರತಿ ಚದರ ಅಡಿಗೆ 4,999 ರೂ.ಗಳಿಗೆ ನೀಡುತ್ತಿದೆ. ಜಿ ಸ್ಕ್ವಯರ್ ಆಲ್ಕೆಮಿ ಪ್ಲಗ್–ಅಂಡ್–ಪ್ಲೇ ಪ್ರೀಮಿಯಂ ರೆಸಿಡೆನ್ಷಿಯಲ್ ಪ್ಲಾಟ್‌ಗಳಿಗೆ ಮುಡಾ ಹಾಗೂ ರೇರಾ ಅನುಮೋದನೆ ಯೊಂದಿಗೆ ನೀಡಿದ್ದು, ಕಾನೂನಿನ ಸ್ಪಷ್ಟತೆ ಯೊಂದಿಗೆ ಮಾರಾಟ ಮಾಡುತ್ತಿದೆ ಎಂದು ತಿಳಿಸಿದ್ದಾರೆ.



41 ಎಕರೆ ವಿಸ್ತೀರ್ಣದಲ್ಲಿರುವ 1ನೇ ಹಂತದ ಪ್ರಾಜೆಕ್ಟ್‌ನಲ್ಲಿ 264 ಪ್ಲಾಟ್‌ಗಳಿದ್ದು, 838 ರಿಂದ 3,875 ಚದರ ಅಡಿ ವಿಸ್ತೀರ್ಣದ ಅಭಿವೃದ್ಧಿಯಾದ ಟೌನ್ ಶಿಪ್‌ನೊಂದಿಗೆ ವಿನ್ಯಾಸಗೊಳಿಸಲಾಗಿದೆ. 35ಕ್ಕೂ ಹೆಚ್ಚು ವಿಶ್ವಮಟ್ಟದ ಸೌಲಭ್ಯಗಳ ಅನುಕೂಲತೆಗಳ ಜೊತೆಗೆ ದಿನದ 24 ಗಂಟೆಗಳ ಭದ್ರತೆ, ಬ್ಲಾಕ್ ಟಾಪ್ ರಸ್ತೆಗಳು, ಅಂಡರ್‌ಗ್ರೌಂಡ್ ಡ್ರೈನೇಜ್, ವ್ಯವಸ್ಥಿತ ನೀರು ಪೂರೈಕೆ ಮತ್ತು ಆಧುನಿಕ ಕೊಳಚೆ ಸಂಸ್ಕರಣಾ ಘಟಕ ಹೊಂದಿದೆ ಎಂದು ಮಾಹಿತಿ ನೀಡಿದ್ದಾರೆ.

ಜಿ–ಸ್ಕ್ವಯರ್ ಆಲ್ಕೆಮಿ ಪ್ರಾಜೆಕ್ಟ್, ಮೈಸೂರು ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ ಮತ್ತು ವಿಮಾನ ನಿಲ್ದಾಣಗಳಿಗೆ ಹತ್ತಿರದಲ್ಲಿದ್ದು, ರಿಂಗ್ ರೋಡ್, ನ್ಯೂ ಕಾಂತರಾಜ್ ಅರಸ್ ರಸ್ತೆ ಮತ್ತು ಬೋಗಾದಿ ಮುಖ್ಯ ರಸ್ತೆಗಳ ಮೂಲಕ ಉತ್ತಮ ಸಾರಿಗೆ ಸಂಪರ್ಕ ಹೊಂದಿದೆ. ಬೆಂಗಳೂರು, ಮೈಸೂರು ಹಾಗೂ ಚೆನ್ನೈನ ಗ್ರಾಹಕರನ್ನು ಸೆಳೆಯುತ್ತಿದ್ದು, ಮುಂದಿನ ದಿನಗಳಲ್ಲಿ ಬಂಡವಾಳ ಹೂಡಿಕೆಯ ಪ್ರಮುಖ ನಗರವಾಗಲಿದೆ. 12 ವರ್ಷಗಳಿಂದ 4,000ಕ್ಕೂ ಅಧಿಕ ಎಕರೆ ಪ್ರದೇಶದಲ್ಲಿ 100 ಪ್ರೀಮಿಯಂ ಪ್ರಾಜೆಕ್ಟ್‌ಗಳ ಮೂಲಕ 15,000ಕ್ಕೂ ಹೆಚ್ಚು ಸಂತೋಷದ ಗ್ರಾಹಕರಿಂದ ಜಿ–ಸ್ಕ್ವಯರ್ ಹೊಂದಿದೆ ಎಂದು ಹರ್ಷ ವ್ಯಕ್ತಪಡಿಸಿದ್ದಾರೆ.

ಮೃತ ಕನ್ನಡಿಗರಿಗೆ ತಲಾ 10 ಲಕ್ಷ ರೂ. ಪರಿಹಾರ

ಬೆಂಗಳೂರು: ಜಮ್ಮು ಮತ್ತು ಕಾಶ್ಮೀರದ ಪಹಲ್ಗಾವ್‌ನಲ್ಲಿ ಮಂಗಳವಾರ ಪ್ರವಾಸಿಗರ ಮೇಲೆ ನಡೆದ ಉಗ್ರರ ದಾಳಿಯಲ್ಲಿ ಮೂವರು ಕನ್ನಡಿಗರು ಸೇರಿದಂತೆ 28 ಮಂದಿ ಮೃತಪಟ್ಟಿದ್ದಾರೆ.

ಉಗ್ರರ ದಾಳಿಯಲ್ಲಿ ಮೃತಪಟ್ಟ ಕನ್ನಡಿಗರಿಗೆ ತಲಾ 10 ಲಕ್ಷ ಪರಿಹಾರ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬುಧವಾರ ತಿಳಿಸಿದ್ದಾರೆ.

ಜಮ್ಮು–ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯಲ್ಲಿ ಮೃತಪಟ್ಟಿರುವ ರಾಜ್ಯದ ಪ್ರತಿ ನಾಗರಿಕರ ಕುಟುಂಬಗಳಿಗೆ ತಲಾ ಹತ್ತು ಲಕ್ಷ ರೂ. ಪರಿಹಾರ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.


ಇದಕ್ಕೂ ಮುನ್ನ ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ದಾಳಿ ಸಂಪೂರ್ಣ ಯೋಜಿತವಾಗಿದ್ದು, 28 ಜನರನ್ನು ಬಲಿ ಪಡೆದ ಉಗ್ರರ ಹೇಯಕೃತ್ಯವನ್ನು ಖಂಡಿಸುತ್ತೇನೆ ಎಂದು ಸಿಎಂ ಹೇಳಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581/1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ವಿನೋಬಾ ರಸ್ತೆಯ ಶತಮಾನದ ಕಟ್ಟಡದಲ್ಲಿ ರಾರಾಜಿಸುತ್ತಿದೆ ವಕ್ಫ್ ಮಂಡಳಿ ನೋಟಿಸ್!

ಮೇ 9ರೊಳಗೆ ಉತ್ತರಿಸುವಂತೆ ಸೂಚನೆ





1916ರ ಮಾರ್ಚ್ 11ರಂದು ಉದ್ಘಾಟನೆಗೊಂಡಿರುವ ಕಡಬದ ನಾರಾಯಣ ಶೆಟ್ಟರ್ ಧರ್ಮ ಸ್ಟೂಡೆಂಟ್ ಹೋಂ ಶಿಲಾಫಲಕ. ಬಲಚಿತ್ರದಲ್ಲಿ ಮೈಸೂರಿನ ವಿನೋಬಾ ರಸ್ತೆಯ ಶೃಂಗಾರ ಹೋಟೆಲ್ ಎದುರಿನ ಎಂ.ಕೆ.ಹಾಸ್ಟೆಲ್ ಕಟ್ಟಡದ ಮುಂದೆ ನೋಟಿಸ್ ಅಂಟಿಸಿರುವುದು.

ಮೈಸೂರು, ಏ.23(ಆರ್‌ಕೆ)– ರಾಜ್ಯಾದ್ಯಂತ ರೈತರ ಭೂಮಿ ಸೇರಿದಂತೆ ಹಲವು ಆಸ್ತಿ ತಮಗೆ ಸೇರಿದ್ದು ಎಂದು ವಕ್ಫ್ ಮಂಡಳಿ ಪ್ರತಿಪಾದಿಸಿತ್ತು. ಕೆಲವು ಆಸ್ತಿಗಳಿಗೆ ಸಂಬಂಧಿಸಿದಂತೆ ನೋಟಿಸ್ ಸಹ ನೀಡಿತ್ತು. ಅದು ಭಾರಿ ಸುದ್ದಿಯೂ ಆಗಿತ್ತು. ಇದೀಗ ಮೈಸೂರಿನ ಹೃದಯ ಭಾಗ ವಿನೋಬಾ ರಸ್ತೆಯ ಕಡಬದ ನಾರಾಯಣ ಶೆಟ್ಟರ್ ಧರ್ಮ ಸ್ಟೂಡೆಂಟ್ ಹೋಂ, 109 ವರ್ಷಗಳ ಕಟ್ಟಡವೂ ತಮಗೆ ಸೇರಿದ್ದು ಎಂದು ವಕ್ಫ್ ಪ್ರತಿಪಾದಿಸಿದೆ.

ಎಂ.ಕೆ.ಹಾಸ್ಟೆಲ್ ನಡೆಯುತ್ತಿರುವ ಈ ಕಟ್ಟಡದ ಮುಂದೆ ಇಂದು ವಕ್ಫ್ ಮಂಡಳಿಯ ವಿಚಾರಣಾಧಿಕಾರಿ, ನ್ಯಾಯಾಲಯದ ಚೀಫ್ ಎಕ್ಸಿಕ್ಯೂಟಿವ್ ಆಫೀಸರ್ ಸಹಿ ಮಾಡಿರುವ ಆಂಗ್ಲ ಭಾಷೆಯ ನೋಟಿಸ್ ಅಂಟಿಸಲಾಗಿದ್ದು, ಮೇ 9ರೊಳಗಾಗಿ ಉತ್ತರ ನೀಡುವಂತೆ ತಿಳಿಸಲಾಗಿದೆ. ಬೆಂಗಳೂರಿನ ಕನ್ನಿಂಗ್‌ಹ್ಯಾಮ್ ರಸ್ತೆಯಲ್ಲಿರುವ ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ನೀಡಿರುವ ಏಪ್ರಿಲ್ 3ರ ನೋಟಿಸ್‌ನಲ್ಲಿ ವಿನೋಬಾ ರಸ್ತೆಯ ಬಿಸ್ಮಿಲ್ಲಾ ಷಾ ಖಾದ್ರಿ, ಮಕಾನ್‌ಗೆ ಸೇರಿದ ಆಸ್ತಿಯನ್ನು ಒತ್ತುವರಿ ಮಾಡಲಾಗಿದೆ ಎಂದು ಜಿಲ್ಲಾ ವಕ್ಫ್ ಅಧಿಕಾರಿಗಳು 2025ರ ಜನವರಿ 31ರಂದು ವರದಿ ನೀಡಿದ್ದು, ದೇವರಾಜ ಮೊಹಲ್ಲಾದ ವಿನೋಬಾ ರಸ್ತೆಯಲ್ಲಿರುವ ಪೂರ್ವ–ಪಶ್ಚಿಮ 54 ಅಡಿ ಮತ್ತು ಉತ್ತರ–ದಕ್ಷಿಣ 100 ಅಡಿ ಒಟ್ಟು 3,268 ಚದರಡಿ ವಿಸ್ತೀರ್ಣದ ಆಸ್ತಿ ನಮ್ಮ ಸಂಸ್ಥೆಗೆ ಸೇರಿದ್ದು ಎಂದು ನಮೂದಿಸಲಾಗಿದೆ.

ಮೆ॥ ಎಂ.ಕೆ.ಹಾಸ್ಟೆಲ್ ವಿಳಾಸಕ್ಕೆ ನೋಟಿಸ್ ಅಂಟಿಸಲಾಗಿದ್ದು, ಈ ಸಂಬಂಧ 2025ರ ಮೇ 9ರೊಳಗೆ ವಕ್ಫ್ ಬೋರ್ಡ್ ಕಚೇರಿಗೆ ಲಿಖಿತ ವಿವರಣೆ ನೀಡುವಂತೆ ತಿಳಿಸಲಾಗಿದೆ. ಮೂಲತಃ ಈ ಕಟ್ಟಡವನ್ನು 1916ರ ಮಾರ್ಚ್ 11ರಂದು ಉದ್ಘಾಟನೆ ಮಾಡಿರುವ ಬಗ್ಗೆ ಶಿಲಾಫಲಕ ಅಳವಡಿಸಲಾಗಿದೆ. ಅದರಲ್ಲಿ 'ಶ್ರೀ ಸಂಪಂಗಿ ರಾಮ ಪ್ರಸನ್ನ ಮೈಸೂರು ಆಳಿದ ಮಹಾಸ್ವಾಮಿಯವರ ಪೋಷ್ಯ ವರ್ಗಕ್ಕೆ ಸೇರಿದ ಸರಾಫ್ ಕಡಬದ ನಾರಾಯಣ ಶೆಟ್ಟರ್, ಧರ್ಮ ಸ್ಟೂಡೆಂಟ್ಸ್ ಹೋಂ ಎಂದು ಹಳೆಗನ್ನಡದಲ್ಲಿ ಬರೆಯಲಾಗಿದೆ.

ಪ್ರಸ್ತುತ ಕಟ್ಟಡದಲ್ಲಿ ವಾಣಿಕಾ ರತ್ನಂ ಕಡಬಂ ಮನ್ನಾರ್ ಕೃಷ್ಣ ಶೆಟ್ಟಿ ಟ್ರಸ್ಟ್‌ನವರು ನಡೆಸುತ್ತಿರುವ ಎಂ.ಕೆ.ಹಾಸ್ಟೆಲ್ ನಾಮಫಲಕವಿದ್ದು, ಒಳಗೆ ಹಲವು ಕೊಠಡಿಗಳಿದ್ದು, ಕೆಲವರು ಅಲ್ಲಿ ಆಶ್ರಯ ಪಡೆದಿದ್ದಾರೆ. ಅಲ್ಲದೆ, ವಿನೋಬಾ ರಸ್ತೆಗೆ ಅಭಿಮುಖವಾಗಿ ಇರುವ ಮಳಿಗೆಗಳನ್ನು ಬಾಡಿಗೆಗೆ ನೀಡಲಾಗಿದೆ.

ಶಿಷ್ಯ ವೇತನಕ್ಕಾಗಿ ಅರ್ಜಿ ಆಹ್ವಾನ

ಮೈಸೂರು, ಏ.23– IISC, IIT, & NIT ಸಂಸ್ಥೆಗಳ ಮೂಲಕ Artifical Inteligence and Machine Learning ವೃತ್ತಿಪರ ತರಬೇತಿ ಶಿಷ್ಯ ವೇತನಕ್ಕಾಗಿ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಪರಿಶಿಷ್ಟ ಪಂಗಡದ 200 ಇಂಜಿನಿಯರಿಂಗ್ ಪದವೀಧರರಿಗೆ ಶಿಷ್ಯ ವೇತನ, ತರಬೇತಿ ನೀಡುವ ಸಂಬಂಧ ಮಾಸಿಕ ರೂ.15.000/– ಗಳಂತೆ ಶಿಷ್ಯ ವೇತನವನ್ನು ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಇಚ್ಛಿಸುವ ಅರ್ಹ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಅರ್ಜಿ ನಮೂನೆಯನ್ನು ಯೋಜನಾ ಸಮನ್ವಯಾಧಿಕಾರಿಗಳ ಕಚೇರಿ, ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆ, ಮೈಸೂರುರವರಿಂದ ಕಚೇರಿ ಅವಧಿಯಲ್ಲಿ ಪಡೆದು ಏಪ್ರಿಲ್ 25 ರೊಳಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಮೊ.ಸಂ: 9742099989 ಅನ್ನು ಸಂಪರ್ಕಿಸಬಹುದು ಎಂದು ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆ ಯೋಜನಾ ಸಮನ್ವಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯುಪಿಎಸ್‌ಸಿ ಸಿಎಸ್‌ಇ ಪರೀಕ್ಷೆ; ಮೈಸೂರಿನ ಎಂ.ಆರ್.ನಿಖಿಲ್‌ಗೆ 724ನೇ ರ್‍ಯಾಂಕ್



ಮೈಸೂರು,ಏ.23(ಪಿಎಂ)– ಕೇಂದ್ರ ಲೋಕಸೇವಾ ಆಯೋಗವು (ಯುಪಿಎಸ್‌ಸಿ) 2024ರ ಸೆಪ್ಟೆಂಬರ್‌ನಲ್ಲಿ ನಡೆಸಿದ್ದ ನಾಗರಿಕ ಸೇವೆಗಳ ಪರೀಕ್ಷೆಯಲ್ಲಿ (ಸಿಎಸ್‌ಇ) ಮೈಸೂರು ನಗರದ ಎಂ.ಆರ್.ನಿಖಿಲ್ 724ನೇ ರ್‍ಯಾಂಕ್ ಗಳಿಸುವ ಮೂಲಕ ಸಾಧನೆ ಮೆರೆದಿದ್ದಾರೆ.

ಎಂ.ಆರ್.ನಿಖಿಲ್ ಮೈಸೂರು ನಗರದ ಆದಿಚುಂಚನಗಿರಿ ರಸ್ತೆಯ ಐಶ್ವರ್ಯನಗರದ ನಿವಾಸಿ. ಇವರ ತಂದೆ ರಮೇಶ್ ಅವರು ಪೌರಾಡಳಿತ ಇಲಾಖೆಯ ನಿವೃತ್ತ ಆಯುಕ್ತರಾಗಿದ್ದರೆ, ತಾಯಿ ಡಾ.ಬಿ.ಕೆ. ಪ್ರತಿಮಾ ಅವರು ಶ್ರೀರಂಗಪಟ್ಟಣದ ಬಿಇಓ ಕಚೇರಿಯಲ್ಲಿ ಶಿಕ್ಷಣ ಸಂಯೋಜಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಕೆಎಎಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಪ್ರಸ್ತುತ ಬೆಂಗಳೂರಿನ ಕಾರ್ಮಿಕ ಆಯುಕ್ತರ ಕಚೇರಿಯಲ್ಲಿ ಎಂ.ಆರ್.ನಿಖಿಲ್ ಸಹಾಯಕ ಕಾರ್ಮಿಕ ಆಯುಕ್ತರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇವರು ತಮ್ಮ ಐದನೇ ಪ್ರಯತ್ನದಲ್ಲಿ ಯುಪಿಎಸ್‌ಸಿ–ಸಿಎಸ್‌ಇ ಪರೀಕ್ಷೆಯಲ್ಲಿ ರ್‍ಯಾಂಕ್ ಗಳಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಮಂಡ್ಯ ತಾಲೂಕಿನ ಮೊಡಚಾಕನಹಳ್ಳಿ ಗ್ರಾಮ ಎಂ.ಆರ್.ನಿಖಿಲ್ ಅವರ ಸ್ವಂತ ಊರು. ಮಂಡ್ಯದಲ್ಲಿ ಶಾಲಾ ಶಿಕ್ಷಣ ಪೂರೈಸಿದ ಇವರು, ಬಳಿಕ ಮಂಡ್ಯದ ಕಾವೇರಿ ಸ್ಕೂಲ್‌ನಲ್ಲಿ ಪಿಯುಸಿ ವ್ಯಾಸಂಗ ಮಾಡಿದರು. ನಂತರ ಮೈಸೂರಿನ ಎಸ್‌ಜೆಸಿಇ ಕಾಲೇಜಿನಲ್ಲಿ ಬಿಇ (ಮೆಕ್ಯಾನಿಕಲ್ ಇಂಜಿನಿಯರಿಂಗ್) ಪದವಿ ಪೂರ್ಣಗೊಳಿಸಿದರು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಎಂ.ಆರ್.ನಿಖಿಲ್, ಬೆಂಗಳೂರಿನಲ್ಲಿ ಶಿಕ್ಷಕರಾಗಿರುವ ಧ್ರುವಕುಮಾರ್ ಹೀರೇಮಠ್ ಅವರ ಮಾರ್ಗದರ್ಶನ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಯಶಸ್ವಿಯಾಗಲು ಸಹಕಾರಿಯಾಯಿತು. ಈ ಪರೀಕ್ಷೆಯಲ್ಲಿ ಯಶಸ್ವಿಯಾಗಬೇಕಾದರೆ, ಮುಖ್ಯವಾಗಿ ನಿರಂತರವಾಗಿ ಅಧ್ಯಯನ ಮಾಡಬೇಕು. ಜೊತೆಗೆ ಅದರಲ್ಲಿ ಸ್ಥಿರತೆ ಕಾಯ್ದುಕೊಳ್ಳಬೇಕು. ಪರೀಕ್ಷೆ ತಯಾರಿಯಲ್ಲಿ ಮುಖ್ಯವಾಗಿ ತಾಳ್ಮೆ ಕಾಯ್ದುಕೊಳ್ಳಬೇಕು. ಪರಿಶ್ರಮ ಹಾಕಬೇಕು. ಆತ್ಮವಿಶ್ವಾಸ ಹೊಂದಬೇಕು. ಈ ಪರೀಕ್ಷೆಯ ಅಧ್ಯಯನಶೀಲತೆಯು ನಮ್ಮ ಸಮಗ್ರ ವ್ಯಕ್ತಿತ್ವ ಸಹ ಬೆಳೆಸಲಿದೆ ಎಂದು ತಿಳಿಸಿದರು.

ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣ, ಮೈಸೂರು –570010

ದೂರವಾಣಿ: 0821–2424673/74 ಇಮೇಲ್: commr_amh@yahoo.in

ಟೆಂಡರ್ ಅಧಿಸೂಚನೆ ಸಂಖ್ಯೆ: ಆ.ಪು.ಸಂ.ಪ/ಸಂ.ವಿ:ಸೇ.ಟೆ–02/2025–26 ದಿನಾಂಕ: 19.04.2025

ಟೆಂಡರ್ ಅಧಿಸೂಚನೆ

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ವತಿಯಿಂದ ಬೆಂಗಳೂರಿನಲ್ಲಿರುವ ವೆಂಕಟಪ್ಪ ಚಿತ್ರಶಾಲೆಯ ಆಡಿಟೋರಿಯಂ ಮೇಲ್ಭಾಗದಲ್ಲಿ ಮೊದಲನೇ ಮಹಡಿಯಲ್ಲಿರುವ ಕೆಫೇಟೇರಿಯಾ ಸ್ಥಳ ಹಾಗೂ ಅಡುಗೆ ಕೋಣೆಗಾಗಿ ಸೇವಾ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತ/ಅರ್ಹ/ಸಂಸ್ಥೆ/ಏಜೆನ್ಸಿಗಳು ಈ ಸೇವೆಯ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಇಂಡೆಂಟ್ ನಂ:DAMH/2025-26/SE0022 ಟೆಂಡರ್ ಡಾಕ್ಯೂಮೆಂಟ್‌ಗಳನ್ನು (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://www.kppp.karnataka.gov.in)ರಲ್ಲಿ ದಿನಾಂಕ:22.04.2025 ರಿಂದ ಪಡೆಯಬಹುದಾಗಿದೆ. ವಿವರ ಇಂತಿವೆ.

ಕಾಮಗಾರಿಗೆ ಸಂಬಂಧಿಸಿದಂತೆ ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ	28.04.2025, 17.00 ಗಂಟೆಗೆ
ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	05.05.2025, 17.00 ಗಂಟೆಗೆ
ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ	08.05.2025, 11.00 ಗಂಟೆಗೆ
ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ	09.05.2025, 11.00 ಗಂಟೆಗೆ

ಸಹಿ/– ಆಯುಕ್ತರು
ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು

DIPR/MYS/KAVITA/88/2025-26



ಇಂದು ಡಾ.ರಾಜ್‌ಕುಮಾರ್ ಜನ್ಮದಿನ ಆಚರಣೆ



ಮಂಡ್ಯ,ಏ.23– ಜಿಲ್ಲಾಡಳಿತ, ಜಿಪಂ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಸರ್ಕಾರಿ ಮಹಿಳಾ ಕಾಲೇಜು ಸ್ವಾಯತ್ತ ವತಿಯಿಂದ ಏ.24 ರಂದು ವರನಟ ಡಾ.ರಾಜ್‌ಕುಮಾರ್ ಅವರ 97ನೇ ಜನ್ಮದಿನಾಚರಣೆ ಕಾರ್ಯಕ್ರಮವನ್ನು ಸರ್ಕಾರಿ ಮಹಿಳಾ ಕಾಲೇಜಿನಲ್ಲಿ ಬೆಳಿಗ್ಗೆ 11 ಗಂಟೆಗೆ ಆಯೋಜಿಸಲಾಗಿದೆ.

ಕೇಂದ್ರ ಸರ್ಕಾರದ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವರಾದ ಹೆಚ್.ಡಿ.ಕುಮಾರಸ್ವಾಮಿ ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸಲಿದ್ದು, ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಎನ್.ಚಲುವರಾಯಸ್ವಾಮಿ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಶಾಸಕರು ಮತ್ತು ಮುಖಂಡರು ಭಾಗವಹಿಸಲಿದ್ದಾರೆ.

ಆರ್ಟಿಕಲ್ 370 ತೆಗೆದಿದ್ದೇ ಜಮ್ಮು–ಕಾಶ್ಮೀರ ನರಮೇಧಕ್ಕೆ ಕಾರಣ

ಶಾಸಕ ರಮೇಶ್ ಬಂಡಿಸಿದ್ದೇಗೌಡ ವಿವಾದಾತ್ಮಕ ಹೇಳಿಕೆ



ಶ್ರೀರಂಗಪಟ್ಟಣ: ಜಮ್ಮು–ಕಾಶ್ಮೀರದಲ್ಲಿ ಪ್ರವಾಸಿಗ ಹಿಂದೂಗಳನ್ನು ಹತ್ಯೆ ಮಾಡಿರುವ ಘಟನೆಯನ್ನು ಖಂಡಿಸುವ ಭರದಲ್ಲಿ ಶಾಸಕ ರಮೇಶ್ ಬಂಡಿಸಿದ್ದೇಗೌಡ ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ

ಜಮ್ಮು–ಕಾಶ್ಮೀರದಲ್ಲಿ ಮಂಗಳವಾರ ನರಮೇಧಕ್ಕೆ ಬಿಜೆಪಿ ಕಾರಣವಾಗಿದ್ದು, ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೇ ಹೊಣೆಗಾರರು ಎಂದಿದ್ದು, ಎಲ್ಲಾ ಮಾಧ್ಯಮ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ವೈರಲ್ ಆಗಿದೆ.

ತಾಲೂಕಿನ ಚಿಕ್ಕಂಕನಹಳ್ಳಿ ಗ್ರಾಮದಲ್ಲಿ 9 ಕೋಟಿ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಕಾಶ್ಮೀರದಲ್ಲಿ ಆರ್ಟಿಕಲ್ 370 ತೆಗೆದಿದ್ದೆ ಈ ಘಟನೆಗೆ ಕಾರಣವಾಗಿದೆ ಎಂದು ಹೇಳಿಕೆ ನೀಡುವ ಮೂಲಕ ಉಗ್ರರು ಮಾಡಿರುವ ಕೃತ್ಯವನ್ನು ಸಮರ್ಥಿಸಿಕೊಂಡಂತೆ ಮಾತನಾಡಿದ್ದಾರೆ. ಆರ್ಟಿಕಲ್ 370 ತೆಗೆಯುವ ಮುನ್ನಾ ಕಾಶ್ಮೀರದಲ್ಲಿ ಶಾಂತಿ ನೆಲೆಸಿತ್ತು. ಆದರೆ ಮೋದಿ ಅವರ ಆಡಳಿತದ ದುಡುಕಿನ ನಿರ್ಧಾರದಿಂದ ಈ ನರಮೇಧ ನಡೆದಿದೆ ಎಂದರು.

ಅವರ ಅತಿಯಾದ ಆತ್ಮವಿಶ್ವಾಸಕ್ಕೆ ಇಂದಿನ ಘಟನೆ ಉತ್ತರ ಕೊಟ್ಟಿದೆ. ಆರ್ಟಿಕಲ್ 370 ತೆಗೆಯುವ ಮುನ್ನ ಪ್ರಧಾನ ಮಂತ್ರಿಗಳು ಯೋಚನೆ ಮಾಡಬೇಕಿತ್ತು. ಅಲ್ಲಿನ ಜನರ ಭಾವನೆಗಳ ಅರಿತು ಅಲ್ಲಿನ ಪರಿಸ್ಥಿತಿಗೆ ತಕ್ಕಂತೆ ಕೆಲಸ ಮಾಡುವ ಬದಲು, ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕು ಎಂದು ಆರ್ಟಿಕಲ್ 370 ತೆಗೆದಿದ್ದಾರೆ. ಇದಕ್ಕೆಲ್ಲಾ ಪ್ರಧಾನ ಮಂತ್ರಿಗಳು ಹಾಗೂ ಗೃಹ ಮಂತ್ರಿ ಅಮಿತ್ ಶಾ ಅವರೇ ನೇರ ಹೊಣೆ ಎಂದು ಹೇಳ ಬಯಸುತ್ತೇನೆ ಎಂದರು.

ಜಾತಿಗಣತಿ: ಜಾತಿಗಣತಿ ಸುಮಾರು 10 ವರ್ಷಗಳ ಹಿಂದಿನದಾಗಿದೆ. ಈ ಬಗ್ಗೆ ಪ್ರಶ್ನಿಸುವಂತಾಗಿದೆ. ಒಕ್ಕಲಿಗ, ಲಿಂಗಾಯಿತ, ಹಿಂದುಳಿದ ವರ್ಗಗಳ ಸಣ್ಣಪುಟ್ಟ ಜಾತಿಗಣತಿಯನ್ನು ಪರಿಶೀಲಿಸಬೇಕು. ಕಳೆದ 10 ವರ್ಷಗಳ ಹಿಂದೆ ವೈಜ್ಞಾನಿಕವಾಗಿ ಜಾತಿಗಣತಿ ಮಾಡಿದ್ದನ್ನು ಪ್ರಸ್ತುತ ದಿನದಲ್ಲಿ ಗಣತಿಗೆ ಸರಿದೂಗಿಸಬೇಕು ಎಂದು ಹೇಳುವ ಮೂಲಕ ಸರ್ಕಾರಕ್ಕೆ ಮನವಿ ಮಾಡುತ್ತೇನೆ. ಇದನ್ನು ಸರಿಪಡಿಸಲು ಮತ್ತೇ ಸಮಿತಿ ಪರಿಷ್ಕರಿಸಿ ಜಾತಿಗಣತಿಯನ್ನು ಹೊಸದಾಗಿ ಅಧ್ಯಯನ ಮಾಡಿ ಮತ್ತೆ ಯಾವುದೇ ವರ್ಗಕ್ಕೆ ತೊಂದರೆಯಾಗದಂತೆ ಸ್ಪಷ್ಟಪಡಿಸಬೇಕು. ಯಾರಿಗೂ ಜಾತಿಗಣತಿಯಲ್ಲಿ ಕಾಂಗ್ರೆಸ್ ಸರ್ಕಾರದಿಂದ ಅನ್ಯಾಯವಾಗಬಾರದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಕೋರುತ್ತೇನೆ ಎಂದರು.

ದುಬೈನಲ್ಲಿ ಮಂಡ್ಯ ಜಿಲ್ಲೆಯ ಗಂಡು ಕಲೆ ಪ್ರದರ್ಶನ



ಭಾರತೀನಗರ, ಏ.23– ದುಬೈ ಒಕ್ಕಲಿಗರ ಸಂಘದ ವತಿಯಿಂದ ದುಬೈನಲ್ಲಿ ಆಯೋಜಿಸಿದ್ದ ಕುವೆಂಪು ಉತ್ಸವ ಮತ್ತು ವಿಶ್ವ ಒಕ್ಕಲಿಗರ ವೈಭವ ಕಾರ್ಯಕ್ರಮದಲ್ಲಿ ಮಂಡ್ಯ ಜಿಲ್ಲೆಯ ಗಂಡು ಕಲೆಯನ್ನು ಪ್ರದರ್ಶಿಸಿದ ಭಾರತೀನಗರ ಸಮೀಪದ ಚಿಕ್ಕರಸಿನಕೆರೆ ಪೂಜಾ ಕುಣಿತ ಕಲಾವಿದರಾದ ಸಿ.ಎಸ್.ಕುಮಾರ್ ಮತ್ತು ಚಿಕ್ಕಬೋರಯ್ಯ ಅವರು ನೆನಪಿನ ಕಾಣಿಕೆ ಮತ್ತು ಪ್ರಮಾಣಪತ್ರವನ್ನು ಪಡೆದರು.

ಏ.20 ರಂದು ದುಬೈನಲ್ಲಿ ನಡೆದ ಪೂಜಾ ಕುಣಿತ ಪ್ರದರ್ಶನದಲ್ಲಿ ತಮ್ಮ ಗಂಡು ಕಲೆಯನ್ನು ಪ್ರದರ್ಶಿಸಿ ಎಲ್ಲರ ಗಮನ ಸೆಳೆಯುವುದರೊಂದಗೆ ಮೆಚ್ಚುಗೆಗೆ ಪಾತ್ರರಾದರು.

ಈ ಕಲಾವಿದರು ಪೂಜಾ ಕುಣಿತ ಪ್ರದರ್ಶನವನ್ನು ಮಂಡ್ಯ ಜಿಲ್ಲೆಯಲ್ಲಿ ಅಲ್ಲದೆ ದುಬೈ, ಸಿಂಗಾಪುರ್, ಥೈಲ್ಯಾಂಡ್ ದೇಶಗಳಲ್ಲೂ ತಮ್ಮ ಗಂಡು ಕಲೆಯನ್ನು ಪ್ರದರ್ಶಿಸಿ ನಮ್ಮ ಜಿಲ್ಲೆ ಮತ್ತು ರಾಜ್ಯಕ್ಕೆ ಕೀರ್ತಿ ತಂದಿದ್ದಾರೆ. ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ಡಾ.ಶ್ರೀ.ನಿರ್ಮಲಾನಂದನಾಥಸ್ವಾಮೀಜಿ, ಮಂಡ್ಯ ಕ್ಷೇತ್ರದ ಶಾಸಕ ರವಿ ಗಣಿಗ, ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ, ಚಿತ್ರ ನಿರ್ದೇಶಕ ಹಾಗೂ ಸಾಹಿತಿ ನಾಗತಿಹಳ್ಳಿ ಚಂದ್ರಶೇಖರ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಕಲಾವಿದರನ್ನು ಅಭಿನಂದಿಸಿ, ಗೌರವಿಸಿದರು.

ನಾಳೆ ಮಲೇರಿಯಾ ನಿಯಂತ್ರಣ ಕುರಿತು ಜಾಗೃತಿ ಜಾಥಾ

ಮಂಡ್ಯ,ಏ.23– ವಿಶ್ವ ಮಲೇರಿಯಾ ದಿನಾಚರಣೆ ಪ್ರಯುಕ್ತ ಎಸ್.ಡಿ. ಜಯರಾವ್ ಪ್ಯಾರಾಮೆಡಿಕಲ್ ವಿಜ್ಞಾನ ಸಂಸ್ಥೆ ಮತ್ತು ಸದ್ವಿದ್ಯಾ ಪ್ಯಾರಾಮೆಡಿಕಲ್ ವಿದ್ಯಾರ್ಥಿಗಳಿಂದ ಏ.25 ರಂದು ಬೆಳಿಗ್ಗೆ 10 ಗಂಟೆಗೆ ಮಲೇರಿಯಾ ನಿಯಂತ್ರಣ ಕುರಿತ ಜಾಗೃತಿ ಜಾಥಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಜಿಲ್ಲಾಧಿಕಾರಿ ಡಾ.ಕುಮಾರ ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನಿಡಲಿದ್ದು, ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಸಂಜಯ ವೃತ್ತದಿಂದ ಮೈಸೂರು ಮುಖ್ಯ ರಸ್ತೆ ಮುಖಾಂತರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿಯವರೆಗೆ ಜಾಥಾ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ವಿಠಲಾಪುರ ಸೊಸೈಟಿಗೆ ಅಧ್ಯಕ್ಷರಾಗಿ ವಿ.ಡಿ.ಹರೀಶ್, ಉಪಾಧ್ಯಕ್ಷರಾಗಿ ಸುರೇಶ್ ಅವಿರೋಧ ಆಯ್ಕೆ



ವಿಠಲಾಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ವಿ.ಡಿ.ಹರೀಶ್ ಹಾಗೂ ಉಪಾಧ್ಯಕ್ಷರಾಗಿ ದೊಡ್ಡನಕಟ್ಟೆ ಸುರೇಶ್ ಆಯ್ಕೆಗೊಂಡಿದ್ದು, ಅವರನ್ನು ಸಂಘದ ನಿರ್ದೇಶಕರು ಹಾಗೂ ಮುಖಂಡರು ಅಭಿನಂದಿಸಿದರು.

ಕೆ.ಆರ್.ಪೇಟೆ,ಏ.23– ತಾಲೂಕಿನ ವಿಠಲಾಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ವಿ.ಡಿ.ಹರೀಶ್, ಉಪಾಧ್ಯಕ್ಷರಾಗಿ ದೊಡ್ಡನಕಟ್ಟೆ ಸುರೇಶ್ ಅವಿರೋಧವಾಗಿ ಆಯ್ಕೆಗೊಂಡಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷರಾದ ವಿ.ಡಿ.ಹರೀಶ್ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಯುವ ಮುಖಂಡ ಸುರೇಶ್ ಅವರನ್ನು ಹೊರತುಪಡಿಸಿ ಬೇರೆ ಯಾವುದೇ ನಿರ್ದೇಶಕರು ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆ ನಡೆಯಿತು.

ಚುನಾವಣಾಧಿಕಾರಿಯಾಗಿ ತಾಲೂಕು ಸಹಕಾರ ಅಭಿವೃದ್ಧಿ ಅಧಿಕಾರಿ ಹೆಚ್.ಬಿ.ಭರತ್‌ಕುಮಾರ್, ಸಹ ಚುನಾವಣಾಧಿಕಾರಿಯಾಗಿ ಸಂಘದ ಸಿಇಓ ಎಂ.ಆರ್.ಪ್ರಶಾಂತ್ ಕಾರ್ಯನಿರ್ವಹಣೆ ಮಾಡಿದರು.

ನೂತನ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಸಂಘದ ನಿರ್ದೇಶಕರಾದ ವಿ.ಸಿ. ಪುಟ್ಟಸ್ವಾಮೀಗೌಡ, ವಿ.ಎಸ್.ಯೋಗೇಶ್, ಉಮೇಶ್, ಮಹದೇಶ್, ಬಿ.ಆರ್.ಸುರೇಶ್, ಇಂದ್ರಮ್ಮಸಣ್ಣತಮ್ಮೇಗೌಡ, ಸುಧಾಯೋಗೇಶ್, ಚೆಲುವರಾಜು, ವಿ.ಆರ್.ಪುಟ್ಟರಾಜು ಮುಖಂಡರಾದ ಶೈಲೇಂದ್ರ, ಪಟೇಲ್ ಶಂಕರ್, ವಿ.ಸಿ.ವೆಂಕಟೇಶ್, ರಾಜಶೇಖರ್, ಹೋರಿ ದೇವೇಗೌಡ, ಸೋಮಶೇಖರಯ್ಯ, ನಂದರಾಜಯ್ಯ, ವೀರಭದ್ರಯ್ಯ ಅಭಿನಂದಿಸಿದರು.

ಪಾಂಡವಪುರ ಕಸಬಾ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಅವ್ಯವಹಾರ

ಸಿಐಡಿ ವಿಚಾರಣೆಗೆ ಹಾಜರಾಗಿದ್ದ ಸಂಘದ ಮಾಜಿ ಅಧ್ಯಕ್ಷ, ಹಾಲಿ ಸಿಇಓ ಬಂಧನ

ಪಾಂಡವಪುರ: ಪಾಂಡವಪುರ ಕಸಬಾ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ನಡೆದಿರುವ ಕೋಟ್ಯಾಂತರ ಹಣ ದುರ್ಬಳಕೆಗೆ ಸಂಬಂಧಿಸಿದಂತೆ ಸಿಐಡಿ ಪೊಲೀಸರು ವಿಚಾರಣೆಗೆ ಹಾಜರಾಗಿದ್ದ ಸಂಘದ ಮಾಜಿ ಮತ್ತು ಹಾಲಿ ಸಿಇಓ ಅವರನ್ನು ಬಂಧಿಸಿ ನ್ಯಾಯಾಲಯ ಬಂಧನಕ್ಕೆ ಒಪ್ಪಿಸಿದ್ದಾರೆ.

ಕಸಬಾ ಕೃಷಿ ಪತ್ತಿನ ಸಹಕಾರ ಸಂಘದ ಮಾಜಿ ಸಿಇಓ ಹಿರೇಮರಳಿ ಸಂದೇಶ್ ಈ ಹಿಂದಿನ ಕ್ಯಾಷಿಯರ್ ಹಾಗೂ ಹಾಲಿ ಸಿಇಓ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಬೀರಶೆಟ್ಟಹಳ್ಳಿ ಕಿರಣ್ ಅವರು ಷೇರುದಾರರ ಫಿಗ್ಮಿ, ಠೇವಣಿ ಹಾಗೂ ರೈತರು ಅಡವಿಟ್ಟಿದ್ದ ಚಿನ್ನಾಭರಣಗಳನ್ನು ಅಕ್ರಮವಾಗಿ ಖಾಸಗಿ ಹಣಕಾಸು ಸಂಸ್ಥೆಯಲ್ಲಿ ಗಿರವಿ ಇಟ್ಟು ನಾಲ್ಕು ಕೋಟಿಗೂ ಹಣ ದುರ್ಬಳಕೆ ಮಾಡಿಕೊಂಡಿದ್ದರು. ಈ ಹಿನ್ನೆಲೆಯಲ್ಲಿ ಸಂಘದ ಹಾಲಿ ಅಧ್ಯಕ್ಷ ಬೇವಿನಕುಪ್ಪೆ ಯೋಗೇಶ್ ಅವರು ಸೂಕ್ತ ಕ್ರಮ ಕೈಗೊಳ್ಳುವಂತೆ ದೂರು ಸಲ್ಲಿಸಿದ್ದರು. ಪ್ರಕರಣ ದಾಖಲಿಸಿಕೊಂಡಿದ್ದ ಪಾಂಡವಪುರ ಪೊಲೀಸರು ಪ್ರಾಥಮಿಕ ತನಿಖೆ ನಡೆಸಿ ಮೇಲ್ನೋಟಕ್ಕೆ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಪ್ರಕರಣವನ್ನು ಸಿಐಡಿ ಪೊಲೀಸರಿಗೆ ವರ್ಗಾಯಿಸಿದ್ದರು.

ಪ್ರಕರಣ ದಾಖಲಿಸಿಕೊಂಡ ಸಿಐಡಿ ಪೊಲೀಸರು ಕಳೆದ ವಾರದ ಹಿಂದಷ್ಟೇ ಕಸಬಾ ಸೊಸೈಟಿಗೆ ದಿಢೀರ್ ದಾಳಿ ಮಾಡಿ ಸಂಘದ ಹಣಕಾಸು ವ್ಯವಹಾರಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಪರಿಶೀಲಿಸಿ ಸಂಘದ ನೌಕರರು, ಪದಾಧಿಕಾರಿಗಳು ಮತ್ತು ನಿರ್ದೇಶಕರ ಹೇಳಿಕೆಗಳನ್ನು ದಾಖಲಿಸಿಕೊಂಡು ಸಂಘದ ಹಾಲಿ ಮತ್ತು ಮಾಜಿ ಸಿಇಓಗಳನ್ನು ಬೆಂಗಳೂರಿನ ಕೇಂದ್ರ ಕಚೇರಿಗೆ ವಿಚಾರಣೆಗೆ ಬರುವಂತೆ ನೋಟಿಸ್ ಜಾರಿ ಮಾಡಿದ್ದರು. ವಿಚಾರಣೆಗೆ ತೆರಳಿದ್ದ ಮಾಜಿ ಸಿಇಓ ಸಂದೇಶ್ ಅವರನ್ನು ಕಳೆದ ನಾಲ್ಕು ದಿನಗಳ ಹಿಂದೆ ಹಾಗೂ ಹಾಲಿ ಸಿಇಓ ಕಿರಣ್ ಅವರನ್ನು ಸೋಮವಾರ ರಾತ್ರಿ ಬಂಧಿಸಿ ಇಬ್ಬರನ್ನು ನ್ಯಾಯಾಲಯದ ಬಂಧನಕ್ಕೆ ಒಪ್ಪಿಸಿದ್ದಾರೆ.

ಕಷ್ಟಪಟ್ಟು ಬೆವರು ಸುರಿಸಿ ಉಳಿತಾಯ ಮಾಡಿದ ಮತ್ತು ಹೊಟ್ಟೆ ಬಟ್ಟೆ ಕಟ್ಟಿ ತಮ್ಮ ಭವಿಷ್ಯಕ್ಕೆ ಅಗತ್ಯವಾಗುತ್ತದೆ ಎಂದು ಫಿಗ್ಮಿ ಕಟ್ಟಿದ್ದ ರೈತರು, ವ್ಯಾಪಾರಸ್ಥರು ಮತ್ತು ತಮ್ಮ ಮಕ್ಕಳ ಶಿಕ್ಷಣ, ಮದುವೆ ಇತ್ಯಾದಿಗಳಿಗಾಗಿ ಉಳಿತಾಯ ಮಾಡಿದ್ದ ನಾಲ್ಕು ಕೋಟಿಗೂ ಅಧಿಕ ಹಣ ಸಂಘದಲ್ಲಿ ದುರ್ಬಳಕೆಯಾಗಿದ್ದು, ಫಿಗ್ಮಿದಾರರು, ರೈತರು ಮತ್ತು ಷೇರುದಾರರು ತಮ್ಮ ಹಣ ಹಿಂದಿರುಗಿಸುವಂತೆ ಸಂಘದ ಆಡಳಿತ ಮಂಡಳಿ ನಿರ್ದೇಶಕರು ಮತ್ತು ನೌಕರರನ್ನು ಪ್ರತಿನಿತ್ಯ ಒತ್ತಾಯಿಸುತ್ತಿದ್ದರು, ಈವರೆಗೂ ಯಾವುದೇ ಕ್ರಮ ಆಗಿರಲಿಲ್ಲ.

ಹಣ ವಾಪಸ್ಸಾಗುವ ಖಾತರಿ: ಸಂಘದ ಹಾಲಿ ಮತ್ತು ಮಾಜಿ ಸಿಇಓಗಳು ಸಂಘದ ಹಣ ದುರ್ಬಳಕೆ ಮಾಡಿಕೊಂಡು ಐಷಾರಾಮಿ ಜೀವನ ನಡೆಸುವ ಜತೆಗೆ ವಿವಿಧ ವ್ಯಾಪಾರಗಳಿಗೆ ಬಂಡವಾಳ ತೊಡಗಿಸಿಕೊಂಡಿದ್ದರು ಎಂಬ ಆರೋಪಗಳು ಸಾರ್ವಜನಿಕರಿಂದ ಕೇಳಿ ಬಂದಿದೆ ಎಲ್ಲಾ ವಿಚಾರಗಳನ್ನು ತನಿಖೆಗೆ ಒಳಪಡಿಸಿ ಬಂಧಿತ ಆರೋಪಿಗಳಿಂದ ದುರ್ಬಳಕೆ ಆಗಿರುವ ಹಣವನ್ನು ಬಡ್ಡಿ ಸಮೇತ ವಸೂಲಿ ಮಾಡಿ ಸಾರ್ವಜನಿಕರ ಬೆವರಿನ ಹಣ ಹಿಂದಿರುಗಿಸಬೇಕು. ಜತೆಗೆ ಸಂಘ ಎಂದಿನಂತೆ ಉತ್ತಮ ಮುಂದುವರೆಯಬೇಕು ಎಂದು ಷೇರುದಾರರ ಆಗ್ರಹವಾಗಿದೆ.

ಕಸಬಾ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ನಡೆದಿರುವ ಅವ್ಯವಹಾರ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರ ಗಮನಕ್ಕೆ ಬರುತ್ತಿದ್ದಂತೆ ಶಾಸಕರು ಜಿಲ್ಲಾ ನೋಂದಣಾಧಿಕಾರಿಗಳ (ಡಿಆರ್) ಕಚೇರಿಯ 64 ವಿಚಾರಣೆ ಜತೆಗೆ ಸದನದಲ್ಲಿ ವಿಚಾರ ಪ್ರಸ್ತಾಪಿಸಿ ರಾಜ್ಯದಲ್ಲಿರುವ ಎಲ್ಲಾ ಕೃಷಿ ಪತ್ತಿನ ಸಹಕಾರ ಸಂಘ ಸೇರಿದಂತೆ ಇತರೆ ಸಂಘಗಳಲ್ಲಿ ನಡೆಯುತ್ತಿರುವ ಹಣ ದುರ್ಬಳಕೆಗೆ ಸಂಬಂಧಿಸಿದಂತೆ ಸೂಕ್ತ ವಿಚಾರಣೆ ನಡೆಸಿ ಕಾನೂನು ಕ್ರಮ ಕೈಗೊಳ್ಳುವಂತೆ ಸರಕಾರವನ್ನು ಒತ್ತಾಯಿಸಿದ್ದರು.

ಸಮಗ್ರ ಕೃಷಿ ವಿವಿ ಆರಂಭಿಸಲು ಒತ್ತಾಯ



ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವ ಅಧ್ಯಕ್ಷ ರಮೇಶ್ ರಾಜು.

ಮಂಡ್ಯ,ಏ.23– ಜಿಲ್ಲೆಯ ವಿ.ಸಿ.ಫಾರಂ ಕೃಷಿ ಕಾಲೇಜನ್ನು ಸಮಗ್ರ ಕೃಷಿ ವಿಶ್ವವಿದ್ಯಾಲಯವಾಗಿ ಮೇಲ್ದರ್ಜೆಗೇರಿಸುವ ಯೋಜನೆಗಿರುವ ಅಡೆತಡೆಗಳನ್ನು ಮೆಟ್ಟಿನಿಂತು ಶೀಘ್ರವಾಗಿ ಸಮಗ್ರ ಕೃಷಿ ವಿಶ್ವವಿದ್ಯಾಲಯವನ್ನು ಆರಂಭಿಸಲು ಮುಂದಾಗಬೇಕು ಎಂದು ಕದಂಬಸೈನ್ಯ ಹಾಗೂ ಭಾರತೀಯ ಕಿಸಾನ್ ಸಂಘದ ಪದಾಧಿಕಾರಿಗಳು ಜಂಟಿ ಪತ್ರಿಕಾಗೋಷ್ಠಿ ನಡೆಸಿ ಆಗ್ರಹಿಸಿದರು.

ಈ ಸಂಬಂಧ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಿಸಾನ್ ಸಂಘದ ಪ್ರಾಂತೀಯ ಅಧ್ಯಕ್ಷ ರಮೇಶ್‌ರಾಜು, ಕೃಷಿ ವಿವಿ ಸಂಬಂಧ ಹಾಸನ ಕೃಷಿ ಕಾಲೇಜನ್ನು ಜಿಕೆವಿಕೆಯಲ್ಲಿಯೇ ಮುಂದುವರೆಸಲು ಆಗ್ರಹಿಸಿ, ಮಾಜಿ ಸಚಿವ ಹಾಗೂ ಶಾಸಕ ಹೆಚ್.ಡಿ.ರೇವಣ್ಣ ರಾಜ್ಯಪಾಲರಿಗೆ ಪತ್ರ ಬರೆದಿದ್ದು, ಹಳೆ ಮೈಸೂರು ಭಾಗದಲ್ಲಿ ನಿರ್ಮಿಸಲಾಗುತ್ತಿರುವ ಕೃಷಿ ವಿವಿ ಸ್ಥಾಪನೆಗೆ ಅಡ್ಡಗಾಲು ಹಾಕದಂತೆ ಮನವಿ ಮಾಡಿದರು.

ಹಳೆ ಮೈಸೂರು ಭಾಗದ ಮಂಡ್ಯ, ಮೈಸೂರು, ಚಾಮರಾಜನಗರ, ರಾಮನಗರ, ಹಾಸನ ಹಾಗೂ ಕೊಡಗು ಜಿಲ್ಲೆಯಲ್ಲಿ ಭೌಗೋಳಿಕವಾಗಿ ಒಂದೇ ರೀತಿಯ ವಾತಾವರಣ ಹೊಂದಿದ್ದು, ಶೇ.85ರಷ್ಟು ಜನ ಕೃಷಿಯನ್ನೇ ಅವಲಂಬಿಸಿದ್ದಾರೆ. ಇಲ್ಲಿನ ಅನುಕೂಲಕ್ಕೆ ತಕ್ಕಂತೆ ಮಂಡ್ಯ ಕೃಷಿ ವಿವಿಯಲ್ಲಿ ಸಂಶೋಧನೆ ನಡೆಸಿ, ಸಮಗ್ರ ಕೃಷಿಯನ್ನು ಇಲ್ಲಿನ ರೈತರು ಅಳವಡಿಸಲು ಸಹಾಯಕವಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಮಂಡ್ಯದ ವಿ.ಸಿ.ಫಾರಂನಲ್ಲಿ ಕೃಷಿ ವಿವಿಗೆ ಬೇಕಾದ ಎಲ್ಲಾ ಸವಲತ್ತುಗಳಿದ್ದು, ಐದು ಜಿಲ್ಲೆಗಳ ಕೇಂದ್ರೀತ ಸಮಗ್ರ ಕೃಷಿಗೆ ಅನುಕೂಲಕರ ಹಾಗೂ ಆರ್ಥಿಕ ಸ್ಥಿತಿ ಉತ್ತಮಗೊಳ್ಳಲಿದೆ. ಹಾಸನ, ಚಾಮರಾಜನಗರದ ಕೃಷಿ ಕಾಲೇಜುಗಳಿಗೆ ಹೆಚ್ಚಿನ ಅನುದಾನ ನೀಡಿ ಉನ್ನತ ದರ್ಜೆಗೆ ಏರಿಸುವುದರ ಜೊತೆಗೆ ರಾಮನಗರ, ಕೊಡಗು ಜಿಲ್ಲೆಗಳಲ್ಲಿ ಸಹ ಕೃಷಿ ಕಾಲೇಜು ಆರಂಭಿಸಬೇಕಿದೆ ಎಂದರು.

ಗೋಷ್ಠಿಯಲ್ಲಿ ಕದಂಬ ಸೈನ್ಯ ರಾಜ್ಯಾಧ್ಯಕ್ಷ ಬೇಕ್ರಿ ರಮೇಶ್, ಜೋಸೆಫ್ ರಾಮು, ಸಲ್ಮಾನ್, ಬಿ.ಪಿ.ಅಪ್ಪಾಜಿ, ಪ್ರಮುಖ್ ಕಲ್ಲೇಶ್, ಸ್ವಾಮಿ, ಜಯರಾಮು, ರಾಮಣ್ಣ ಇದ್ದರು.

ಮೂರನೇ ಪುಟದಿಂದ

ಸುರೇಶ್‌ಗೆ ಮುಕ್ತಿ

ತನಿಖಾಧಿಕಾರಿಯೇ ವಿಚಾರಣೆ ಎದುರಿಸಬೇಕಾದ ದುರ್ಗತಿ!

ನ್ಯಾಯಾಲಯಕ್ಕೆ ಸುಳ್ಳು ದಾಖಲೆಗಳನ್ನು ಸಲ್ಲಿಸಿದ್ದ ಆರೋಪದ ಮೇರೆಗೆ ಪೊಲೀಸ್ ಇನ್‌ಸ್ಪೆಕ್ಟರ್ ಬಿ.ಜಿ. ಪ್ರಕಾಶ್ ವಿರುದ್ಧ ಭಾರತೀಯ ದಂಡಸಂಹಿತೆ 193 ಮತ್ತು 195ರಡಿ ಜಿಲ್ಲಾ ಪ್ರಧಾನ ಸತ್ರ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸುವಂತೆ ಜಿಲ್ಲಾ ಸೆಷನ್ಸ್ ನ್ಯಾಯಾಲಯದ ಮುಖ್ಯ ಆಡಳಿತಾಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ. ನ್ಯಾಯಾಧೀಶರು ನೀಡಿರುವ ತೀರ್ಪಿನ ನಿರ್ದೇಶನದಂತೆ ನಾಳೆ (ಏ.24) ಪೊಲೀಸ್ ಇನ್‌ಸ್ಪೆಕ್ಟರ್ ಬಿ.ಜಿ. ಪ್ರಕಾಶ್ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗುವ ಸಾಧ್ಯತೆ ಇದೆ. ಈ ಸೆಕ್ಷನ್‌ಗಳಿಗೆ 7 ವರ್ಷದವರೆಗೆ ಶಿಕ್ಷೆ ಉಂಟು. ಈ ಸೆಕ್ಷನ್‌ಗಳು ಜಾಮೀನು ನೀಡಬಹುದಾದಂತಹ ಸೆಕ್ಷನ್‌ಗಳಾಗಿದ್ದು, ಬಿ.ಜಿ.ಪ್ರಕಾಶ್ ನ್ಯಾಯಾಲಯಕ್ಕೆ ಹಾಜರಾಗಿ, ಜಾಮೀನು ಪಡೆದು ವಿಚಾರಣೆಯನ್ನು ಎದುರಿಸಬೇಕಾಗುತ್ತದೆ. ಪ್ರಕರಣವು ನ್ಯಾಯಾಲಯದಿಂದಲೇ ದಾಖಲಾಗಿರುವ ಸುಮೋಟೊ ಪ್ರಕರಣವಾಗುತ್ತದೆ. ಸುರೇಶ್ ವಿರುದ್ಧ ಬಿ.ಜಿ.ಪ್ರಕಾಶ್ ಅವರು ಈಗಾಗಲೇ ಸಲ್ಲಿಸಿರುವ ದೋಷಾರೋಪಣಾ ಪಟ್ಟಿ ಹಾಗೂ ಮೈಸೂರು ಜಿಲ್ಲಾ ಎಸ್ಪಿಯವರು ಇದೀಗ ನ್ಯಾಯಾಲಯಕ್ಕೆ ಸಲ್ಲಿಸಿರುವ ವರದಿ ಮತ್ತು ಜೀವಂತವಾಗಿ ಪತ್ತೆಯಾಗಿರುವ ಸುರೇಶ್‌ನ ಪತ್ನಿ ಮಲ್ಲಿಗೆ ಸಾಕ್ಷಿದಾರರಾಗುತ್ತಾರೆ ಎಂದು ವಕೀಲ ಪಾಂಡು ಪೂಜಾರಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಕೋರ್ಟ್ ಹಾಲ್‌ನಲ್ಲಿ ನ್ಯಾಯಾಧೀಶರು ಪ್ರಕಟಿಸಿದ ತೀರ್ಪನ್ನು ತದೇಕಚಿತ್ತರಾಗಿ ಆಲಿಸಿದರು. ಕೆಲ ಕಿರಿಯ ವಕೀಲರು ಹಾಗೂ ಕಾನೂನು ವಿದ್ಯಾರ್ಥಿಗಳು ಸಹ ನ್ಯಾಯಾಧೀಶರ ತೀರ್ಪಿನ ಅಂಶಗಳ ನೋಟ್ಸ್ ಮಾಡಿಕೊಳ್ಳುತ್ತಿದ್ದ ದೃಶ್ಯ ಕಂಡುಬಂತು.

ಇಂದು ಮಧ್ಯಾಹ್ನ ತೀರ್ಪು ಹೊರಬಿದ್ದ ನಂತರ ನ್ಯಾಯಾಲಯದ ಕ್ಯಾಂಟೀನ್‌ನಲ್ಲಿ ಹಿರಿಯ ವಕೀಲರೊಂದಿಗೆ, ಕಿರಿಯ ವಕೀಲರು ಹಾಗೂ ಕಾನೂನು ವಿದ್ಯಾರ್ಥಿಗಳು ತೀರ್ಪಿನ ಬಗ್ಗೆ ಕುತೂಹಲದಿಂದ ಚರ್ಚೆ ಮಾಡುತ್ತಿದ್ದರು. ಮೈಸೂರು ಜಿಲ್ಲಾ ನ್ಯಾಯಾಲಯದಲ್ಲಿ ಇಂತಹ ಪ್ರಕರಣ ನಡೆದಿರುವುದು ಇದೇ ಮೊದಲಾಗಿದೆ. ದೇಶದಲ್ಲಿ 4ನೇ ಪ್ರಕರಣ ಇದಾಗಿದ್ದು, ಕರ್ನಾಟಕದಲ್ಲಿ 2ನೇ ಪ್ರಕರಣವಾಗಿದೆ.

ಕರ್ನಾಟಕದಲ್ಲಿ ನಡೆದ ಮೊದಲ ಪ್ರಕರಣದಲ್ಲಿ ತುಮಕೂರಿನ ವೈದ್ಯರೊಬ್ಬರನ್ನು ಪತ್ನಿಗೆ ವರದಕ್ಷಿಣೆ ಕಿರುಕುಳ ನೀಡಿ ಹತ್ಯೆ ಮಾಡಿದ್ದಾರೆ ಎಂದು ಸಿಓಡಿ (ಇಂದಿನ ಸಿಐಡಿ) ಪೊಲೀಸರು ಬಂಧಿಸಿ, ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ನಂತರದ ದಿನಗಳಲ್ಲಿ ಬೆಂಗಳೂರು ನಗರ ಪೊಲೀಸರು ದಂಡುಪಾಳ್ಯ ಗ್ಯಾಂಗ್‌ನ ಹಂತಕರನ್ನು ಬಂಧಿಸಿದಾಗ ಈ ತಂಡವೇ ವೈದ್ಯರ ಪತ್ನಿಯನ್ನು ಹತ್ಯೆ ಮಾಡಿರುವುದು ಬಯಲಾಗಿತ್ತು. ಆದರೆ, ಆಗ ಸಿಓಡಿ ಪೊಲೀಸರು ತಾವು ಸಲ್ಲಿಸಿರುವ ದೋಷಾರೋಪಣಾ ಪಟ್ಟಿ ಸರಿಯಾಗಿದೆ.

ವೈದ್ಯರೇ ಪತ್ನಿಯನ್ನು ಹತ್ಯೆ ಮಾಡಿದ್ದಾರೆ ಎಂದು ವಾದಿಸಿದ್ದರು. ಅಂತಿಮವಾಗಿ ವೈದ್ಯರು ನಿರ್ದೋಷಿಯಾಗಿ ಬಿಡುಗಡೆಯಾಗಿದ್ದು, ದಂಡುಪಾಳ್ಯ ಗ್ಯಾಂಗ್ ಹಂತಕರಿಗೆ ಗಲ್ಲು ಶಿಕ್ಷೆ ವಿಧಿಸಲಾಗಿತ್ತು.

ಆದರೆ, ಈ ಪ್ರಕರಣದಲ್ಲಿ ಗಂಡನಿಂದಲೇ ಹತ್ಯೆಗೀಡಾಗಿದ್ದಾಳೆ ಎಂದು ಪೊಲೀಸರಿಂದ ನಿರ್ಧರಿಸಲ್ಪಟ್ಟಿದ್ದ ಮಲ್ಲಿಗೆ, 5 ವರ್ಷದ ನಂತರ ಜೀವಂತವಾಗಿ ಪತ್ತೆಯಾಗಿದ್ದಳು. ತುಮಕೂರು ಪ್ರಕರಣದಲ್ಲಿ ಸಿಓಡಿ ಅಧಿಕಾರಿಗಳು ತಮ್ಮ ದೋಷಾರೋಪಣಾ ಪಟ್ಟಿ ಸರಿಯಾಗಿದೆ ಎಂದು ಸಮರ್ಥಿಸಿಕೊಂಡರೆ, ಈ ಪ್ರಕರಣದಲ್ಲಿ ಪೊಲೀಸರಿಗೆ ಅಂತಹ ಅವಕಾಶವೇ ದೊರೆಯಲಿಲ್ಲ. ಏಕೆಂದರೆ ಹತ್ಯೆಗೀಡಾಗಿದ್ದಾಳೆ ಎಂಬ ಮಹಿಳೆ ಜೀವಂತವಾಗಿ ನ್ಯಾಯಾಲಯದ ಮುಂದೆ ಹಾಜರುಪಡಿಸಲ್ಪಟ್ಟಿದ್ದಳು.

ಹಿನ್ನೆಲೆ: 2020ರಲ್ಲಿ ಬೆಟ್ಟದಪುರ ಠಾಣೆ ವ್ಯಾಪ್ತಿಯಲ್ಲಿ ಅಸ್ಥಿಪಂಜರವೊಂದು ದೊರೆತಿತ್ತು. ಆಗ ಸಂಶಯಾಸ್ಪದ ಸಾವು (ಯುಡಿಆರ್) ಪ್ರಕರಣವನ್ನು ಬೆಟ್ಟದಪುರ ಠಾಣೆ ಪೊಲೀಸರು ದಾಖಲಿಸಿಕೊಂಡಿದ್ದರು. ಅಸ್ತಿಪಂಜರ ದೊರೆತ ಮರುದಿನವೇ ಸುರೇಶ, ತನ್ನ ಪತ್ನಿ ಮಲ್ಲಿಗೆ ನಾಪತ್ತೆಯಾಗಿದ್ದಾಳೆ ಎಂದು ಕುಶಾಲನಗರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು.

ಅಸ್ತಿಪಂಜರದ ತನಿಖೆ ಮುಂದುವರೆಸಿದ್ದ ಬೆಟ್ಟದಪುರ ಠಾಣೆ ಪೊಲೀಸರು, ಮಲ್ಲಿಗೆಯ ತಾಯಿಯಿಂದ ತನ್ನ ಮಗಳನ್ನು ಹತ್ಯೆ ಮಾಡಲಾಗಿದೆ ಎಂದು ದೂರು ಪಡೆದು, ಅಸ್ಥಿಪಂಜರ ಪತ್ತೆ ಕುರಿತು ದಾಖಲಾಗಿದ್ದ ಸಂಶಯಾಸ್ಪದ ಸಾವು ಪ್ರಕರಣವನ್ನು ಕೊಲೆ ಹಾಗೂ ಸಾಕ್ಷ್ಯ ನಾಶ ಪ್ರಕರಣವನ್ನಾಗಿ ಮಾರ್ಪಡಿಸಿಕೊಂಡಿದ್ದರು. 2021ರಲ್ಲಿ ಪಿರಿಯಾಪಟ್ಟಣ ಸರ್ಕಲ್ ಇನ್‌ಸ್ಪೆಕ್ಟರ್ ಆಗಿದ್ದ ಬಿ.ಜಿ.ಪ್ರಕಾಶ್ ನೇತೃತ್ವದ ಪೊಲೀಸರ ತಂಡ, ಸುರೇಶ್‌ನನ್ನು ಪತ್ನಿ ಹತ್ಯೆ ಪ್ರಕರಣದಲ್ಲಿ ಬಂಧಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ, ಆತ ಜೈಲು ಸೇರಬೇಕಾಯಿತು. ಪ್ರಕರಣದ ತನಿಖಾಧಿಕಾರಿಯಾಗಿದ್ದ ಇನ್‌ಸ್ಪೆಕ್ಟರ್ ಬಿ.ಜಿ. ಪ್ರಕಾಶ್, ನ್ಯಾಯಾಲಯಕ್ಕೆ ಸುರೇಶ್ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದರು. ಈ ಮಧ್ಯೆ ಸುರೇಶನ ತಂದೆ ಗಾಂಧಿಯವರು ಮೈಸೂರಿನ ವಕೀಲ ಪಾಂಡು ಪೂಜಾರಿ ಅವರನ್ನು ಸಂಪರ್ಕಿಸಲಾಗಿ, ಪ್ರಕರಣದ ಬಗ್ಗೆ ಕೂಲಂಕುಷವಾಗಿ ವಿವರಗಳನ್ನು ಪಡೆದ ಪಾಂಡು ಪೂಜಾರಿ, ತಮ್ಮ ಸ್ನೇಹಿತರ ಮೂಲಕ ಹೈಕೋರ್ಟ್‌ನಲ್ಲಿ ಸುರೇಶ್‌ನಿಗೆ ಜಾಮೀನು ಕೊಡಿಸಿದ್ದರು.

2 ವರ್ಷದ ನಂತರ ಜಾಮೀನಿನ ಮೇಲೆ ಬಿಡುಗಡೆಯಾದರೂ ಪತ್ನಿ ಕೊಲೆ ಆರೋಪಿಯಾಗಿ ಸುರೇಶ್ ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದರು. ಈ ನಡುವೆ ಏ.1ರಂದು ಸಂಜೆ ಮಡಿಕೇರಿಯ ಬಸ್ ನಿಲ್ದಾಣದಲ್ಲಿರುವ ಹೋಟೆಲ್‌ವೊಂದರಲ್ಲಿ ಸುರೇಶ್‌ನ ಪತ್ನಿ ಮಲ್ಲಿಗೆ ತನ್ನ ಪ್ರಿಯಕರ ಗಣೇಶ್‌ನೊಂದಿಗೆ ಸುರೇಶ್‌ನ ಸ್ನೇಹಿತರಿಗೆ ಸಿಕ್ಕಿಬಿದ್ದಿದ್ದಳು. ವಕೀಲ ಪಾಂಡು ಪೂಜಾರಿ ಸೂಚನೆ ಮೇರೆಗೆ ಆಕೆಯನ್ನು ಸುರೇಶ್ ಹಾಗೂ ಸ್ನೇಹಿತರು, ಮಡಿಕೇರಿ ಟೌನ್ ಪೊಲೀಸರ ವಶಕ್ಕೆ ನೀಡಿದ್ದರು. ಆದರೆ, ಮಲ್ಲಿಗೆ ನಾಪತ್ತೆ ಪ್ರಕರಣ ಕುಶಾಲನಗರ ಗ್ರಾಮಾಂತರ ಠಾಣೆಯಲ್ಲಿ ದಾಖಲಾಗಿದ್ದ ಹಿನ್ನೆಲೆಯಲ್ಲಿ ಆ ಠಾಣೆಯ ಪೊಲೀಸರಿಗೆ ಮಡಿಕೇರಿ ಟೌನ್ ಪೊಲೀಸರು ಆಕೆಯನ್ನು ಒಪ್ಪಿಸಿದ್ದರು. ವಿಚಿತ್ರವೆಂದರೆ ಮಲ್ಲಿಗೆಯನ್ನು ಕುಶಾಲನಗರ ಪೊಲೀಸರು ಬೈಲುಕುಪ್ಪೆ ಠಾಣೆ ಪೊಲೀಸರ ವಶಕ್ಕೆ ಕೊಟ್ಟುಬಿಟ್ಟಿದ್ದರು.

ಪೊಲೀಸರಿಂದ ಏನೋ ಎಡವಟ್ಟು ಆಗುತ್ತಿದೆ ಎಂದು ಭಾವಿಸಿದ್ದ ವಕೀಲ ಪಾಂಡು ಪೂಜಾರಿ, ಏ.2ರಂದು ತಮ್ಮ ಗುರು, ಹಿರಿಯ ವಕೀಲ ರಾಘವೇಂದ್ರ ಮೂಲಕ ಮೈಸೂರಿನ 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಪ್ರಕರಣವನ್ನು ಅಡ್ವಾನ್ಸ್ ಮಾಡಿಸಿ, ನ್ಯಾಯಾಧೀಶರಿಗೆ ವಿವರಗಳನ್ನು ನೀಡಿದ್ದರು. ಆ ಸಂದರ್ಭದಲ್ಲಿ ನ್ಯಾಯಾಧೀಶರು ಮಲ್ಲಿಗೆಯನ್ನು ಹಾಜರುಪಡಿಸಬೇಕು ಎಂದು ಬೈಲುಕುಪ್ಪೆ ಠಾಣೆ ಪೊಲೀಸರಿಗೆ ಆದೇಶ ನೀಡಿದ್ದರು. ಅಲ್ಲದೇ, ಮೈಸೂರು ಜಿಲ್ಲಾ ಎಸ್ಪಿ, ಪಿರಿಯಾಪಟ್ಟಣದ ಹಿಂದಿನ ಸರ್ಕಲ್ ಇನ್‌ಸ್ಪೆಕ್ಟರ್ ಬಿ.ಜಿ.ಪ್ರಕಾಶ್, ಸಹಾಯಕ ತನಿಖಾಧಿಕಾರಿಗಳಾಗಿದ್ದ ಅಂದಿನ ಪ್ರೊಬೆಷನರಿ ಐಪಿಎಸ್ ಅಧಿಕಾರಿ ಜಿತೇಂದ್ರಕುಮಾರ್, ಸಬ್‌ಇನ್‌ಸ್ಪೆಕ್ಟರ್ ಮಹೇಶ್‌ಕುಮಾರ್, ಸಿಬ್ಬಂದಿಗಳಾದ ಪ್ರಕಾಶ್ ಎಂ. ಎತ್ತಿನಮನಿ ಅವರನ್ನು ಕಡ್ಡಾಯವಾಗಿ ಹಾಜರಾಗಬೇಕೆಂದು ಆದೇಶಿಸಿದ್ದರು.

ಮರುದಿನ ಪೊಲೀಸರು ಮಲ್ಲಿಗೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ, ಆಕೆ ಹತ್ಯೆ ಆಗಿಲ್ಲ, ಜೀವಂತವಾಗಿದ್ದಾಳೆ ಎಂಬುದನ್ನು ಮನವರಿಕೆ ಮಾಡಿಕೊಂಡ ನ್ಯಾಯಾಧೀಶರು, ಈ ಪ್ರಕರಣದ ಸಂಬಂಧ ತನಿಖೆ ನಡೆಸಿ ಏ.17ರಂದು ವರದಿ ಸಲ್ಲಿಸಬೇಕು ಎಂದು ಮೈಸೂರು ಜಿಲ್ಲಾ ಎಸ್ಪಿ ವಿಷ್ಣುವರ್ಧನ್ ಅವರಿಗೆ ಆದೇಶಿಸಿದ್ದರು. ಆ ದಿನ ನ್ಯಾಯಾಲಯಕ್ಕೆ ಎಸ್ಪಿಯವರು ವರದಿ ಸಲ್ಲಿಸಿದ ನಂತರ ತೀರ್ಪನ್ನು ಇಂದಿಗೆ (ಏ. 23) ಕಾಯ್ದಿರಿಸಲಾಗಿತ್ತು.

ಪಾಕ್‌ಗೆ ಭಾರತದ ಬಾಗಿಲು ಬಂದ್

ಭದ್ರತಾ ಪಡೆಗಳು ಉಗ್ರರ ಬೆದರಿಕೆ ನಿರ್ಲಕ್ಷಿಸಿದ್ದೇ ಪಹಲ್ಗಾಮ್ ದುರಂತಕ್ಕೆ ಕಾರಣ

ಗುಪ್ತಚರ ಸಂಸ್ಥೆಗಳ ಮೂಲಗಳ ಮಾಹಿತಿ

ನವದೆಹಲಿ, ಏ.23–ಜಮ್ಮು–ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಭೀಕರ ಭಯೋತ್ಪಾದಕ ದಾಳಿಯಲ್ಲಿ 28 ಮಂದಿ ಸಾವನ್ನಪ್ಪಿದ್ದಾರೆ. ಅದರಲ್ಲೂ ಮೃತಪಟ್ಟವರು ಹೆಚ್ಚಿನವರು ವಿವಿಧ ರಾಜ್ಯಗಳ ಪ್ರವಾಸಿಗರು. ಇದು ಗಂಭೀರ ಗುಪ್ತಚರ ಮತ್ತು ಭದ್ರತಾ ವೈಫಲ್ಯ ಎಂದು ಗುಪ್ತಚರ ಸಂಸ್ಥೆಗಳ ಮೂಲಗಳು ತಿಳಿಸಿವೆ. ಗುಪ್ತಚರ ಸಂಸ್ಥೆಯ ಮೂಲವೊಂದರ ಪ್ರಕಾರ ಘಟನೆಗೆ ಕೆಲವು ದಿನಗಳ ಮುನ್ನ ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ ನೆಲೆಸಿರುವ ಭಯೋತ್ಪಾದಕನೊಬ್ಬ ದಾಳಿಯ ಬಗ್ಗೆ ಸುಳಿವು ನೀಡಿದ್ದ. ಆದರೆ ಗುಪ್ತಚರ ಸಂಸ್ಥೆಗಳು ಮತ್ತು ಭದ್ರತಾ ಪಡೆಗಳು ಕ್ರಮ ಕೈಗೊಳ್ಳುವಲ್ಲಿ ವಿಫಲವಾದವು. ಇದು ಭೀಕರ ದುರಂತಕ್ಕೆ ಕಾರಣವಾಯಿತು. ಪಿಓಕೆ ಮತ್ತು ಪಾಕಿಸ್ತಾನದಲ್ಲಿ ನೆಲೆಗೊಂಡಿರುವ ಅಂತರರಾಷ್ಟ್ರೀಯ ಕಮಾಂಡರ್‌ಗಳು ಘಟನೆ ವೇಳೆ ಉಗ್ರರಿಗೆ ನಿರ್ದೇಶನಗಳನ್ನು ನೀಡುತ್ತಿದ್ದರು ಎಂದು ವರದಿಯಾಗಿದೆ. ದಾಳಿಯಲ್ಲಿ ಭಾಗಿಯಾಗಿರುವ ಉಗ್ರಗಾಮಿಗಳು ಶಸ್ತ್ರಾಸ್ತ್ರಗಳನ್ನು ಬಳಸುವಲ್ಲಿ ಉತ್ತಮ ತರಬೇತಿ ಪಡೆದಿದ್ದರು. ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಬರುವ ಜನಪ್ರಿಯ ಪ್ರವಾಸಿ ತಾಣಗಳಾಗಿದ್ದರೂ ಭದ್ರತಾ ಪಡೆಗಳ ಕಡಿಮೆ ಸಂಖ್ಯೆಯಲ್ಲಿರುವ ಪ್ರದೇಶಗಳ ವಿವರವಾದ ವರದಿಗಳನ್ನು ಪಡೆದಿದ್ದರು ಎಂದು ಗುಪ್ತಚರ ಮೂಲಗಳು ತಿಳಿಸಿವೆ. ದಾಳಿಕೋರರು ಹೆಲ್ಮೆಟ್ ಅಳವಡಿಸಲಾದ ಕ್ಯಾಮೆರಾಗಳನ್ನು ಹೊಂದಿದ್ದರು. ಇದು ಪ್ರವಾಸಿಗರ ಹತ್ಯಾಕಾಂಡವನ್ನು ರೆಕಾರ್ಡ್ ಮಾಡಲು ಮತ್ತು ದೃಶ್ಯಾವಳಿಗಳನ್ನು ಅವರ ಭಯೋತ್ಪಾದಕ ಅಂಗ ಸಂಸ್ಥೆಗಳಿಗೆ ರವಾನಿಸಲು ಉದ್ದೇಶಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಇದು ಪಾಕಿಸ್ತಾನದ ಲಷ್ಕರ್ ಎ ತೊಯಿಬಾದ ಅಂಗ ಸಂಸ್ಥೆ. ಭಯೋತ್ಪಾದನೆಗೆ ತಕ್ಕ ಪ್ರತ್ಯುತ್ತರ ನೀಡುವ ನಿಟ್ಟಿನಲ್ಲಿ ಬುಧವಾರ ನಡೆದ ಸಂಪುಟ ಸಮಿತಿ ಸಭೆಯಲ್ಲಿ ಭಾರತ ಮತ್ತು ಪಾಕಿಸ್ತಾನ ನಡುವಿನ ಗಡಿಯನ್ನು ಮುಚ್ಚಲು ಸಮಿತಿ ನಿರ್ಧರಿಸಿತು. ಜತೆಗೆ ಸೂಕ್ತ ದಾಖಲೆಯೊಂದಿಗೆ ಭಾರತ ಪ್ರವೇಶಿಸಿರುವ ಪಾಕಿಸ್ತಾನದ ಪ್ರಜೆಗಳು ದೇಶ ತೊರೆಯಲು ಮೇ 1ರ ಗಡುವು ನೀಡಲಾಗಿದೆ ಎಂದು ತಿಳಿಸಿದ್ದಾರೆ.

ಘಟನೆ ಕುರಿತು ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಬುಧವಾರ ಸಂಜೆ ಉನ್ನತ ಮಟ್ಟದ ಸಭೆ ನಡೆಯಿತು. ರಕ್ಷಣಾ ಇಲಾಖೆಯ ಮೂರೂ ಸೇನೆಗಳಿಗೆ ಕಟ್ಟೆಚ್ಚರ ವಹಿಸಲು ಸೂಚಿಸಲಾಗಿದೆ. ಭಾರತದಲ್ಲಿರುವ ಪಾಕಿಸ್ತಾನದ ಸೇನಾ ಪಡೆಗಳು ಭಾರತ ತೊರೆಯಲು ವಾರದ ಗಡುವು ನೀಡಲು ನಿರ್ಧರಿಸಲಾಗಿದೆ. ಸಿಂಧೂ ನದಿ ಒಪ್ಪಂದವನ್ನು ರದ್ದುಪಡಿಸಲು ತೀರ್ಮಾನಿಸಲಾಗಿದೆ ಎಂದು ಮಿಸ್ರಿ ತಿಳಿಸಿದ್ದಾರೆ.

ಇದಕ್ಕೂ ಮುನ್ನ ಇಂದು ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ನಡೆದ ಎರಡೂವರೆ ಗಂಟೆಗಳ ಹೈವೋಲ್ಟೇಜ್ ಸಭೆಯಲ್ಲಿ ಕೆಲವು ಮಹತ್ವದ ಕಠಿಣ ನಿರ್ಧಾರಗಳನ್ನು ಮಾಡಲಾಗಿದೆ. ಪಹಲ್ಗಾಮ್ ದಾಳಿಯ ಬೆನ್ನಲ್ಲಿಯೇ ಮೊಟ್ಟ ಮೊದಲ ಹಂತವಾಗಿ ರಾಜತಾಂತ್ರಿಕವಾಗಿ ಕೆಲವು ನಿರ್ಧಾರಗಳನ್ನು ಮಾಡಲಾಯಿತು.

ಇದರಲ್ಲಿ ಪ್ರಮುಖವಾಗಿ ಪಾಕಿಸ್ತಾನದ ಜೊತೆಗಿನ ಸಿಂಧೂ ನದಿ ಒಪ್ಪಂದವನ್ನು ರದ್ದು ಮಾಡಲು ಭಾರತ ಸರ್ಕಾರ ತೀರ್ಮಾನ ಮಾಡಿದ್ದು ತಕ್ಷಣದಿಂದಲೇ ಜಾರಿಗೆ ಬರುವಂತೆ ಅಟ್ಟಾರಿ ಗಡಿಯನ್ನು ಬಂದ್ ಮಾಡುವಂತೆ ಸೂಚನೆ ನೀಡಿದೆ. ಅದರೊಂದಿಗೆ ಭಾರತದಲ್ಲಿರುವ 55 ರಾಜತಾಂತ್ರಿಕರ ಪೈಕಿ 25 ಪಾಕಿಸ್ತಾನದ ರಾಜತಾಂತ್ರಿಕರನ್ನು ಒಂದು ವಾರದ ಒಳಗಾಗಿ ದೇಶ ತೊರೆಯುವಂತೆ ಸೂಚನೆ ನೀಡಲಾಗಿದೆ. ಇನ್ನು ಭಾರತದಲ್ಲಿ ಇರುವ ಪಾಕಿಸ್ತಾನದ ಪ್ರಜೆಗಳಿಗೆ 48 ಗಂಟೆಗಳ ಕಾಲಾವಕಾಶ ನೀಡಲಾಗಿದ್ದು, ಅಷ್ಟರ ಒಳಗಾಗಿ ದೇಶ ಬಿಡುವಂತೆ ಸರ್ಕಾರ ಆದೇಶ ನೀಡಿದೆ.

ಇನ್ನು ಪಾಕಿಸ್ತಾನದ ಯಾವುದೇ ಪ್ರಜೆಗಳಿಗೆ ವೀಸಾ ಸಿಗುವುದಿಲ್ಲ. ಈಗಾಗಲೇ ನೀಡಲಾಗಿರುವ ವೀಸಾ ಇನ್ನು 48 ಗಂಟೆಗಳಲ್ಲಿ ರದ್ದಾಗಲಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಸರ್ಕಾರದ ಎದುರು ಮಿಲಿಟರಿ ಕ್ರಮದ ಆಯ್ಕೆಯೂ ಇದ್ದು, ಇದರ ಬಗ್ಗೆಯೂ ಸಿಸಿಎಸ್‌ನಲ್ಲಿ ಚರ್ಚೆಯಾಗಿದೆ. ಈ ಬಗ್ಗೆ ವಿದೇಶಾಂಗ ವ್ಯವಹಾರಗಳ ಇಲಾಖೆ ಯಾವುದೇ ಮಾಹಿತಿ ನೀಡಿಲ್ಲ.

ದೆಹಲಿ ತಲುಪಿದ 26 ಪ್ರವಾಸಿಗರ ಮೃತದೇಹಗಳು

ಸಂಪರ್ಕ ಸಾಧಿಸಿ ದಾಳಿಯಲ್ಲಿ ಮೃತಪಟ್ಟ ಹಾಗೂ ಗಾಯಗೊಂಡಿರುವ ಕನ್ನಡಿಗರ ಮಾಹಿತಿ ಪಡೆದರು. ಇಂದು ಬೆಳಿಗ್ಗೆ ಕರ್ನಾಟಕದ ಮೃತರ ಕುಟುಂಬಸ್ಥರನ್ನು ಭೇಟಿ ಮಾಡಿ ಸಾಂತ್ವನ ಹೇಳಿದ ಅವರು, ದೇಹಗಳನ್ನು ಕರ್ನಾಟಕಕ್ಕೆ ತಲುಪಿಸುವ ವ್ಯವಸ್ಥೆ ಮಾಡಿದರು. ಅಲ್ಲದೇ, ಹಲವಾರು ಕನ್ನಡಿಗರು ಕಾಶ್ಮೀರದಲ್ಲಿ ಸಿಲುಕಿದ್ದು, ಅವರೆಲ್ಲರೂ ರಾಜ್ಯಕ್ಕೆ ಹಿಂತಿರುಗುವ ತವಕದಲ್ಲಿದ್ದಾರೆ. ಕನ್ನಡಿಗರು ಸಹಾಯಕ್ಕಾಗಿ ಸಂಪರ್ಕಿಸಲು ಇದ್ದಂತಹ ಸಹಾಯವಾಣಿ ಮೂಲಕ ಲಾಡ್ ಅವರನ್ನು ಸಂಪರ್ಕಿಸಿದ್ದಾರೆ. ಅವರೆಲ್ಲರನ್ನೂ ಸುರಕ್ಷಿತವಾಗಿ ರಾಜ್ಯಕ್ಕೆ ಕರೆತರುವ ಜವಾಬ್ದಾರಿಯನ್ನು ಲಾಡ್ ನಿರ್ವಹಿಸುತ್ತಿದ್ದಾರೆ.

ಮೈಸೂರು ನಗರದ 5 ಸೇರಿದಂತೆ ಜಿಲ್ಲೆಯ ಎಲ್ಲಾ 14 ಉಪನೋಂದಣಾಧಿಕಾರಿ ಕಚೇರಿಗಳಲ್ಲಿ ಲೋಕಾಯುಕ್ತ ಪೊಲೀಸರಿಂದ ಪರಿಶೀಲನೆ

ಮೈಸೂರು,ಏ.23(ಆರ್‌ಕೆ/ಪಿಎಂ)–ಮೈಸೂರು ನಗರದ ಐದು ಸೇರಿದಂತೆ ಜಿಲ್ಲೆಯ 14 ಉಪನೋಂದಣಾಧಿಕಾರಿ ಕಚೇರಿಗಳಿಗೆ ಬುಧವಾರ ಏಕಕಾಲಕ್ಕೆ ದಿಢೀರ್ ಭೇಟಿ ನೀಡಿದ ಲೋಕಾಯುಕ್ತ ಪೊಲೀಸರು ಪರಿಶೀಲನೆ ನಡೆಸಿದ್ದಾರೆ.

ಜನರಲ್ ಇನ್ಸಪೆಕ್ಷನ್ (ಸಾಮಾನ್ಯ ಪರಿವೀಕ್ಷಣೆ) ಅಡಿಯಲ್ಲಿ ಮಧ್ಯಾಹ್ನ 12 ಗಂಟೆಯಿಂದ ಸಂಜೆಯವರೆಗೆ ಜಿಲ್ಲೆಯ ಎಲ್ಲಾ ಉಪ ನೋಂದಣಾಧಿಕಾರಿ ಕಚೇರಿಗಳಿಗೆ ಲೋಕಾಯುಕ್ತ ಪೊಲೀಸರ ತಂಡಗಳು ಭೇಟಿ ನೀಡಿದ್ದವು. ಈ ವೇಳೆ ದಾಖಲಾತಿಗಳು ಹಾಗೂ ಸಿಬ್ಬಂದಿ ಕಾರ್ಯವೈಖರಿ ಬಗ್ಗೆ ಪರಿಶೀಲನೆ ನಡೆಸಿದ್ದಲ್ಲದೇ ಸ್ಥಳದಲ್ಲಿದ್ದ ಸಾರ್ವಜನಿಕರಿಂದಲೂ ಉಪ ನೋಂದಣಾಧಿಕಾರಿ ಕಚೇರಿಯ ಅಧಿಕಾರಿ ಮತ್ತು ಸಿಬ್ಬಂದಿ ಕಾರ್ಯವೈಖರಿ ಕುರಿತು ಮಾಹಿತಿ ಸಂಗ್ರಹಿಸಿದ್ದಾರೆ.

ಆಸ್ತಿ, ದಸ್ತಾವೇಜುಗಳ ನೋಂದಣಿ, ಋಣಭಾರ ಪತ್ರ ವಿತರಣೆ, ವಿವಾಹ ನೋಂದಣಿ, ಹಣಕಾಸು ವಹಿವಾಟು, ಆನ್‌ಲೈನ್ ಪಾವತಿ, ಹಾಜರಾತಿ, ದಾಖಲೆಗಳ ಸಂಗ್ರಹಣೆ ಇತ್ಯಾದಿಯಲ್ಲಿನ ಪಾರದರ್ಶಕತೆ ಬಗ್ಗೆ ಲೋಕಾಯುಕ್ತ ಪೊಲೀಸರು ಪರಿಶೀಲನೆ ನಡೆಸಿದರು.

ಹಣಕಾಸು ಕೇಳುತ್ತಿದ್ದಾರಾ, ಮಧ್ಯವರ್ತಿಗಳ ಹಾವಳಿ ಇದೆಯೇ ಎಂಬ ಬಗ್ಗೆ ಸಾರ್ವಜನಿಕರಿಂದಲೂ ಮಾಹಿತಿ ಪಡೆದು ದಾಖಲಿಸಿಕೊಳ್ಳಲಾಯಿತು. ಮೈಸೂರಿನ ರಾಮಕೃಷ್ಣನಗರದಲ್ಲಿರುವ ದಕ್ಷಿಣ, ತಾಲೂಕು ಕಚೇರಿಯಲ್ಲಿರುವ ಉತ್ತರ, ವಿಜಯನಗರದಲ್ಲಿರುವ ಪೂರ್ವ, ಡಾ.ರಾಜಕುಮಾರ್ ರಸ್ತೆಯಲ್ಲಿರುವ ಪಶ್ಚಿಮ ಉಪ ನೋಂದಾಣಾಧಿಕಾರಿ ಕಚೇರಿಗಳು ಹಾಗೂ ಮುಡಾ ಕಚೇರಿ ಆವರಣದಲ್ಲಿ ಕಚೇರಿಗಳಿಗೂ ಲೋಕಾಯುಕ್ತ ಅಧಿಕಾರಿಗಳು ಭೇಟಿ ನೀಡಿದ್ದರು. ಅಂತೆಯೇ ತಾಲೂಕು ಕೇಂದ್ರಗಳಲ್ಲಿರುವ ಉಪನೋಂದಣಾಧಿಕಾರಿ ಕಚೇರಿಗಳಲ್ಲಿ ಸಹ ಪರಿಶೀಲನೆ ನಡೆಸಲಾಗಿದೆ.

ಯಾವುದೇ ಉಪನೋಂದಣಾಧಿಕಾರಿ ಕಚೇರಿಯಲ್ಲಿ ಹಣಕಾಸು ಇಲ್ಲವೇ ಕಡತ ವಶಕ್ಕೆ ಪಡೆದಿಲ್ಲ. ಆದರೆ ಸಮಗ್ರವಾಗಿ ಅಲ್ಲಿನ ಕಾರ್ಯವೈಖರಿ ಪರಿಶೀಲನೆ ನಡೆಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಜಮ್ಮು–ಕಾಶ್ಮೀರದಲ್ಲಿ ಪ್ರವಾಸಿಗರ ಹತ್ಯೆಗೆ ಎಸ್‌ಯುಸಿಐ ಖಂಡನೆ

ಮೈಸೂರು, ಏ.23(ಎಸ್‌ಪಿಎನ್)– ಜಮ್ಮು ಮತ್ತು ಕಾಶ್ಮೀರದಲ್ಲಿ 28ಕ್ಕೂ ಪ್ರವಾಸಿಗರನ್ನು ಉಗ್ರರು ಗುಂಡಿಕ್ಕಿ ಹತ್ಯೆ ಮಾಡಿರುವುದನ್ನು ಎಸ್‌ಯುಸಿಐ(ಸಿ) ಜಿಲ್ಲಾ ಘಟಕ ತೀವ್ರವಾಗಿ ಖಂಡಿಸಿದೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ಜನಸಂಖ್ಯಾ ಬದಲಾವಣೆಗೆ ಪ್ರತೀಕಾರವಾಗಿ ಕಾಶ್ಮೀರದ ಪಹಲ್ಗಾಮ್ ಬಳಿ ನಿಷೇಧಿತ ಲಷ್ಕರ್ –ಇ–ತೋಯ್ಬಾ(ಎಲ್‌ಇಟಿ)ದ ಅಂಗಸಂಸ್ಥೆಯಾದ ರೆಸಿಸ್ಟೆನ್ಸ್ ಫ್ರಂಟ್(ಟಿಆರ್‌ಎಫ್)ನ ಭಯೋತ್ಪಾದಕರು ಕರ್ನಾಟಕ ಇಬ್ಬರು ಪ್ರವಾಸಿಗರು ಸೇರಿದಂತೆ ಒಟ್ಟು 28ಕ್ಕೂ ಹೆಚ್ಚು ಪ್ರವಾಸಿಗರನ್ನು ಗುಂಡಿಕ್ಕಿ ಘೋರವಾಗಿ ಹತ್ಯೆ ಮಾಡಿ, ಹತ್ತಾರು ಅಮಾಯಕರನ್ನು ಗಾಯಗೊಳಿಸಿರುವುದನ್ನು ಎಸ್‌ಯುಸಿಐ(ಸಿ) ಜಿಲ್ಲಾ ಕಾರ್ಯದರ್ಶಿ ಬಿ.ರವಿ ತೀವ್ರವಾಗಿ ಖಂಡಿಸಿದ್ದಾರೆ. ಈ ಘಟನೆಯಲ್ಲಿ ಮೃತಪಟ್ಟ ಕುಟುಂಬಗಳು ಹಾಗೂ ಗಾಯಗೊಂಡ ಸಂತ್ರಸ್ತರಿಗೆ ಕೇಂದ್ರ ಸರ್ಕಾರ ಸೂಕ್ತ ಪರಿಹಾರ ಹಾಗೂ ಪುನರ್ವಸತಿ ಕಲ್ಪಿಸಬೇಕು. ಅಲ್ಲದೆ, ಈ ಕುಕೃತ್ಯದಲ್ಲಿ ಭಾಗಿಯಾದ ಅಪರಾಧಿಗಳಿಗೆ ಕಠಿಣ ಶಿಕ್ಷೆ ನೀಡಬೇಕು. ಜಮ್ಮು ಮತ್ತು ಕಾಶ್ಮೀರ ಮತ್ತು ದೇಶದ ಎಲ್ಲಾ ವರ್ಗದ ಜನರು ಈ ಭಯಾನಕ ಹತ್ಯೆಯ ವಿರುದ್ಧ ಧ್ವನಿ ಎತ್ತಬೇಕೆಂದು ಒತ್ತಾಯಿಸಿದ್ದಾರೆ.

ಜಮ್ಮು-ಕಾಶ್ಮೀರದ ಪಹಲ್ಗಾಮ್‌ನಲ್ಲಿ ಉಗ್ರರ ಅಟ್ಟಹಾಸ

ಭಯೋತ್ಪಾದಕರ ದಾಳಿಗೆ ನರೇಂದ್ರ ಮೋದಿ ತಕ್ಕ ಉತ್ತರ

ಶಾಸಕ ಜಿ.ಟಿ.ದೇವೇಗೌಡರ ವಿಶ್ವಾಸ



ಮೈಸೂರು, ಏ.23(ಬಿಎಲ್‌ಯು)- ಜಮ್ಮು-ಕಾಶ್ಮೀರದ ಪಹಲ್ಗಾಮ್‌ನಲ್ಲಿ ನೆತ್ತರು ಹರಿಸಿರುವ ಭಯೋತ್ಪಾದಕ ದಾಳಿಗೆ ನರೇಂದ್ರ ಮೋದಿ ನೇತೃತ್ವದ ಸರ್ಕಾರ ತಕ್ಕ ಉತ್ತರ ನೀಡಲಿದೆ ಎಂದು ಶಾಸಕ ಜಿ.ಟಿ. ದೇವೇಗೌಡರು ವಿಶ್ವಾಸ ವ್ಯಕ್ತಪಡಿಸಿದರು.

ಮೈಸೂರಿನಲ್ಲಿ ಪತ್ರಕರ್ತರ ಜೊತೆ ಮಾತನಾಡಿದ ಅವರು, ಈಗಾಗಲೇ ಇಬ್ಬರು ಉಗ್ರರನ್ನು ಹತ್ಯೆ ಮಾಡಲಾಗಿದ್ದು, ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಹತ್ಯೆಗೆ ನರೇಂದ್ರ ಮೋದಿ ತಕ್ಕ ಉತ್ತರ ನೀಡಿ, ಬಿಸಿ ಮುಟ್ಟಿಸಲಿದ್ದಾರೆ ಎಂದು ಹೇಳಿದರು.

ಜಮ್ಮು-ಕಾಶ್ಮೀರದಲ್ಲಿ ಚುನಾವಣೆ ನಡೆದು ರಚನೆಯಾದ ಸರ್ಕಾರದಲ್ಲಿ ಓಮರ್ ಅಬ್ದುಲ್ಲಾ ಮುಖ್ಯಮಂತ್ರಿ ಆಗಿದ್ದಾರೆ. ಇತ್ತೀಚೆಗೆ ಜಮ್ಮು ಮತ್ತು ಕಾಶ್ಮೀರದಲ್ಲಿ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿತ್ತು. ಆದರೆ ಇಲ್ಲಿಗೆ ಪ್ರವಾಸಿಗರು ಬರಬಾರದು ಎಂದು ಉಗ್ರರು ಇಂತಹ ಕೃತ್ಯ ಎಸಗುತ್ತಿದ್ದಾರೆ ಎಂದು ಆಪಾದಿಸಿದರು.

ಪತ್ನಿ ಹಾಗೂ ಮಗನ ಎದುರೇ ಶಿವಮೊಗ್ಗದ ಮಂಜುನಾಥ ರಾವ್ ಅವರನ್ನು ಭೀಕರವಾಗಿ ಕೊಲೆ ಮಾಡಿದ್ದಾರೆ. ಈ ದಾಳಿಯನ್ನು ಎಲ್ಲಾ ಕನ್ನಡಿಗರು ಖಂಡಿಸಬೇಕು ಎಂದು ತಿಳಿಸಿದರು.

ಹಿಂದೂಗಳನ್ನು ಗುರಿಯಾಗಿಸಿಕೊಂಡು ಉಗ್ರರು ಇಂತಹ ದಾಳಿ ಎಸಗುತ್ತಿದ್ದಾರೆ. ಖಂಡಿತ, ನರೇಂದ್ರ ಮೋದಿ ಅವರು ಭಯೋತ್ಪಾದಕರಿಗೆ ತಕ್ಕ ಉತ್ತರ ನೀಡುತ್ತಾರೆ ಎಂದು ಹೇಳಿದರು.

ಭಾರತೀಯರೆಲ್ಲಾ ಒಟ್ಟಾಗಿ ಉಗ್ರರ ವಿರುದ್ಧ ಹೋರಾಟ ಮಾಡಬೇಕು ಎಂದು ಜಿ.ಟಿ.ದೇವೇಗೌಡರು ಸಲಹೆ ನೀಡಿದರು.

ಭಾರತದಲ್ಲಿ ಉಗ್ರರಿಂದ ಮತ್ತೆ ದಾಳಿ ನಡೆಯದಂತೆ ಎಚ್ಚರಿಕೆ ವಹಿಸಬೇಕು



ಸತೀಶ್ ಜಾರಕಿಹೊಳಿ

ಮೈಸೂರು,ಏ.23 (ಬಿಎಲ್‌ಯು) -ಜಮ್ಮು ಮತ್ತು ಕಾಶ್ಮೀರ ಸೇರಿದಂತೆ ಭಾರತದಲ್ಲಿ ಉಗ್ರರು ವಿಧ್ವಂಸಕ ಕೃತ್ಯ ಎಸಗದಂತೆ ಎಚ್ಚರಿಕೆ ವಹಿಸಬೇಕು ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಇಂತಹ ಕೃತ್ಯ ಎಸಗದಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸಮನ್ವಯತೆಯಿಂದ ಸಂಘಟಿತರಾಗಿ ಕೆಲಸ ಮಾಡಬೇಕು ಎಂದು ಕಿವಿಮಾತು ಹೇಳಿದರು.

ಹಿಂದುಗಳನ್ನೆ ಗುರಿಯಾಗಿಸಿಕೊಂಡು ದಾಳಿ ಮಾಡುತ್ತಿರುವುದು ಉಗ್ರರ ಮನಸ್ಥಿತಿ ತೋರಿಸುತ್ತದೆ. ಈ ಕೃತ್ಯದ ಬಗ್ಗೆ ತನಿಖೆಯಾಗಿ ನಿಖರ ಕಾರಣ ತಿಳಿಯಬೇಕು ಎಂದು ಆಗ್ರಹಿಸಿದರು. ಜಮ್ಮು-ಕಾಶ್ಮೀರದಲ್ಲಿ ಸ್ವಾತಂತ್ರ್ಯ ನಂತರದ ದಿನಗಳಿಂದ ಇಂತಹ ದಾಳಿಗಳು ನಡೆಯುತ್ತಿವೆ. ಆದರೆ ಇಂತಹ ಕೃತ್ಯ ನಡೆಯದಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಎಚ್ಚರಿಕೆ ವಹಿಸಬೇಕು ಎಂದು ಸತೀಶ್ ಜಾರಕಿಹೊಳಿ ಅಭಿಪ್ರಾಯಪಟ್ಟರು.

ಜಾತಿವಾದ ಬಿಟ್ಟು ಹಿಂದೂಗಳು ಉಗ್ರರ ವಿರುದ್ಧ ಹೋರಾಡಬೇಕು



ಪ್ರತಾಪ್ ಸಿಂಹ

ಮೈಸೂರು,ಏ.23(ಬಿಎಲ್‌ಯು)- ಜಾತಿವಾದ ಬಿಟ್ಟು ಹಿಂದೂಗಳೆಲ್ಲಾ ಒಂದಾಗಿ ಉಗ್ರರ ವಿರುದ್ಧ ಸಂಘಟಿತ ಹೋರಾಟ ಮಾಡಬೇಕು ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಸಲಹೆ ನೀಡಿದರು.

ಮೈಸೂರಿನಲ್ಲಿ ಪತ್ರಕರ್ತರ ಜೊತೆ ಮಾತನಾಡಿದ ಅವರು, ರಾವ್, ಗೌಡ, ಹಾಲುಮತಸ್ಥ, ಹಿರೇಮಠ್, ಅಯ್ಯ ಹೀಗೆ ಯಾವುದೇ ಜಾತಿಯವರಾಗಿದ್ದರೂ ಹಿಂದೂಗಳನ್ನು ಗುರಿಯಾಗಿಸಿ ಉಗ್ರರು ಹತ್ಯೆ ಮಾಡಿದ್ದಾರೆ ಎಂದರು. ಉಗ್ರರಿಗೆ ಸ್ಥಳೀಯ ಜನರು ಬೆಂಬಲ ನೀಡುತ್ತಿದ್ದಾರೆ. ದೇಶದಲ್ಲಿ ವ್ಯಾಪಕವಾಗಿ ಆಕ್ರೋಶ ವ್ಯಕ್ತವಾಗುತ್ತಿದ್ದರೂ ಮುಸ್ಲಿಂ ಸಮುದಾಯದ ಯಾವ ಒಬ್ಬ ವ್ಯಕ್ತಿಯೂ ಪ್ರಕರಣ ಖಂಡಿಸಿ ಮಾತನಾಡಿಲ್ಲ. ಈ ಬೆಳವಣಿಗೆಯನ್ನು ಹಿಂದೂಗಳು ಅರಿತುಕೊಂಡು ಒಗ್ಗಟ್ಟಾಗಬೇಕು ಎಂದು ಸಲಹೆ ನೀಡಿದರು. ಹಿಂದೂಗಳು ಜಾತಿ ಹೆಸರಿನಲ್ಲಿ ಹೊಡೆದಾಡುವುದನ್ನು ಬಿಡಬೇಕು, ಸಂಘಟಿತರಾಗಿ ಹೋರಾಡಿ ಉಗ್ರರಿಗೆ ತಕ್ಕ ಉತ್ತರ ನೀಡಬೇಕು. ಈ ಪ್ರಕರಣದಲ್ಲಿ ಕೇಂದ್ರದ ಭದ್ರತಾ ವೈಫಲ್ಯವಿಲ್ಲ. ಮಸೀದಿಗಳೇ ಸ್ಲೀಪರ್ ಸೆಲ್ ಆಗಿ ಕೆಲಸ ಮಾಡುತ್ತಿವೆ ಎಂದು ಪ್ರತಾಪ್ ಸಿಂಹ ದೂರಿದರು.

ಉಗ್ರರಿಗೆ ಕೇಂದ್ರ ಸರ್ಕಾರದಿಂದ ತಕ್ಕ ಪಾಠ



ಮಹದೇವಸ್ವಾಮಿ

ಮೈಸೂರು, ಏ.23(ಬಿಎಲ್‌ಯು)- ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪ್ರವಾಸಿಗರನ್ನು ಹತ್ಯೆ ಮಾಡಿರುವ ಭಯೋತ್ಪಾದಕರಿಗೆ ಕೇಂದ್ರ ಸರ್ಕಾರ ತಕ್ಕ ಪಾಠ ಕಲಿಸಬೇಕು ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಆಗ್ರಹಿಸಿದ್ದಾರೆ.


ಜಮ್ಮು-ಕಾಶ್ಮೀರದ ಪ್ರವಾಸಿ ತಾಣಗಳ ಸೌಂದರ್ಯವನ್ನು ಸವಿಯುವ ವೇಳೆ ಭಯೋತ್ಪಾದಕರು ಕ್ರೌರ್ಯ ಮೆರೆದಿದ್ದು, ಆಘಾತಕಾರಿ ವಿಚಾರವಾಗಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಹಲವು ವರ್ಷಗಳಿಂದ ಜಮ್ಮು ಮತ್ತು ಕಾಶ್ಮೀರದಲ್ಲಿ ಗಲಭೆಗಳು ನಡೆಯುತ್ತಿದ್ದವು. ಆದರೆ ನರೇಂದ್ರ ಮೋದಿ ಅವರ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಬಿಗಿ ಕ್ರಮದಿಂದ ಭಯೋತ್ಪಾದನಾ ಕೃತ್ಯ ಹೆಚ್ಚಾಗಿ ನಡೆಯುತ್ತಿರಲಿಲ್ಲ. ಈ ಹಿನ್ನೆಲೆಯಲ್ಲಿ ಜಮ್ಮು ಮತ್ತು ಕಾಶ್ಮೀರಕ್ಕೆ ಹೆಚ್ಚು ಪ್ರವಾಸಿಗರು ಭೇಟಿ ನೀಡುತ್ತಿದ್ದರು ಎಂದು ಹೇಳಿದ್ದಾರೆ.

ಆದರೆ ಈಗ ಉಗ್ರರು ಹಿಂದೂ ಧರ್ಮೀಯರನ್ನು ಗುರಿಯಾಗಿಸಿಕೊಂಡು ದಾಳಿ ಮಾಡಿ, ಹಲವರನ್ನು ಹತ್ಯೆ ಮಾಡಿದ್ದಾರೆ. ಭಯೋತ್ಪಾದಕರ ಉಪಟಳಕ್ಕೆ ಕಡಿವಾಣ ಹಾಕಲು ಕೇಂದ್ರ ಸರ್ಕಾರ ದಿಟ್ಟ ಕ್ರಮ ಕೈಗೊಳ್ಳಬೇಕು ಎಂದು ಮಹದೇವಸ್ವಾಮಿ ಒತ್ತಾಯಿಸಿದ್ದಾರೆ.

ಪಹಲ್ಗಾಮ್‌ನಲ್ಲಿ ಉಗ್ರರ ದಾಳಿ ಅತ್ಯಂತ ಖಂಡನೀಯ

ಮೈಸೂರು: ಜಮ್ಮು-ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪ್ರವಾಸಿಗರನ್ನು ಗುರಿಯಾಗಿಸಿಕೊಂಡು ಉಗ್ರರು ನಡೆಸಿರುವ ಪೈಶಾಚಿಕ ಕೃತ್ಯ ಅತ್ಯಂತ ಖಂಡನೀಯ ಎಂದು ಮಾಜಿ ಕಾರ್ಪೊರೇಟರ್ ಕೆ.ವಿ.ಮಲ್ಲೇಶ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಘಟನೆಯಲ್ಲಿ ಇಬ್ಬರು ಕನ್ನಡಿಗರೂ ಸೇರಿ 28 ಮಂದಿ ಮೃತಪಟ್ಟಿರುವುದು ನಾಗರಿಕ ಸಮಾಜ ತಲೆತಗ್ಗಿಸುವಂತಹ ಘಟನೆಯಾಗಿದೆ. 2019ರ ಪುಲ್ವಾಮ ದಾಳಿ ನಂತರ ಕಣಿವೆ ರಾಜ್ಯದಲ್ಲಿ ನಡೆದ ಅತ್ಯಂತ ಭೀಕರ ದಾಳಿ ಇದಾಗಿದೆ. ನೇಪಾಳ, ಇಸ್ರೇಲ್, ಇಟಲಿ ಮೂಲದ ವಿದೇಶಿ ಪ್ರಜೆಗಳು ಸಹ ಹತ್ಯೆಗೀಡಾಗಿದ್ದಾರೆ. ನಾಗರಿಕರು, ಪ್ರವಾಸಿಗರ ಮೇಲಿನ ದಾಳಿ ಮಾನವೀಯತೆಯ ಮೇಲಿನ ದಬ್ಬಾಳಿಕೆಯೇ ಆಗಿದೆ. ಕೇಂದ್ರ ಸರಕಾರ ತಕ್ಷಣ ಕಾರ್ಯಪ್ರವೃತ್ತರಾಗಿ ಉಗ್ರರ ಹೆಡೆಮುರಿಕಟ್ಟಲು ಮುಂದಾಗಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ.

ಏ.26ಕ್ಕೆ ಶಾರದಾದೇವಿನಗರದಲ್ಲಿ ನಗರಪಾಲಿಕೆ ವಲಯ ಕಚೇರಿ-3ರ ನೂತನ ಕಟ್ಟಡ ಉದ್ಘಾಟನೆ

ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ಲೋಕಾರ್ಪಣೆ

ಮೈಸೂರು, ಏ.23(ಆರ್‌ಕೆ)-ಮೈಸೂರಿನ ಶಾರದಾದೇವಿನಗರದ ವಿವೇಕಾನಂದ ರಸ್ತೆ 1ನೇ ಕ್ರಾಸ್‌ನಲ್ಲಿ 6.5 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ನಗರಪಾಲಿಕೆ ವಲಯ ಕಚೇರಿಯ ನೂತನ ಕಟ್ಟಡವನ್ನು ಏಪ್ರಿಲ್ 26ರಂದು ಬೆಳಗ್ಗೆ 10.30 ಗಂಟೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸುವರು.

ಶಾಸಕ ಜಿ.ಟಿ.ದೇವೇಗೌಡರು ಅಧ್ಯಕ್ಷತೆ ವಹಿಸಲಿರುವ ಕಾರ್ಯಕ್ರಮದಲ್ಲಿ ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್, ನಗರಾಭಿವೃದ್ಧಿ ಸಚಿವ ಬಿ.ಸುರೇಶ್, ಶಾಸಕರಾದ ತನ್ವೀರ್ ಸೇಠ್, ಟಿ.ಎಸ್.ಶ್ರೀವತ್ಸ, ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನಿಲ್ ಬೋಸ್, ಶಾಸಕರು, ವಿಧಾನ ಪರಿಷತ್ ಸದಸ್ಯರು, ವಿವಿಧ ನಿಗಮ ಮಂಡಳಿಗಳ ಅಧ್ಯಕ್ಷರು ಹಾಗೂ ಮೈಸೂರು ಮಹಾನಗರಪಾಲಿಕೆ ಅಧಿಕಾರಿಗಳು ಭಾಗವಹಿಸುವರು.



ಶಾರದಾದೇವಿನಗರದಲ್ಲಿ ನಿರ್ಮಿಸಿರುವ ಪಾಲಿಕೆ ವಲಯ ಕಚೇರಿ ನೂತನ ಕಟ್ಟಡ.

ಮೈಸೂರಿನ ಮೆಟ್ರೋಪೋಲ್ ಹೋಟೆಲ್‌ನಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಪಾಲಿಕೆ ಉಪ ಆಯುಕ್ತ (ಆಡಳಿತ) ದಾಸೇಗೌಡ ಅವರು, ಕಳೆದ ಹಲವು ವರ್ಷಗಳಿಂದ ಶಾರದಾದೇವಿನಗರದ ಖಾಸಗಿ ಕಟ್ಟಡದಲ್ಲಿ ನಡೆಯುತ್ತಿದ್ದ ಪಾಲಿಕೆ ವಲಯ ಕಚೇರಿ-3ರ ಸ್ವಂತ ಕಟ್ಟಡ ಹೊಂದುವ ಉದ್ದೇಶದಿಂದ 2021ರ ಜನವರಿ 11ರಂದು ಮುಡಾದಿಂದ ಶಾರದಾದೇವಿನಗರ, ಸ್ವಾಮಿ ವಿವೇಕಾನಂದ ರಸ್ತೆಯಲ್ಲಿ 1.12 ಎಕರೆ ಸಿಎ ನಿವೇಶನ ಮಂಜೂರು ಮಾಡಲಾಗಿತ್ತು ಎಂದರು.

ಆ ನಿವೇಶನದಲ್ಲಿ 166 ಚದರ ವಿಸ್ತೀರ್ಣದ 2 ಅಂತಸ್ತಿನ ಕಟ್ಟಡವನ್ನು 6.50 ಕೋಟಿ ರೂ. ವೆಚ್ಚದಲ್ಲಿ ಪಾಲಿಕೆಯಿಂದ ನಿರ್ಮಿಸಲಾಗಿದೆ. ಸುಸಜ್ಜಿತ ಸಭಾಂಗಣ, ವಿಶಾಲವಾದ ವಾಹನ ನಿಲುಗಡೆ ವ್ಯವಸ್ಥೆ, ಲಿಫ್ಟ್, ಕಡತಗಳ ಸಂರಕ್ಷಣೆಗಾಗಿ ದಾಖಲಾತಿ ಕೊಠಡಿ, ಪೌರಕಾರ್ಮಿಕರಿಗೆ ವಿಶ್ರಾಂತಿ ಗೃಹ, ಕಂದಾಯ, ಆರೋಗ್ಯ ಇಂಜಿನಿಯರಿಂಗ್, ಕಂಪ್ಯೂಟರ್ ಸೇರಿದಂತೆ ವಿವಿಧ ವಿಭಾಗಗಳಿಗೆ 150 ಸಿಬ್ಬಂದಿ ಕೆಲಸ ಮಾಡಲು ಕೊಠಡಿ ಸೌಲಭ್ಯವನ್ನು ಕಟ್ಟಡದಲ್ಲಿ ಒದಗಿಸಲಾಗಿದೆ. ಮಹಿಳೆಯರಿಗಾಗಿ ಶಿಶುಪಾಲನಾ ಕೇಂದ್ರ (ಕೂಸು ಮನೆ), ಸುಂದರ ಉದ್ಯಾನವನ, ಕಟ್ಟಡದ ಮುಂಭಾಗದಲ್ಲಿ ರಾಷ್ಟ್ರ ಲಾಂಛನದೊಂದಿಗೆ ಧ್ವಜಸ್ತಂಭ ನಿರ್ಮಾಣ, ವಿಶೇಷ ಚೇತನರಿಗೆ ರ್‍ಯಾಂಕ್, ಕುಡಿಯುವ ನೀರು, ಶೌಚಾಲಯ ಸೇರಿದಂತೆ ಸಾರ್ವಜನಿಕರಿಗಾಗಿ ಅಗತ್ಯ ಮೂಲಸೌಕರ್ಯವನ್ನು ಕಟ್ಟಡದಲ್ಲಿ ಕಲ್ಪಿಸಲಾಗಿದೆ ಎಂದು ದಾಸೇಗೌಡರು ತಿಳಿಸಿದರು.



ಉಪಆಯುಕ್ತರಾದ (ಅಭಿವೃದ್ಧಿ) ಕೆ.ಜೆ.ಸಿಂಧು, ಉಪ ಆಯುಕ್ತ (ಕಂದಾಯ) ಎಸ್.ಜಿ.ಸೋಮಶೇಖರ್, ವಲಯ-3ರ ವಲಯ ಆಯುಕ್ತ ಸತ್ಯಮೂರ್ತಿ, ಕಂದಾಯಾಧಿಕಾರಿ ಬಸವಣ್ಣ ಅವರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಪುಸ್ತಕಗಳ ಉಡುಗೊರೆ



ವಿಶ್ವ ಪುಸ್ತಕ ದಿನ ಅಂಗವಾಗಿ ಮೈಸೂರಿನ ಕೇಂದ್ರ ಕಾರಾಗೃಹದ ಕೈದಿಗಳಿಗೆ ಕಲಾಪೋಷಕ ಕೆ.ರಘುರಾಂ ವಾಜಪೇಯಿ ಪುಸ್ತಕಗಳನ್ನು ಉಡುಗೊರೆಯಾಗಿ ನೀಡಿದರು. ಕಾರಾಗೃಹದ ಮುಖ್ಯ ಅಧೀಕ್ಷಕ ಪಿ.ಎಸ್.ರಮೇಶ್ ಅವರು ಪುಸ್ತಕಗಳನ್ನು ಸ್ವೀಕರಿಸಿದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಏ.23- ನಂಜನಗೂಡು



ಉಪವಿಭಾಗ-2 ಬದನವಾಳು ಶಾಖೆಯ ನಿರ್ವಹಣಾ ಕಾಮಗಾರಿ ನಿಮಿತ್ತ ಏ.25ರಂದು ಬೆಳಗ್ಗೆ 9ರಿಂದ ಸಂಜೆ 5 ಗಂಟೆವರೆಗೆ ನೇರಳೆ, ಹಂಪಾಪುರ, ಹಳೇಪುರ, ಭುಜಗಯ್ಯನಹುಂಡಿ, ಮಲ್ಲಹಳ್ಳಿ, ಹೆಮ್ಮರಗಾಲ, ಶ್ರೀನಗರ, ಹೆಡತಲೆ, ಸಿಂಗಾರಿಪುರ, ಮಾಡ್ರಳ್ಳಿ, ಗೊಣತಗಾಲ, ಕುಂಬ್ರಳ್ಳಿ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯಾಗಲಿದೆ.

ಹೈದರಾಲಿ ರಸ್ತೆಯ ಮರಗಳ ಹನನ

ಲೋಕಾಯುಕ್ತದಲ್ಲಿ ದೂರು ದಾಖಲಿಸಿದ ಪರಿಸರವಾದಿ ಭಾನುಮೋಹನ್



ಮೈಸೂರು, ಏ.23(ಎಂಟಿವೈ)- ಮೈಸೂರಿನ ಹೈದರಾಲಿ ರಸ್ತೆಯ ಅಗಲೀಕರಣಕ್ಕಾಗಿ 40 ಮರ ಕಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿ ಬೆಂಗಳೂರು ಲೋಕಾಯುಕ್ತ ಕಚೇರಿಗೆ ದೂರು ಸಲ್ಲಿಸಲಾಗಿದೆ ಎಂದು ಪರಿಸರವಾದಿ ಭಾನುಮೋಹನ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಸ್ತೆ ಅಗಲೀಕರಣದ ಅವಶ್ಯಕತೆ ಇಲ್ಲದೇ ಇದ್ದರೂ ಹೈದರಾಲಿ ರಸ್ತೆಯಲ್ಲಿ ಮರ ಕಡಿಯಲಾಗಿದೆ. ಮರ ಹನನಕ್ಕೆ ಅನುಮತಿ ನೀಡಿದ ಹಾಗೂ ಮರ ಕಡಿಯುತ್ತಿದ್ದರೂ ತಡೆಯದೆ ಇರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಲೋಕಾಯುಕ್ತರಿಗೆ ನೀಡಿರುವ ದೂರಿನಲ್ಲಿ ಮನವಿ ಮಾಡಲಾಗಿದೆ. ಪ್ರಮುಖವಾಗಿ ಡಿಸಿಎಫ್ ಡಾ.ಕೆ.ಎನ್.ಬಸವರಾಜು, ಮೈಸೂರು ಮಹಾ ನಗರಪಾಲಿಕೆ ಆಯುಕ್ತ ಶೇಖ್ ಆಸೀಫ್, ನಜರ್‌ಬಾದ್ ಠಾಣೆ ಇನ್‌ಸ್ಪೆಕ್ಟರ್ ಮಹದೇವಸ್ವಾಮಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಲಾಗಿದೆ ಎಂದು ಹೇಳಿದರು.

ಕಳೆದ ಮಾ.20 ರಂದು ಹೈದರಾಲಿ ರಸ್ತೆಯನ್ನು 30 ಮೀಟರ್ ಅಗಲೀಕರಿಸಲು ಮರ ತೆರವುಗೊಳಿಸಬೇಕೆಂದು ಪಾಲಿಕೆ ಸಲ್ಲಿಸಿದ ಮನವಿಗೆ, ಮಾ.25ರಂದು ಡಿಸಿಎಫ್ ಮರಗಳ ಕಟಾವಿಗೆ ಅನುಮತಿ ನೀಡಿದ್ದಾರೆ. ಇದಕ್ಕೆ ಏ.11ರಂದು ಡಿಸಿಎಫ್ ಕಚೇರಿಗೆ ತಕರಾರು ಅರ್ಜಿ ಸಲ್ಲಿಸಿದ್ದೇವೆ. ಆದರೂ, ಏ.13ರಂದು ಭಾನುವಾರ ರಜಾ ದಿನದಂದು ಮರ ಕಡಿಯಲಾಗಿದೆ. ಆಯುಕ್ತ ಶೇಖ್ ಆಸಿಫ್ ಕಡೆಯವರು ಎಂದು ಹೇಳಿಕೊಳ್ಳುವ ಕೆಲ ವ್ಯಕ್ತಿಗಳು ಯಾವುದೇ ಕಾರ್ಯಾದೇಶ ಇಲ್ಲದೇ ರಾತ್ರೋರಾತ್ರಿ ಮರ ಕಡಿದಿದ್ದಾರೆ. ಮರ ಕಡಿಯುತ್ತಿದ್ದವರನ್ನು ಪೊಲೀಸರಿಗೆ ಹಿಡಿದುಕೊಟ್ಟರೂ, ನಜರ್‌ಬಾದ್ ಠಾಣೆಯ ಇನ್‌ಸ್ಪೆಕ್ಟರ್ ಮಹದೇವಸ್ವಾಮಿ ಅವರ ವಿರುದ್ಧ ಕ್ರಮ ಕೈಗೊಳ್ಳದೇ, ಅವರನ್ನು ಸುರಕ್ಷಿತವಾಗಿ ಕಳುಹಿಸಿಕೊಟ್ಟಿದ್ದಾರೆ. ಆ ಕಾರಣಕ್ಕೆ ಬೆಂಗಳೂರಿನ ಲೋಕಾಯುಕ್ತರಿಗೆ ದೂರು ನೀಡಲಾಗಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ವಕೀಲ ವಿ. ರವಿಕುಮಾರ್, ಪರಿಸರವಾದಿ ಆದರ್ಶ್ ಅರಸ್ ಇದ್ದರು.

ನಾಳೆಯಿಂದ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಲ್ಲಿ 'ವಿದ್ಯುತ್-2025' ಸಾಂಸ್ಕೃತಿಕ ಕಾರ್ಯಕ್ರಮ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ವಿದ್ಯಾವರ್ಧಕ ಕಾಲೇಜಿನ ಸಾಂಸ್ಕೃತಿಕ ಉತ್ಸವದ ಬಗ್ಗೆ ಕಾಲೇಜಿನ ಪ್ರಾಧ್ಯಾಪಕರು ಸುದ್ದಿಗೋಷ್ಠಿ ನಡೆಸಿದರು.

ಮೈಸೂರು,ಏ.23(ಎಂಟಿವೈ)- ಮೈಸೂರಿನ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನಲ್ಲಿ ಏ.25ರಿಂದ 27ರವರೆಗೆ 'ವಿದ್ಯುತ್-2025' ಸಾಂಸ್ಕೃತಿಕ ಉತ್ಸವ ಆಯೋಜಿಸಲಾಗಿದೆ ಎಂದು ಕಾಲೇಜಿನ ಪ್ರಾಧ್ಯಾಪಕ ಡಾ.ಗೌರಿಶಂಕರ್ ತಿಳಿಸಿದ್ದಾರೆ.

ಮೈಸೂರಿನ ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿವರ್ಷದಂತೆ ಕಾಲೇಜಿನ ಸಾಂಸ್ಕೃತಿಕ ಉತ್ಸವವನ್ನು ಈ ಬಾರಿಯೂ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಕಾಲೇಜಿನ ವಿದ್ಯಾರ್ಥಿಗಳು ಈಗಾಗಲೇ ಸಿದ್ಧತೆ ಮಾಡಿಕೊಂಡಿದ್ದಾರೆ. ವಿದ್ಯುತ್ ಸಾಂಸ್ಕೃತಿಕ ಉತ್ಸವವನ್ನು ಏ.25ರಂದು ಬೆಳಗ್ಗೆ 10ಕ್ಕೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಮಂಡಳಿ ಉಪಾಧ್ಯಕ್ಷ ಪ್ರೊ.ಎಸ್.ಆರ್. ನಿರಂಜನ ಉದ್ಘಾಟಿಸಲಿದ್ದಾರೆ.


ಮುಖ್ಯ ಅತಿಥಿಯಾಗಿ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪ ಗೌಡ, ಪಿ. ವಿಶ್ವನಾಥ್, ಕೋಶಾಧಿಕಾರಿ ಶ್ರೀಶೈಲ ರಾಮಣ್ಣನವರ, ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ.ಬಿ.ಸದಾಶಿವೇಗೌಡ, ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ಡಾ.ಗೌರಿಶಂಕರ್ ಪಾಲ್ಗೊಳ್ಳಲಿದ್ದಾರೆ. ಉದ್ಘಾಟನಾ ಕಾರ್ಯಕ್ರಮದ ನಂತರ ನಂತರ ಎನ್‌ಎಸ್‌ಎಸ್ ಮತ್ತು ರೆಡ್‌ಕ್ರಾಸ್ ಸಹಯೋಗದಲ್ಲಿ ರಕ್ತದಾನ ಶಿಬಿರ ಆಯೋಜಿಸಲಾಗಿದೆ.

ಮೂರು ದಿನ ನಡೆಯುವ ಈ ಉತ್ಸವದಲ್ಲಿ ಡಾಗ್ ಶೋ, ಆಟೋ ಎಕ್ಸ್‌ಪೋ, ರಂಗೋಲಿ, ರಿದಮ್ ರಂಬಲ್, ದಿ ಸಾಂಗ್ ಬರ್ಡ್ಸ್ ಎಕೊ, ಮೆಹಂದಿ ಸ್ಪರ್ಧೆ, ದಿ ರನ್‌ವೇ ಶೋಡೌನ್, ದಿ ಲ್ಯೂಮಿನಸ್ ಲೆನ್ಸ್ (ಫೋಟೋಗ್ರಫಿ ಸ್ಪರ್ಧೆ), ಸಾಮಾನ್ಯ ಜ್ಞಾನ ಮತ್ತು ಸಿನೆಮಾ ಕ್ವಿಜ್, ಡಬ್ ಶರೇಡ್ಸ್, ಮುಖದ ಚಿತ್ತಾರ, ಪಿಕ್ಷನರಿ ಇತ್ಯಾದಿ ಕಾರ್ಯಕ್ರಮಗಳು ಜರುಗಲಿವೆ ಎಂದು ತಿಳಿಸಿದರು.

ಏ.25ರಂದು ಸಂಜೆ 6ರಿಂದ ಸ್ಯಾಂಡಲ್‌ವುಡ್ ನೈಟ್ ಸಂಗೀತ ಸಂಜೆ ಕಾರ್ಯಕ್ರಮ ಜರುಗಲಿದ್ದು, ಗಾಯಕಿ ಸಂಗೀತ ರವೀಂದ್ರನಾಥ್ ತಂಡ ಗಾಯನ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಏ.26ರಂದು ಸಂಜೆ 6ರಿಂದ ನಡೆಯುವ ಬಾಲಿವುಡ್ ನೈಟ್ ಸಂಗೀತ ಸಂಜೆ ಕಾರ್ಯಕ್ರಮದಲ್ಲಿ ಹಿನ್ನೆಲೆ ಗಾಯಕಿ ಶಿರ್ಲಿ ಸೆಟಿಯಾ ಅವರ ತಂಡ ಗಾಯನ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಏ.27ರಂದು ಸಂಜೆ 6ರಿಂದ ಡಿಜೆ ನೈಟ್ ಕಾರ್ಯಕ್ರಮವಿದ್ದು, ಡಿಜೆ ಶಿವ ಮಾನ್ವಿ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕಾಲೇಜಿನ ಪ್ರಾಧ್ಯಾಪಕರಾದ ಡಾ.ಹೆಚ್.ಎ.ಸುದೇವ್, ಪ್ರೊ.ಹೆಚ್.ಎಸ್.ಪುನೀತ್, ಪ್ರೊ.ಹೆಚ್.ರಶ್ಮಿ, ಪ್ರೊ.ಸ್ಫೂರ್ತಿ ಹಾಗೂ ವಿದ್ಯಾರ್ಥಿ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಶುಭಾಶಯ...



ರಾಜ್ಯದ ಜನಪ್ರಿಯ ಪ್ರಾದೇಶಿಕ ದಿನಪತ್ರಿಕೆ 'ಮೈಸೂರು ಮಿತ್ರ', ಏ.16ರಂದು 46ನೇ ವಾರ್ಷಿಕೋತ್ಸವ ಆಚರಿಸಿಕೊಂಡ ಹಿನ್ನೆಲೆಯಲ್ಲಿ ಪತ್ರಿಕೆಯ ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅವರನ್ನು ಸಮಾಜ ಸೇವಕ ಎಸ್.ಶ್ರೀಕಾಂತ್ ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಿದರು.

ಏ.27ಕ್ಕೆ ಶ್ರೀ ಗಾನಯೋಗಿ ಪಂಚಾಕ್ಷರಿ ಗವಾಯಿಗಳ ಜಯಂತ್ಯುತ್ಸವ



ಮೈಸೂರು,ಏ.23(ಎಂಟಿವೈ)- ಮೈಸೂರಿನ ಕುವೆಂಪುನಗರದ ಗಾನಭಾರತಿ ವೀಣೆಶೇಷಣ್ಣ ಭವನದಲ್ಲಿ ಏ.27 ರಂದು ಬೆಳಗ್ಗೆ 9.30ಕ್ಕೆ ಶ್ರೀ ಗಾನಯೋಗಿ ಪಂಡಿತ ಪಂಚಾಕ್ಷರಿ ಗವಾಯಿಗಳ 134ನೇ ಹಾಗೂ ಶ್ರೀ ಡಾ.ಪಂಡಿತ ಪುಟ್ಟರಾಜ ಗವಾಯಿ ಅವರ 111ನೇ ಜಯಂತ್ಯುತ್ಸವ ಹಾಗೂ ಸಂಗೀತೋತ್ಸವವನ್ನು ಹಮ್ಮಿಕೊಳ್ಳಲಾಗಿದೆ ಎಂದು ಗಾನಯೋಗಿ ಕಲಾ ಟ್ರಸ್ಟ್ ಕಾರ್ಯದರ್ಶಿ ನಾಗೇಂದ್ರ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರೀ ಗಾನಯೋಗಿ ಕಲಾ ಟ್ರಸ್ಟ್, ಶ್ರೀ ಅಮರೇಶ್ವರ ಸಂಗೀತ ಮತ್ತು ಸಾಂಸ್ಕೃತಿಕ ಕಲಾ ಸಂಸ್ಥೆ ಸಹಯೋಗದಲ್ಲಿ ಗಾನಯೋಗಿ ಪಂಡಿತ ಪಂಚಾಕ್ಷರಿ ಗವಾಯಿ ಹಾಗೂ ಡಾ.ಪಂಡಿತ ಪುಟ್ಟರಾಜ ಕವಿ ಗವಾಯಿ ಅವರ ಜಯಂತ್ಯುತ್ಸವ ಹಾಗೂ ಸಂಗೀತೋತ್ಸವವನ್ನು ಏರ್ಪಡಿಸಲಾಗಿದೆ.

ಅಂದು ಬೆಳಗ್ಗೆ 9:30ಕ್ಕೆ ಶ್ರೀ ಕುಂದೂರು ಮಠದ ಡಾ. ಶರತ್‌ಚಂದ್ರ ಸ್ವಾಮೀಜಿ ಉಪಸ್ಥಿತಿಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ ಜಯಂತ್ಯುತ್ಸವವನ್ನು ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಯಾಗಿ ಗಾಯಕ ಡಾ.ವೆಂಕಟೇಶ್ ಪೂಜಾರ್, ಪಂಡಿತ್ ಪಂಚಾಕ್ಷರಿ ಗವಾಯಿಗಳ ಅಂಧರ ಸಂಗೀತ ಮಹಾವಿದ್ಯಾಲಯದ ಮುಖ್ಯೋಪಾಧ್ಯಾಯ ಕಳಕಪ್ಪ ವಿ. ಮದ್ಲಾಪುರ, ನಂಜನಗೂಡು ತಾಲೂಕಿನ ದೇವೀರಮ್ಮನ ಹಳ್ಳಿ ಗ್ರಾಮದ ಅನುರಾಗ ಮಕ್ಕಳ ಮನೆ ಸಂಸ್ಥಾಪಕ ಡಿ.ಜಿ.ಸೋಮಶೇಖರ ಮೂರ್ತಿ, ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಶಾರದಾ ಶಿವಲಿಂಗಪ್ಪ, ಶ್ರೀ ಬಸವೇಶ್ವರ ಸೇವಾ ಸಮಿತಿ ಅಧ್ಯಕ್ಷ ಡಾ.ಹೆಚ್.ಎನ್. ಲೋಕೇಶಪ್ಪ, ಶ್ರೀ ಗಾನಯೋಗಿ ಕಲಾ ಟ್ರಸ್ಟ್ ಗೌರವ ಅಧ್ಯಕ್ಷ ಆನಂದ ಕುಮಾರ್ ಕಂಬಳಿಹಾಳ, ಅಧ್ಯಕ್ಷ ಬಿ.ಎಸ್. ವಿರೂಪಾಕ್ಷ, ಶ್ರೀ ಅಮರೇಶ್ವರ ಸಂಗೀತ ಮತ್ತು ಸಾಂಸ್ಕೃತಿಕ ಕಲಾ ಸಂಸ್ಥೆಯ ಅಧ್ಯಕ್ಷೆ ರತ್ನಮ್ಮ ಎಲ್.ಹೂಗಾರ ಮತ್ತಿತರರು ಪಾಲ್ಗೊಳ್ಳಲಿದ್ದಾರೆ. ಶರಣ ಸಾಹಿತ್ಯ ಪರಿಷತ್ತಿನ ನಗರ ಘಟಕದ ಅಧ್ಯಕ್ಷ ಮ.ಗು.ಸದಾನಂದಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಶ್ರೀ ಗಾನಯೋಗಿ ಕಲಾ ಟ್ರಸ್ಟ್ ಗೌರವಾಧ್ಯಕ್ಷ ಆನಂದ ಕುಮಾರ್ ಕಂಬಳಿಹಾಳ, ನಿರ್ದೇಶಕರಾದ ಲೋಕೇಶಪ್ಪ, ಜಗದೀಶ್ ಬಿ. ಚಿಕ್ಕಮಠ್, ಮಹಾದೇವು, ಬಿ.ಎಸ್. ನಂದೀಶ್ವರ ಉಪಸ್ಥಿತರಿದ್ದರು.

ಏ.27, ಸಾಹಿತ್ಯ ಚಾವಡಿ-ಸಂವಾದ

ಮೈಸೂರು, ಏ. 23- ಮೈಸೂರಿನ ಕುವೆಂಪುನಗರದ ಸುರುಚಿ ರಂಗಮನೆಯಲ್ಲಿ ಏ.27ರಂದು ಸಂಜೆ 6.30 ರಿಂದ ಸಾಹಿತ್ಯ ಚಾವಡಿ "ಕೆಂಪನಂಜಮ್ಮಣ್ಣಿ-ಮಾದರಿ ಮೈಸೂರಿನ ತಾಯಿಬೇರು' ಕುರಿತು ಲೇಖಕ ಡಾ.ಗಜಾನನ ಶರ್ಮ ಅವರೊಂದಿಗೆ ಸಂವಾದ ಕಾರ್ಯಕ್ರಮ ಆಯೋಜಿಸಲಾಗಿದೆ. ಟೆಕ್ನಿಕಲ್ ಮ್ಯಾನೇಜರ್ ಶರತ್ ಚಂದ್ರ, ಹಾಗೂ ಶಿಕ್ಷಕಿ ರಜನಿ ಮನೋಹರ್ ಸಂವಾದ ನಡೆಸಿಕೊಡುವರು. ಹೆಚ್ಚಿನ ಮಾಹಿತಿಗೆ 9880145427, 9844405342 ಸಂಪರ್ಕಿಸಬಹುದು.

ದೇಶ - ವಿದೇಶ

ಜನಸಂಖ್ಯೆ ಹೆಚ್ಚಳಕ್ಕೆ ಅಮೆರಿಕದಲ್ಲೂ ಒತ್ತು

ವಾಷಿಂಗ್ಟನ್: ಚೀನಾ, ದ.ಕೊರಿಯಾ ಬಳಿಕ ಅಮೆರಿಕವೂ



ಜನಸಂಖ್ಯೆ ಹೆಚ್ಚಳದ ನಿಟ್ಟಿನಲ್ಲಿ ಹೆಜ್ಜೆಯಿಟ್ಟಿದೆ. ಜನನ ಪ್ರಮಾಣ ಕುಸಿಯುತ್ತಿದೆ ಎಂಬ ಆತಂಕದ ಹಿನ್ನೆಲೆಯಲ್ಲಿ ಜನಸಂಖ್ಯೆ ಹೆಚ್ಚಳಕ್ಕಾಗಿ 4.26 ಲಕ್ಷ ರೂ.ಗಳವರೆಗೂ ಪ್ರೋತ್ಸಾಹ ಧನ ನೀಡಲು ಟ್ರಂಪ್ ನೇತೃತ್ವದ ಸರ್ಕಾರ ಆಲೋಚಿಸಿದೆ ಎಂದು ವರದಿಯಾಗಿದೆ. ವಿವಾಹ ಹಾಗೂ ಜನನ ಪ್ರಮಾಣ ಹೆಚ್ಚಳಕ್ಕೆ ಅನುಸರಿಸಬೇಕಾದ ಮಾರ್ಗಗಳೇನು ಎಂಬ ಕುರಿತು ವಿವಿಧ ಪ್ರಸ್ತಾಪಗಳನ್ನು ಸರ್ಕಾರ ಆಲಿಸುತ್ತಿದೆ ಎನ್ನಲಾಗಿದೆ. ಪ್ರತಿ ಅಮೆರಿಕನ್ ತಾಯಿಗೆ ಮಗುವಿನ ಜನನದ ನಂತರ ಪ್ರೋತ್ಸಾಹ ಧನವಷ್ಟೇ ಅಲ್ಲದೆ ಮಹಿಳೆಯರ ಋತುಚಕ್ರ ಸೇರಿದಂತೆ ನೈಸರ್ಗಿಕ ಪ್ರಕ್ರಿಯೆಗಳ ಬಗ್ಗೆ ಶಿಕ್ಷಣ ನೀಡುವ ಕಾರ್ಯಕ್ರಮಗಳಿಗೆ ಸರ್ಕಾರದಿಂದ ಸಹಾಯಧನವನ್ನು ನೀಡಲೂ ಆಲೋಚಿಸಲಾಗಿದೆ. ಸರ್ಕಾರಿ ಬೆಂಬಲಿತ ಫೆಲೋಶಿಪ್‌ಗಳಲ್ಲೂ ಶೇ.30ರಷ್ಟು ವಿದ್ಯಾರ್ಥಿ ವೇತನವನ್ನು ವಿವಾಹಿತರಿಗೆ ಹಾಗೂ ಮಕ್ಕಳ ಹೆತ್ತವರಿಗೆ ಮೀಸಲಿಡುವ ಬಗ್ಗೆಯೂ ಆಲೋಚಿಸಲಾಗಿದೆ.

ಉಗ್ರನಿಂದ ಗನ್ ಕಿತ್ತುಕೊಳ್ಳಲು ಯತ್ನ: ಗುಂಡಿಗೆ ಬಲಿಯಾದ ಕುದುರೆ ಸವಾರ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ



ನಡೆದ ಭಯೋತ್ಪಾದಕ ದಾಳಿಯ ವೇಳೆ ಪ್ರವಾಸಿಗರನ್ನು ರಕ್ಷಿಸಲು ಹೋಗಿ ಸ್ಥಳೀಯ ಕುದುರೆ ಸವಾರ ಸೈಯದ್ ಆದಿಲ್ ಹುಸೈನ್ ಶಾ(28) ಉಗ್ರರ ಗುಂಡಿಗೆ ಬಲಿಯಾಗಿದ್ದಾರೆ. ಜೀವನಾಧಾರವಾಗಿ ಹಲವು ವರ್ಷಗಳಿಂದ ಕುದುರೆ ಸವಾರಿ ಕೆಲಸ ಮಾಡುತ್ತಿದ್ದ ಆದಿಲ್, ಮಂಗಳವಾರವೂ ಪ್ರವಾಸಿಗರನ್ನು ಕುದುರೆ ಮೂಲಕ ಬೈಸರನ್‌ಗೆ ಕರೆದುಕೊಂಡು ಹೋಗುತ್ತಿದ್ದರು. ಈ ವೇಳೆ ಭಯೋತ್ಪಾದಕರು ಪ್ರವಾಸಿಗರನ್ನು ಗುರಿಪಡಿಸಿ ಏಕಾಏಕಿ ಗುಂಡಿನ ದಾಳಿ ನಡೆಸಿದ್ದಾರೆ. ತಮ್ಮ ಕುದುರೆ ಮೇಲಿದ್ದ ಪ್ರವಾಸಿಗನ ಮೇಲೆ ದಾಳಿ ಮಾಡಲು ಮುಂದಾದಾಗ, ಆದಿಲ್ ಉಗ್ರನ ವಿರುದ್ಧ ಹೋರಾಟಕ್ಕಿಳಿದಿದ್ದಾರೆ. ಉಗ್ರನ ಕೈಯಿಂದ ಗನ್ ಕಿತ್ತುಕೊಳ್ಳಲು ಯತ್ನಿಸಿದ ವೇಳೆ ಆದಿಲ್ ಮೇಲೆ ಉಗ್ರನು ಗುಂಡಿನ ದಾಳಿ ನಡೆಸಿದ್ದು, ಆದಿಲ್ ಮೃತಪಟ್ಟಿದ್ದಾರೆ. ವಯಸ್ಸಾದ ಪೋಷಕರು, ಹೆಂಡತಿ ಮತ್ತು ಮಕ್ಕಳನ್ನು ಹೊಂದಿರುವ ಕುಟುಂಬಕ್ಕೆ ಆದಿಲ್ ಒಬ್ಬರೇ ಆಧಾರವಾಗಿದ್ದು, ಇದೀಗ ಆ ಕುಟುಂಬ ಭವಿಷ್ಯದ ಬಗ್ಗೆ ಆತಂಕ ವ್ಯಕ್ತಪಡಿಸಿದೆ. ಮಗನ ಸಾವಿನ ಬಗ್ಗೆ ಸುದ್ದಿಸಂಸ್ಥೆ ಜೊತೆ ಮಾತನಾಡಿರುವ ಆದಿಲ್ ಪೋಷಕರು, ದುಃಖವನ್ನು ಹೊರಹಾಕಿದ್ದಾರೆ.

ಬಾರಾಮುಲ್ಲಾದಲ್ಲಿ ಒಳನುಸುಳುವಿಕೆ ಪ್ರಯತ್ನ ಸೇನೆಯಿಂದ ವಿಫಲ; ಇಬ್ಬರು ಉಗ್ರರು ಹತ್ಯೆ

ಶ್ರೀನಗರ: ದಕ್ಷಿಣ ಕಾಶ್ಮೀರದ ಅನಂತನಾಗ್ ಜಿಲ್ಲೆಯ ಪಹಲ್ಗಾಮ್‌ನಲ್ಲಿ ನಡೆದ ಭೀಕರ ಭಯೋತ್ಪಾದಕ ದಾಳಿ ಬಳಿಕ ಇಂದು ಉತ್ತರ ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯ ಉರಿ ನಾಲಾದ ಸರ್ಜೀವನ್ ಸಾಮಾನ್ಯ ಪ್ರದೇಶದ ಮೂಲಕ ಮೂವರು ಯುಐ ಭಯೋತ್ಪಾದಕರು ಒಳನುಸುಳಲು ಪ್ರಯತ್ನಿಸಿದರು ಎಂದು ಚಿನಾರ್ ಕಾರ್ಪ್ಸ್ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದೆ.

ಇಬ್ಬರು ಭಯೋತ್ಪಾದಕರನ್ನು ಹತ್ಯೆ ಮಾಡಲಾಗಿದೆ. ಭಯೋತ್ಪಾದಕರಿಂದ ದೊಡ್ಡ ಪ್ರಮಾಣದ ಶಸ್ತ್ರಾಸ್ತ್ರಗಳು, ಮದ್ದುಗುಂಡುಗಳು ಮತ್ತು ಇತರ ಯುದ್ಧೋಚಿತ ದಾಸ್ತಾನುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ. ನಮ್ಮ ಪಡೆಗಳು ಒಳನುಸುಳುವವರನ್ನು ಎದುರಿಸಿದಾಗ ಗುಂಡಿನ ಚಕಮಕಿ ನಡೆಯಿತು ಎಂದು ಸೇನಾ ಅಧಿಕಾರಿಯೊಬ್ಬರು ಹೇಳಿದ್ದು, ಗುಂಡಿನ ಚಕಮಕಿ ಇನ್ನೂ ಮುಂದುವರಿದಿದೆ. ಪಡೆಗಳಿಗೆ ಬೆಂಬಲ ನೀಡಲು ಹೆಚ್ಚುವರಿ ಪಡೆಗಳನ್ನು ಪ್ರದೇಶಕ್ಕೆ ರವಾನಿಸಲಾಗಿದೆ. ಈ ಪ್ರದೇಶದಲ್ಲಿ ಉಳಿದಿರುವ ಉಗ್ರರನ್ನು ಪತ್ತೆಹಚ್ಚಲು ವೈಮಾನಿಕ ಕಣ್ಗಾವಲುಗಾಗಿ ಡ್ರೋನ್‌ಗಳು ಮತ್ತು ಹೆಲಿಕಾಪ್ಟರ್‌ಗಳನ್ನು ಸಹ ನಿಯೋಜಿಸಲಾಗಿದೆ.

ಪಹಲ್ಗಾಮ್ ದಾಳಿ: ಪಾಕಿಸ್ತಾನ, ಎಲ್‌ಇಟಿಗೆ ಧನ್ಯವಾದ ಹೇಳಿದ ಜಾರ್ಖಂಡ್ ವ್ಯಕ್ತಿ ಬಂಧನ

ರಾಂಚಿ: ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪಾಕಿ



ಸ್ತಾನ ಮತ್ತು ಲಷ್ಕರ್-ಎ-ತೊಯ್ಬಾಗೆ ಧನ್ಯವಾದ ಹೇಳಿದ ಆರೋಪದ ಮೇಲೆ ಜಾರ್ಖಂಡ್ ಪೊಲೀಸರು ವ್ಯಕ್ತಿಯನ್ನು ಬಂಧಿಸಿದ್ದಾರೆ. ಬಂಧಿತನನ್ನು ನೌಶಾದ್ ಎಂದು ಗುರುತಿಸಲಾಗಿದೆ. ಈ ವ್ಯಕ್ತಿ ಆರ್‌ಎಸ್‌ಎಸ್ ಮತ್ತು ಬಜರಂಗದಳದಂತಹ ಹಿಂದೂ ಸಂಘಟನೆಗಳನ್ನು ಗುರಿಯಾಗಿಸಿ ದಾಳಿ ಮಾಡುವಂತೆ ಪಾಕಿಸ್ತಾನಕ್ಕೆ ಮನವಿ ಮಾಡಿಕೊಂಡಿದ್ದಾನೆ. ಬೊಕಾರೊದ ಬಲಿದಿಹ್ ಪೊಲೀಸ್ ಠಾಣೆ ವ್ಯಾಪ್ತಿಯ ಮಲ್ಲಾ ನಗರದಲ್ಲಿ ಬುಧವಾರ ಈ ವ್ಯಕ್ತಿಯನ್ನು ಬಂಧಿಸಲಾಗಿದೆ. ಇಸ್ಲಾಮಿಕ್ ವಕೀಲ ಮತ್ತು ದಿಟ್ಟ ವಾಗ್ಮಿ ಎಂದು ಹೇಳಿಕೊಳ್ಳುವ ಆರೋಪಿ ಸಾಮಾಜಿಕ ಮಾಧ್ಯಮ ವೇದಿಕೆ ಎಕ್ಸ್‌ನಲ್ಲಿ 'ಕ್ವಾಸ್ಮಿ' ಹೆಸರಿನಲ್ಲಿ ವಿವಾದಾತ್ಮಕ ಹೇಳಿಕೆ ಪೋಸ್ಟ್ ಮಾಡಿದ್ದಾನೆ. ಧನ್ಯವಾದಗಳು ಪಾಕಿಸ್ತಾನ, ಧನ್ಯವಾದಗಳು ಲಷ್ಕರ್-ಎ-ತೊಯ್ಬಾ, ಅಲ್ಲಾಹನು ನಿಮ್ಮನ್ನು ಯಾವಾಗಲೂ ಆಶೀರ್ವದಿಸಲಿ. ಆಮೆನ್, ಆಮೆನ್. ಆರ್‌ಎಸ್‌ಎಸ್, ಬಿಜೆಪಿ, ಬಜರಂಗದಳ ಮತ್ತು ಮಾಧ್ಯಮಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಿದರೆ ನಾವು ಸಂತೋಷವಾಗಿರುತ್ತೇವೆ ಎಂದು ಬರೆದಿದ್ದಾನೆ.

ಉಗ್ರರ ದಾಳಿ ಕೈವಾಡ ನಿರಾಕರಿಸಿದ ಪಾಕಿಸ್ತಾನ



ಇಸ್ಲಾಮಾಬಾದ್: ಜಮ್ಮು-ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿ ಹಿಂದಿನ ತನ್ನ ಕೈವಾಡದ ಆರೋಪವನ್ನು ಪಾಕಿಸ್ತಾನ ತಳ್ಳಿ ಹಾಕಿದೆ. ಈ ಕುರಿತು ಖಾಸಗಿ ಚಾನಲ್‌ಗೆ ನೀಡಿರುವ ಸಂದರ್ಶನದಲ್ಲಿ ಪಾಕಿಸ್ತಾನದ ರಕ್ಷಣಾ ಸಚಿವ ಖವಾಜಾ ಆಸೀಫ್ ಆರೋಪ ನಿರಾಕರಿಸಿದ್ದಾರೆ.

ಪಹಲ್ಗಾಮ್ ಭಯೋತ್ಪಾದಕ ದಾಳಿ ಹಾಗೂ ಪಾಕಿಸ್ತಾನಕ್ಕೂ ಯಾವುದೇ ನಂಟು ಇಲ್ಲ. ನಮ್ಮ ಮೇಲೆ ಆರೋಪ ಹೊರಿಸಬೇಡಿ. ಭಯೋತ್ಪಾದನೆಯನ್ನು ನಾವು ಬೆಂಬಲಿಸುವುದಿಲ್ಲ. ಈ ಸಂಬಂಧ ನಮ್ಮ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಹೇಳಿದ್ದಾರೆ. ಈ ನಡುವೆ ಭಾರತದಲ್ಲೇ ಆಂತರಿಕವಾಗಿ ಅಶಾಂತಿ ಇದೆ ಎಂದು ಅವರು ಬೊಟ್ಟು ಮಾಡಿದ್ದಾರೆ. ಮಣಿಪುರ ಸೇರಿದಂತೆ ನಾಗಾಲ್ಯಾಂಡ್‌ನಿಂದ ಕಾಶ್ಮೀರದವರೆಗೆ ಭಾರತ ಸರ್ಕಾರದ ವಿರುದ್ಧ ಹೋರಾಟ ನಡೆಯುತ್ತಿದೆ. ಏತನ್ಮಧ್ಯೆ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯಲ್ಲಿ ಮೃತಪಟ್ಟವರಿಗಾಗಿ ಪಾಕಿಸ್ತಾನದ ವಿದೇಶಾಂಗ ಸಚಿವಾಲಯ ಸಂತಾಪ ಸೂಚಿಸಿದೆ. ದಾಳಿಯಲ್ಲಿ ಪ್ರವಾಸಿಗರು ಮೃತಪಟ್ಟಿರುವುದು ಅತ್ಯಂತ ಕಳವಳಕಾರಿಯಾಗಿದೆ. ಮೃತರ ಸಂಬಂಧಿಕರಿಗೆ ನಾವು ಸಂತಾಪವನ್ನು ಸೂಚಿಸುತ್ತೇವೆ. ಗಾಯಗೊಂಡವರು ಶೀಘ್ರದಲ್ಲೇ ಚೇತರಿಸಿಕೊಳ್ಳಲಿ ಎಂದು ಪಾಕ್ ವಿದೇಶಾಂಗ ಸಚಿವಾಲಯದ ವಕ್ತಾರ ತಿಳಿಸಿದ್ದಾರೆ.

ಪಹಲ್ಗಾಮ್ ಹತ್ಯೆ: ಜಿಲ್ಲೆಯಾದ್ಯಂತ ಪ್ರತಿಭಟನೆ



ಉಗ್ರರ ಕೃತ್ಯವನ್ನು ಖಂಡಿಸಿ ಬಿಜೆಪಿ ಕಾರ್ಯಕರ್ತರು ದೀಪ ಹಿಡಿದು ಪ್ರತಿಭಟನೆ ನಡೆಸಿದರು.

ಕುಶಾಲನಗರ,ಏ.23–ಜಮ್ಮು ಕಾಶ್ಮೀರ ಬಳಿಯ ಪಹಲ್ಗಾಮ್‌ನಲ್ಲಿ ಪ್ರವಾಸಿಗರನ್ನು ಹತ್ಯೆಗೈದ ಉಗ್ರರ ಕೃತ್ಯವನ್ನು ಖಂಡಿಸಿ ಬಿಜೆಪಿ ಕಾರ್ಯಕರ್ತರು ದೀಪ ಹಿಡಿದು ಪ್ರತಿಭಟನೆ ನಡೆಸಿದರು.

ಇಲ್ಲಿನ ಕಾರ್ಯಪ್ಪ ವೃತ್ತದಲ್ಲಿ ಜಮಾಯಿಸಿದ ಬಿಜೆಪಿ ಕಾರ್ಯಕರ್ತರು ಪಕ್ಷದ ಬಾವುಟ ಹಿಡಿದು ಉಗ್ರರ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಹಿಂದೂ ವಿರೋಧಿ ಬುದ್ಧಿಜೀವಿಗಳಿಗೆ, ಪ್ರಾಣತೆತ್ತವರ ಪರ ನಿಲ್ಲದ ಮಾನವ ಹಕ್ಕುಗಳ ಆಯೋಗಕ್ಕೆ ಹಾಗೂ ಹಿಂದೂ ವಿರೋಧಿ ರಾಜಕಾರಣಿಗಳ ವಿರುದ್ಧ ಧಿಕ್ಕಾರ ಕೂಗಿದರು.

ಬಿಜೆಪಿ ಅಧ್ಯಕ್ಷ ಚರಣ್, ಪುರಸಭೆ ಸದಸ್ಯ ಅಮೃತ್ ರಾಜ್ ಮಾತನಾಡಿ, ಜಮ್ಮುಕಾಶ್ಮೀರದಲ್ಲಿ ರಾಷ್ಟ್ರಪತಿ ಆಡಳಿತ ಹಾಕಬೇಕು ಹೆಚ್ಚಿನ ಭದ್ರತೆ ವ್ಯವಸ್ಥೆ ಕಲ್ಪಿಸಬೇಕು ಎಂದು ಒತ್ತಾಯಿಸಿದರು. ಬಿಜೆಪಿ ನಗರ ಘಟಕದ ಕಾರ್ಯದರ್ಶಿ ಎಚ್.ಎಂ.ಮಧುಸೂದನ್, ಪುರಸಭೆ ಸದಸ್ಯ ಬಿ.ಜೈವರ್ಧನ್, ಮುಖಂಡರಾದ ಗಣಿಪ್ರಸಾದ್, ಗಣಪತಿ, ಪುಂಡರೀಕಾಕ್ಷ, ಮಂಜುನಾಥ್, ಎಂ.ಕೃಷ್ಣಪ್ಪ, ಲಕ್ಷ್ಮೀನಾರಾಯಣ, ವರದ, ಶಿವರಾಜಿರಾವ್, ಕೆ.ಜಿ.ವಾಸು, ಗೀತಾಧರ್ಮಪ್ಪ ಮತ್ತಿತರರು ಪಾಲ್ಗೊಂಡಿದ್ದರು.



ಪಹಲ್ಗಾಮ್ ಹತ್ಯೆ ಖಂಡಿಸಿ ಎಸ್‌ಡಿಪಿಐ ಕ್ಯಾಂಡಲ್ ಮಾರ್ಚ್ ಪ್ರತಿಭಟನೆ ನಡೆಸಿತು.

ಕುಶಾಲನಗರ,ಏ.23– ಜಮ್ಮು ಕಾಶ್ಮೀರದ ಪಹಲ್ಗಾಮ್ ನಲ್ಲಿ ಪ್ರವಾಸಿಗರನ್ನು ಹತ್ಯೆ ಮಾಡಿದ ಉಗ್ರರ ಕೃತ್ಯ ಖಂಡಿಸಿ ಬುಧವಾರ ಎಸ್‌ಡಿಪಿಐ ಕ್ಯಾಂಡಲ್ ಮಾರ್ಚ್ ಪ್ರತಿಭಟನೆ ನಡೆಸಿತು.

ಎಸ್‌ಡಿಪಿಐ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಉಸ್ಮಾನ್ ಸುಂಟಿಕೊಪ್ಪ ಮಾತನಾಡಿ, ರಾಷ್ಟ್ರ ಭದ್ರತೆಗೆ ಧಕ್ಕೆ ತರುವ ಇಂತಹ ಖಂಡನೆಯನ್ನು ಜಾತಿ, ಮತ, ಧರ್ಮ, ಪಂಥ ನೋಡದೆ ಖಂಡಿಸಬೇಕು. ಕೃತ್ಯ ನಡೆಸಿದವರನ್ನು ಪತ್ತೆ ಹಚ್ಚಿ ಗಲ್ಲಿಗೇರಿಸಬೇಕು. ಇಂತಹ ಸೂಕ್ಷ್ಮ ಪ್ರದೇಶದಲ್ಲಿ ಯಾವುದೇ ಭದ್ರತಾ ವ್ಯವಸ್ಥೆ ಕಲ್ಪಿಸದೆ ಇರುವುದು ದುರದೃಷ್ಟಕರ. ಭದ್ರತಾ ವ್ಯವಸ್ಥೆ ತೀವ್ರಗೊಳಿಸಬೇಕೆಂದು ಆಗ್ರಹಿಸಿದರು.

ನಗರ ಅಧ್ಯಕ್ಷ ಜಾಕ್ರೀಯಾ, ಕ್ಷೇತ್ರದ ಅಧ್ಯಕ್ಷ ಬಾಷಾ, ಜಲೀಲ್, ಖಲೀಲ್, ಅನಿಷ್, ಸತ್ತಾರ್ ಪಾಲ್ಗೊಂಡಿದ್ದರು. ಇದೇ ಸಂದರ್ಭ ಮೃತರ ಆತ್ಮಕ್ಕೆ ಶಾಂತಿ ಕೋರಿ ಮೌನಾಚರಣೆ ಮಾಡಲಾಯಿತು.

ಮಡಿಕೇರಿ: ಕಾಶ್ಮೀರದ ಪುಲ್ವಾಮಾ ಪ್ರವಾಸಿ ತಾಣ ಬಳಿ ನಡೆದ ಪಾಕಿಸ್ತಾನ ಪ್ರೇರಿತ ಭಯೋತ್ಪಾದಕ ದಾಳಿಯನ್ನು ಖಂಡಿಸಿ ಹಿಂದೂ ಜಾಗರಣ ವೇದಿಕೆ ಸಂಘಟನೆ ಪ್ರತಿಭಟನೆ ನಡೆಸಿದರು.

ನಗರದ ಜನರಲ್ ತಿಮ್ಮಯ್ಯ ವೃತ್ತದಲ್ಲಿ ಪಂಜಿನ ಮೆರವಣಿಗೆ ಸಹಿತ ಮಾನವ ಸರಪಳಿ ರಚಿಸಿ ಪ್ರತಿಭಟನೆ ನಡೆಸಿದರು.

ವಿವಿಧ ಹಿಂದೂ ಪರ ಸಂಘಟನೆಗಳು ಬೆಂಬಲ ಸೂಚಿಸಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದವು. ಪಾಕಿಸ್ತಾನದ ವಿರುದ್ಧ ಧಿಕ್ಕಾರ ಘೋಷಣೆ



ಪುಲ್ವಾಮ್ ಘಟನೆ ವಿರೋಧಿಸಿ ಹಿಂದೂ ಜಾಗರಣ ವೇದಿಕೆ ಪ್ರತಿಭಟನೆ.

ಮೊಳಗಿಸಿದರಲ್ಲದೇ, ಭಯೋತ್ಪಾದಕರು, ಅವರ ಬೆಂಬಲಿಗರು, ಮತ್ತು ಕೆಲವು ಸಂಘಟನೆಗಳ ವಿರುದ್ಧ ಕೇಂದ್ರ ಸರಕಾರ ಕಠಿಣ ಕ್ರಮ ಜರುಗಿಸಬೇಕೆಂದು ಆಗ್ರಹಿಸಿದರು.

ಹಾಕಿ ಪಂದ್ಯಾವಳಿ ವಿಶ್ವ ದಾಖಲೆ ಉಳಿಸಿಕೊಳ್ಳಲಿ: ಎಂ.ಸಿ.ನಾಣಯ್ಯ

ಹಾಕಿ ಇತಿಹಾಸ ಬಿಂಬಿಸುವ ಇಂಗ್ಲೀಷ್ ಪುಸ್ತಕ ಅನಾವರಣ



ಮಡಿಕೇರಿ,ಏ.23–ಕೊಡವ ಹಾಕಿ ಪಂದ್ಯಾಟದ 25 ವರ್ಷಗಳ ಇತಿಹಾಸದ ಮಾಹಿತಿಯಿರುವ ಇಂಗ್ಲೀಷ್ ಪುಸ್ತಕವನ್ನು ಹಿರಿಯ ರಾಜಕಾರಣಿ ಎಂ.ಸಿ. ನಾಣಯ್ಯ ಲೋಕಾರ್ಪಣೆಗೊಳಿಸಿದರು.

ನಗರದ ರೆಡ್ ಬ್ರಿಕ್ಸ್‌ನ ಸತ್ಕಾರ ಸಭಾಂಗಣದಲ್ಲಿ ಪತ್ರಕರ್ತ ಕೊಟ್ಟಿಯಂಡ ಜೀವನ್ ಚಿಣ್ಣಪ್ಪ ಬರೆದು ಪತ್ರಕರ್ತ ಅನಿಲ್ ಹೆಚ್.ಟಿ. ಪ್ರಕಾಶಿಸಿರುವ 'ಸ್ಟಿಕ್ ವರ್ಕ್ ಮ್ಯಾಜಿಕ್–ಸಾಗಾ ಆಫ್ ಕೊಡವ ಫ್ಯಾಮಿಲಿ ಹಾಕಿ' ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಅವರು, ಕೊಡವ ಕೌಟುಂಬಿಕ ಹಾಕಿ ಹಬ್ಬವು ಕ್ರೀಡೆಯ ಜತೆಗೇ ತನ್ನ ವೈವಿಧ್ಯತೆಯ ಕಾರ್ಯಕ್ರಮಗಳ ಮೂಲಕ ಜಗತ್ತಿನ ಗಮನವನ್ನೇ ಸೆಳೆದಿದೆ. ಇಂತಹ ಕ್ರೀಡಾ ಹಬವನ್ನು ಮುಂದಿನ ವರ್ಷಗಳಲ್ಲಿ ಮತ್ತಷ್ಟು ವೈಭವದಿಂದ ಆಯೋಜಿಸುವ ನಿಟ್ಟಿನಲ್ಲಿ ಸರ್ವ ಸಮುದಾಯದವರೂ ಕೈಜೋಡಿಸಬೇಕೆಂದು ಕರೆ ನೀಡಿದರು.

5 ಸಾವಿರ ಹಾಕಿ ಆಟಗಾರರು ಪಂದ್ಯಾಟದಲ್ಲಿ ಪಾಲ್ಗೊಳ್ಳುವುದೇ ಚರಿತ್ರಾರ್ಹ ವಿಚಾರ. ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್, ಗಿನ್ನೀಸ್ ರೆಕಾರ್ಡ್‌ಗೂ ಕೂಡ ಸೇರಿರುವ ಹಾಕಿ ಪಂದ್ಯಾವಳಿ ಮುಂದಿನ ದಿನಗಳಲ್ಲಿ ವಿಶ್ವದಾಖಲೆಯನ್ನು ನಿರಂತರ ಉಳಿಸಿಕೊಳ್ಳುವಂತಾಗಲಿ ಎಂದು ನಾಣಯ್ಯ ಹಾರೈಸಿದರು.

ಕೊಡವ ಹಾಕಿ ಅಕಾಡೆಮಿಯ ಅಧ್ಯಕ್ಷ ಪಾಂಡಂಡ ಬೋಪಣ್ಣ ಮಾತನಾಡಿ, ತನ್ನ ತಂದೆ ಪಾಂಡಂಡ ಕುಟ್ಟಪ್ಪ ಅವರು ಕೊಡವ ಕುಟುಂಬಗಳ ನಡುವೇ ಹಾಕಿ ಪಂದ್ಯಾವಳಿ ಪ್ರಾರಂಭ ಮಾಡಿದಾಗ ಅನೇಕರು ವೃತ್ತಿಪರರಲ್ಲದವರನ್ನು ಅಪಹಾಸ್ಯ ಮಾಡಿದ್ದರೂ ಛಲಬಿಡದೆ ಹಾಕಿ ಪಂದ್ಯಾವಳಿಯನ್ನು ಯಶಸ್ವಿನ ಹಾದಿಯಲ್ಲಿ ಸಾಗಿಸಿದ್ದರು. ಅವರ ಮಾರ್ಗದರ್ಶನದಂತೆ ಕೊಡವ ಹಾಕಿ ಅಕಾಡೆಮಿಯ ಅಧ್ಯಕ್ಷನಾಗಿ ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿಯನ್ನು ಮುನ್ನಡೆಸುತ್ತಿದ್ದೇನೆ. ಪ್ರತೀ ವರ್ಷವೂ 20–30 ಹೊಸ ತಂಡಗಳು ಪಂದ್ಯಾವಳಿಯಲ್ಲಿ ಪಾಲ್ಗೊಳ್ಳುತಿದ್ದು, ಮುಂದಿನ 8 ವರ್ಷಗಳವರೆಗೂ ಕೊಡವ ಹಾಕಿ ಪಂದ್ಯಾವಳಿ ಆಯೋಜನೆಗೆ ಕುಟುಂಬಸ್ಥರು ಸಿದ್ಧರಾಗಿದ್ದಾರೆ ಎಂದೂ ಹೇಳಿದರು.

ಕೃತಿಯ ಲೇಖಕ, ಪತ್ರಕರ್ತ ಕೊಟ್ಟಿಯಂಡ ಜೀವನ್ ಚಿಣ್ಣಪ್ಪ ಮಾತನಾಡಿ, ಅನೇಕ ಕುಟುಂಬಗಳಲ್ಲಿ ಸಮರ್ಪಕ ಮಾಹಿತಿ, ದಾಖಲೆಯ ಕೊರತೆಯಿದೆ. ಮುಂದಿನ ದಿನಗಳಲ್ಲಿ ಇಂತಹ ಕೊರತೆಯಾಗಂತೆ ಕೊಡವ ಹಾಕಿ ಅಕಾಡೆಮಿಯೇ ಪರಿಪೂರ್ಣ ರೀತಿಯಲ್ಲಿ ಪ್ರತೀ ವರ್ಷದ ಹಾಕಿ ಪಂದ್ಯಾವಳಿಯ ದಾಖಲೆಯನ್ನು ಸಂಗ್ರಹಿಸಿ ಇಟ್ಟುಕೊಳ್ಳುವಂತಾಗಬೇಕು. ಜಗತ್ತಿನ ಗಮನವನ್ನೇ ಸೆಳೆದಿರುವ ಕೊಡಗಿನ ಹಾಕಿ ಇತಿಹಾಸವನ್ನು ಬಿಂಬಿಸುವ ಕ್ರೀಡಾ ಸಂಗ್ರಹಾಲಯ ರೂಪುಗೊಳ್ಳುವಂತಾಗಬೇಕು ಎಂದು ಸಲಹೆ ನೀಡಿದರು.

ಮುದ್ದಂಡ ಹಾಕಿ ಪಂದ್ಯಾವಳಿ ಆಯೋಜಕ ಸಮಿತಿ ಅಧ್ಯಕ್ಷ ರಶಿನ್ ಸುಬ್ಬಯ್ಯ, ಸ್ಟಿಕ್ ವರ್ಕ್ ಮ್ಯಾಜಿಕ್ ಕೃತಿಯ ಪ್ರಕಾಶಕ ಪತ್ರಕರ್ತ ಅನಿಲ್ ಹೆಚ್.ಟಿ. ಹೆಸರಾಂತ ಹಾಕಿ ಕ್ರೀಡಾ ವೀಕ್ಷಕ ವಿವರಣೆಗಾರ ಮಾಳೇಟಿರ ಶ್ರೀನಿವಾಸ್, ಕೊಡವ ಜನಾಂಗದ ಮೊದಲ ಅಂತಾರಾಷ್ಟ್ರೀಯ ಹಾಕಿ ಆಟಗಾರ ಮಾಳೆಯಂಡ ಡಿ.ಮುತ್ತಪ್ಪ ವೇದಿಕೆಯಲ್ಲಿದ್ದು ಕೃತಿಗೆ ಶುಭ ಹಾರೈಸಿದರು.

ಚಿನ್ನಾಭರಣ ಕಳವು ಮಾಡಿದ್ದ ಆರೋಪಿ ಬಂಧನ



ಮಡಿಕೇರಿ/ನಾಪೋಕ್ಲು,ಏ.23–ಮನೆಯ ಹಿಂಬಾಗಿಲು ಮುರಿದು ಚಿನ್ನಾಭರಣ ಕಳವು ಮಾಡಿ ಜಿಲ್ಲೆಯಿಂದ ಪರಾರಿಯಾಗಿದ್ದ ಆರೋಪಿಯನ್ನು ನಾಪೋಕ್ಲು ಪೊಲೀಸರು ಚಿಕ್ಕಮಗಳೂರಿನಲ್ಲಿ ಬಂಧಿಸಿದ್ದಾರೆ.

ಅಸ್ಸಾಂ ಮೂಲದ ಸುರಜ್ ಮೀಯಾ (32) ಎಂಬಾತನೇ ಬಂಧಿತ ಆರೋಪಿಯಾಗಿದ್ದು, ಆತನ ಬಳಿಯಿದ್ದ 18 ಗ್ರಾಂ ಚಿನ್ನಾಭರಣವನ್ನು ವಶಕ್ಕೆ ಪಡೆಯಲಾಗಿದೆ.

ಘಟನೆ ಹಿನ್ನೆಲೆ : ನಾಪೋಕ್ಲು ನಿವಾಸಿ ಅಮ್ಮಂಡ ಬಿ.ಅಶೋಕ್ ಎಂಬವರು ತಮ್ಮ ಪುತ್ರನ ನಿಶ್ಚಿತಾರ್ಥ ಕಾರ್ಯಕ್ಕೆ ಏ.18ರಂದು ಗೋಣಿಕೊಪ್ಪಕ್ಕೆ ತೆರಳಿದ್ದರು. ಸಂಜೆ ಮನೆಗೆ ಬಂದ ಸಂದರ್ಭ ಹಿಂಬಾಗಿಲು ಮುರಿದಿರುವುದು ಕಂಡು ಬಂದಿದೆ. ಚಿನ್ನಾಭರಣ ಇಟ್ಟಿದ್ದ ಗೋದ್ರೇಜ್ ಅನ್ನು ಪರಿಶೀಲಿಸಿದಾಗ 18 ಗ್ರಾಂ ತೂಕದ ಚಿನ್ನಾಭರಣ ಕಳುವು ಮಾಡಿರುವುದು ಕಂಡು ಬಂದಿದ್ದು, ಏ.19ರಂದು ಅಮ್ಮಂಡ ಬಿ.ಅಶೋಕ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಆರೋಪಿ ಚಿಕ್ಕಮಗಳೂರು ವ್ಯಾಪ್ತಿಯಲ್ಲಿರುವುದನ್ನು ಪತ್ತೆ ಹಚ್ಚಿ, ಪೊಲೀಸರು ಬಾಳೆಹೊನ್ನೂರು ಗ್ರಾಮದಲ್ಲಿದ್ದ ಆರೋಪಿಯನ್ನು ಬಂಧಿಸಿ ಕಳವು ಮಾಡಿದ್ದ 18 ಗ್ರಾಂ ಚಿನ್ನಾಭರಣವನ್ನು ವಶಕ್ಕೆ ಪಡೆದು, ನ್ಯಾಯಾಲಯಕ್ಕೆ ಒಪ್ಪಿಸಿದ್ದಾರೆ.

ಮಡಿಕೇರಿ ಡಿವೈಎಸ್‌ಪಿ ಸೂರಜ್ ಪಿ.ಎ, ಗ್ರಾಮಾಂತರ ಠಾಣಾ ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ, ನಾಪೋಕ್ಲು ಠಾಣಾಧಿಕಾರಿ ಮಂಜುನಾಥ್ ಮತ್ತು ಸಿಬ್ಬಂದಿಗಳು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಕತ್ತು ಕೊಯ್ದು ಕೇರಳ ವ್ಯಕ್ತಿಯ ಕೊಲೆ

ಗೋಣಿಕೊಪ್ಪ,ಏ.23–ಕೇರಳ ಮೂಲದ ವ್ಯಕ್ತಿಯ ಕತ್ತು ಕೊಯ್ದು ಕೊಲೆ ಮಾಡಿರುವ ಘಟನೆ ವಿರಾಜಪೇಟೆ ತಾಲ್ಲೂಕಿನ ಬಿ. ಶೆಟ್ಟಿಗೇರಿ ವ್ಯಾಪ್ತಿಯ ಕೊಂಗಾಣ ಎಂಬಲ್ಲಿ ನಡೆದಿದೆ.

ಕಣ್ಣನೂರಿನ ಭಾಸ್ಕರನ್ ಕೋಲಿ ಅವರ ಪುತ್ರ ಪ್ರದೀಪ್ ಕೋಲಿ (49) ಕೊಲೆಯಾದ ದುರ್ದೈವಿ. ಕೊಂಗಾಣದಲ್ಲಿರುವ ಅವರ ಕಾಫಿ ತೋಟದಲ್ಲಿ ಘಟನೆ ನಡೆದಿದೆ. ಕೊಲೆಗೆ ನಿಖರ ಕಾರಣ ಇನ್ನೂ ತಿಳಿದು ಬಂದಿಲ್ಲ. ಗೋಣಿಕೊಪ್ಪ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಗದ್ದೆಹಳ್ಳ ಬಸ್ ತಂಗುದಾಣದಲ್ಲಿದ್ದ ಭಾಷ ಸಾವು

ಸುಂಟಿಕೊಪ್ಪ: ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗದ್ದೆಹಳ್ಳ ಬಸ್ ತಂಗು ದಾಣದಲ್ಲಿ ಭಾಷ(65) ಎಂಬ ಹೆಸರಿನ ಅಪರಿಚಿತ ವ್ಯಕ್ತಿಯೊಬ್ಬ ಮೃತಪಟ್ಟಿದ್ದು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೆಲ ದಿನಗಳಿಂದ ಗದ್ದೆಹಳ್ಳದಲ್ಲಿ ಆಶ್ರಯ ಪಡೆದಿದ್ದು, ಸಂಜೆ ಮೃತಪಟ್ಟಿದ್ದಾರೆ. ಈ ವ್ಯಕ್ತಿಯು ತನ್ನ ಹೆಸರನ್ನು ಭಾಷ ಎಂದು ಹೇಳಿಕೊಂಡಿದ್ದನೆನ್ನಲಾಗಿದೆ. ಮೃತ ದೇಹವನ್ನು ಜಿಲ್ಲಾಸ್ಪತ್ರೆಯ ಶವಾಗಾರದಲ್ಲಿ ಇರಿಸಲಾಗಿದ್ದು ಮೃತರ ಕುಟುಂಬಸ್ಥರು ಅಥವಾ ಪರಿಚಯಸ್ಥರು ಇದ್ದಲ್ಲಿ ಸುಂಟಿಕೊಪ್ಪ ಪೊಲೀಸ್ ಠಾಣೆಗೆ ಮಾಹಿತಿ ನೀಡುವಂತೆ ಠಾಣಾಧಿಕಾರಿ ಜಗದೀಶ್ ತಿಳಿಸಿದ್ದಾರೆ.

ಸರ್ಕಾರದ ಸೌಲಭ್ಯ ಉಳಿಸಿ ಬೆಳೆಸುವ ಕೆಲಸ ಆಗಬೇಕು: ಅಪ್ಪಚ್ಚು ರಂಜನ್



ಮಡಿಕೇರಿ,ಏ.23–ಸರ್ಕಾರದಿಂದ ಒದಗಿ ಬಂದ ಸೌಲಭ್ಯವನ್ನು ಉಳಿಸಿ ಬೆಳೆಸುವ ಕೆಲಸ ಆಗಬೇಕೆ ಹೊರತು ಅದನ್ನು ಯಾವುದೇ ಕಾರಣಕ್ಕೂ ಕೈಬಿಡುವ ಕೆಲಸ ಆಗಬಾರದು ಎಂದು ಮಾಜಿ ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ಹೇಳಿದರು.

ಪ್ರೆಸ್‌ಕ್ಲಬ್ ನಗರದ ಪತ್ರಿಕಾ ಭವನದ ಸಭಾಂಗಣದಲ್ಲಿ ಏರ್ಪಡಿಸಿದ್ದ ಕೊಡಗು ವಿಶ್ವವಿದ್ಯಾಲಯದ ಸಾಧಕ–ಬಾಧಕ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ರಾಜ್ಯದಲ್ಲಿ ಮುಚ್ಚುವ ಚಿಂತನೆ ನಡೆಸಿರುವ 9 ವಿಶ್ವವಿದ್ಯಾಲಯಗಳಲ್ಲಿ ಒಂದಾಗಿರುವ ಕೊಡಗು ವಿಶ್ವವಿದ್ಯಾಲಯ ನೂರಾರು ಎಕರೆ ಪ್ರದೇಶದಲ್ಲಿ ಸ್ಥಾಪನೆಯಾಗಿದ್ದು, ವಿದ್ಯಾರ್ಥಿಗಳಿಗೆ ಅನುಕೂಲವಾಗಿರುವ ಸುಸಜ್ಜಿತ ವ್ಯವಸ್ಥೆ ಹೊಂದಿರುವ ವಿವಿಯನ್ನು ಮುಚ್ಚಲು ಹೊರಟಿರುವುದು ಸರಿಯಲ್ಲ. ಎಂದರು.

ಶಿಕ್ಷಣ ತಜ್ಞ ಬಾಚರಣಿಯಂಡ ಪಿ.ಅಪ್ಪಣ್ಣ ಮಾತನಾಡಿ ಕೊಡಗಿನ ಪ್ರಾದೇಶಿಕ, ಭೌಗೋಳಿಕ, ಸಂಸ್ಕೃತಿ, ಆಚಾರ, ವಿಚಾರಗಳು ತಳ ಮಟ್ಟದಿಂದಲೇ ಸಂಶೋಧನೆಯಾಗಬೇಕು. ಆ ನಿಟ್ಟಿನಲ್ಲಿ ಕೊಡಗು ವಿಶ್ವವಿದ್ಯಾಲಯ ಉಳಿಯಬೇಕು ಹಿಂದೆ ಧಾರ್ಮಿಕ ವಿಚಾರಕ್ಕೆ, ಅಕ್ಷರಭ್ಯಾಸಕ್ಕೆ ಪ್ರಮುಖ್ಯತೆ ಪಡೆದು ಕೊಂಡಿತ್ತು ಆದರೆ ಇಂದು ಸಂಶೋಧನೆಯಲ್ಲಿ ವಿಶ್ವವಿದ್ಯಾಲಯಗಳು ಮುಂಚೂಣಿಯಲ್ಲಿದೆ ಎಂದರು.

ಗೊಂದಲದ ಹೇಳಿಕೆ ಬೇಡ : ಮಾಜಿ ಶಾಸಕ ಕೆ.ಜಿ. ಬೋಪಯ್ಯ ಮಾತನಾಡಿ, ಕೊಡಗು ವಿಶ್ವವಿದ್ಯಾಲಯವನ್ನು ಮಂಗಳೂರು ವಿಶ್ವವಿದ್ಯಾಲಯಕ್ಕೆ ವಿಲೀನಗೊಳಿಸುವ ಮೊದಲು ಆ ವಿವಿಯ ಪರಿಸ್ಥಿತಿ ಏನು ಎಂಬುದನ್ನು ಅವಲೋಕ ಮಾಡಬೇಕಾಗಿದೆ ಕೊಡಗು ವಿಶ್ವವಿದ್ಯಾಲಯವನ್ನು ಮುಂದುವರೆಸುವ ಪ್ರಯತ್ನ ನಡೆಯಬೇಕೆ ಹೊರತು, ವಿವಿಗಳಲ್ಲಿ ದಾಖಲಾತಿ ಆರಂಭವಾಗುತ್ತಿರುವ ಸಂದರ್ಭದಲ್ಲಿ ಗೊಂದಲದ ಹೇಳಿಕೆಗಳನ್ನು ನೀಡುವುದು ಸರಿಯಲ್ಲ ಎಂದು ಅಭಿಪ್ರಾಯಿಸಿದರು

ವಿಶ್ವವಿದ್ಯಾಲಯದ ಹಿತರಕ್ಷಣಾ ಸಮಿತಿ ಅಧ್ಯಕ್ಷ ಕೃಷ್ಣೆಗೌಡ, ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ತೀತಿರ ಧರ್ಮಜಾ ಉತ್ತಪ್ಪ, ಸಮಾಜ ಸೇವಕ ನಾಪಂಡ ಮುತ್ತಪ್ಪ ಮಾತನಾಡಿ, ಕೊಡಗು ವಿಶ್ವವಿದ್ಯಾನಿಲಯ ಉಳಿಯಬೇಕಾದರೆ ನಾಗರಿಕರು ಪಕ್ಷಾತೀತವಾಗಿ ಒಗ್ಗೂಡಬೇಕು. ಇದು ಕೊಡಗಿನ ಸ್ವಾಭಿಮಾನದ ಪ್ರಶ್ನೆ, ವಿಶ್ವವಿದ್ಯಾನಿಲಯ ಕೊಡಗು ಹೆಸರಿನಲ್ಲಿಯೇ ಇರಬೇಕು, ಆಗ ವಿವಿಯನ್ನು ವ್ಯಾಪಕವಾಗಿ ವಿಸ್ತರಿಸುವ ಕೆಲಸ ಮಾಡಬಹುದೆಂದರು.

ಕಾಂಗ್ರೆಸ್ ಮುಖಂಡ ವಿ.ಪಿ.ಶಶಿಧರ್ ಕೊಡಗು ಪ್ರೆಸ್‌ಕ್ಲಬ್ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ ಮಾತನಾಡಿ, ಇತರ ಜಿಲ್ಲೆಗಳಿಗೆ ತೆರಳಿ ಶಿಕ್ಷಣ ಪಡೆಯಲು ಕಷ್ಟ ಪಡುವ ವಿದ್ಯಾರ್ಥಿಗಳಿಗೆ ನಮ್ಮದೇ ಜಿಲ್ಲೆಯಲ್ಲಿ ಉತ್ತಮ ಉನ್ನತ ಶಿಕ್ಷಣ ಪಡೆಯಲು ಕೊಡಗು ವಿಶ್ವವಿದ್ಯಾಲಯ ಸಹಕಾರಿಯಾಗಿದೆ ಎಂದರು.

ಮಹದೇಶ್ವರಬೆಟ್ಟದಲ್ಲಿ ಅಭಿವೃದ್ಧಿ ಪ್ರಾಧಿಕಾರದ ಕಾಮಗಾರಿಗಳ ಉದ್ಘಾಟನೆ, ಶಂಕುಸ್ಥಾಪನೆ

ಚಾಮರಾಜನಗರ: ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದಲ್ಲಿ ಪೂರ್ಣಗೊಂಡಿರುವ ಕಾಮಗಾರಿಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆಯ ಕಾರ್ಯಕ್ರಮವು ಏ.24ರ ಬೆಳಿಗ್ಗೆ 11 ಗಂಟೆಗೆ ಮಹದೇಶ್ವರಬೆಟ್ಟದ ವಜ್ರಮಲೆ ಭವನದ ಎದುರು ಆವರಣದಲ್ಲಿ ನಡೆಯಲಿದೆ.



ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ದಿವ್ಯ ಸಾನಿಧ್ಯ ವಹಿಸುವರು. ಮಹದೇಶ್ವರಬೆಟ್ಟದ ಸಾಲೂರು ಬೃಹನ್ಮಠದ ಹಿರಿಯ ಶ್ರೀಗಳಾದ ಪಟ್ಟದ ಗುರುಸ್ವಾಮಿಗಳು, ಸಾಲೂರು ಬೃಹನ್ಮಠಾಧ್ಯಕ್ಷರು ಹಾಗೂ ಪೀಠಾಧಿಪತಿಗಳಾದ ಶಾಂತಮಲ್ಲಿಕಾರ್ಜುನ ಸ್ವಾಮಿಗಳು ದಿವ್ಯ ಸಮ್ಮುಖ ವಹಿಸುವರು.

ಮುಖ್ಯಮಂತ್ರಿ ಪ್ರಾಧಿಕಾರದ ಅಧ್ಯಕ್ಷ ಸಿದ್ದರಾಮಯ್ಯ ಕಾರ್ಯಕ್ರಮ ಉದ್ಘಾಟನೆ ನೆರವೇರಿಸುವರು. ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಅಭಿವೃದ್ಧಿ ಪ್ರಾಧಿಕಾರ ಉಪಾಧ್ಯಕ್ಷರಾದ ಕೆ. ವೆಂಕಟೇಶ್, ಸಚಿವ ರಾಮಲಿಂಗಾ ರೆಡ್ಡಿ ಉಪಸ್ಥಿತಿ ವಹಿಸುವರು. ಸಂಪುಟದ ಸಚಿವರ ದಂಡೇ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳುವುದು.

ಶಾಸಕರಾದ ಎಂ.ಆರ್. ಮಂಜುನಾಥ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಸಂಸದ ಸುನೀಲ್ ಬೋಸ್, ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಎ.ಆರ್. ಕೃಷ್ಣಮೂರ್ತಿ, ಹೆಚ್.ಎಂ. ಗಣೇಶ್‌ಪ್ರಸಾದ್, ಡಾ.ಡಿ. ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು ಜಿ.ಮಾದೇಗೌಡ, ಕೆ.ವಿವೇಕಾನಂದ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ. ಪುಷ್ಪ ಅಮರನಾಥ್, ಕಾವೇರಿ ಜಲಾನಯನ ಯೋಜನೆಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪಿ. ಮರಿಸ್ವಾಮಿ, ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘ ಅಧ್ಯಕ್ಷರಾದ ನಂಜುಂಡಸ್ವಾಮಿ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಹೆಚ್.ವಿ. ಚಂದ್ರು, ಮಹದೇಶ್ವರಬೆಟ್ಟ ಗಾಪಂ ಅಧ್ಯಕ್ಷೆ ಅರ್ಚನಾ, ಅಭಿವೃದ್ಧಿ ಪ್ರಾಧಿಕಾರದ ನಾಮನಿರ್ದೇಶಿತ ಸದಸ್ಯರಾದ ಗಂಗನ ತಿಮ್ಮಯ್ಯ, ಭಾಗ್ಯಮ್ಮ, ಬಿ. ಮಹದೇವಪ್ಪ, ಮರಿಸ್ವಾಮಿ, ಆರ್.ಎಸ್. ಕುಮಾರ ವಿಜಯ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು ಎಂದು ಪ್ರಕಟಣೆ ತಿಳಿಸಿದೆ.

ಉದ್ಘಾಟನಾ ವಿವರ : ಶ್ರೀ ಮಹದೇಶ್ವರ ಸ್ವಾಮಿಯವರ ಚರಿತ್ರೆಯನ್ನೊಳಗೊಂಡ ಮ್ಯೂಸಿಯಂ, ವಜ್ರಮಲೆ ಭವನ ವಸತಿ ಗೃಹ (376 ಕೊಠಡಿ), ಸಮಗ್ರ ಒಳ ಚರಂಡಿ ಯೋಜನೆ, ಒಂದು ಮೆಗಾ ವ್ಯಾಟ್ ಸೋಲಾರ್ ಪವರ್‌ಪ್ಲಾಂಟ್, ದೊಡ್ಡಕೆರೆ (ತೆಪ್ಪೋತ್ಸವ ಕಲ್ಯಾಣಿ) ಜೀರ್ಣೋದ್ದಾರ, ವಜ್ರಮಲೆ ಭವನ ವಸತಿ ಗೃಹದ ರಸ್ತೆ ತಡೆಗೋಡೆ, ಶ್ರೀ ಮಲೈ ಮಹದೇಶ್ವರ ಸ್ವಾಮಿ ಪ್ರತಿಮೆಯವರೆಗೆ ಸಿ.ಸಿ.ರಸ್ತೆ ಮತ್ತು ಸಿ.ಸಿ.ಚರಂಡಿ, ಪ್ರಾಧಿಕಾರದ ವತಿಯಿಂದ ನಿರ್ಮಿಸಿದ ಶ್ರೀ ಸಾಲೂರು ಮಠದ ವೇದಾಗಮ ಪಾಠಶಾಲೆ.

ಶಂಕುಸ್ಥಾಪನಾ ವಿವರ : ಸ್ವಾಗತ ಕಮಾನು (ಕೊಳ್ಳೇಗಾಲ ಚೆಕ್‌ಪೋಸ್ಟ್), ಅತ್ಯಾಧುನಿಕ ಸುಸಜ್ಜಿತ ದಾಸೋಹ ಭವನ ಕಟ್ಟಡ, ರಾಜಗೋಪುರದ ಎದುರು ತಂಗುದಾಣ, ಆಲಂಬಾಡಿ ಗ್ರಾಮದಲ್ಲಿರುವ ಶ್ರೀ ರಂಗನಾಥಸ್ವಾಮಿ ದೇವಾಲಯದ ಜೀರ್ಣೋದ್ದಾರ, ಡಾರ್ಮಿಟರಿ ಕಟ್ಟಡ ನಿರ್ಮಾಣ (3 ಮತ್ತು 4ನೇ ಹಂತ), 6 ವಿವಿಧ ಕೂಡು ರಸ್ತೆಗಳ ಅಭಿವೃದ್ಧಿಪಡಿಸುವುದು, ಶ್ರೀ ಸ್ವಾಮಿಯ ಬೃಹತ್ ಪ್ರತಿಮೆಯ ಹೊರ ಆವರಣದ ಸುತ್ತಲೂ ಗೇಬಿಯನ್ ವಾಲ್, ಜೆ.ಎಸ್.ಎಸ್. ಆರ್ಚ್–ಲೋಕೋಪಯೋಗಿ ಇಲಾಖೆ ಕಛೇರಿವರೆಗೆ ಸಿ.ಸಿ ರಸ್ತೆ ಮತ್ತು ಚರಂಡಿ, ಅಂಚೆ ಕಛೇರಿಯಿಂದ ಅಂತರಗಂಗೆ ಮಾರ್ಗ ರಸ್ತೆ ಅಭಿವೃದ್ಧಿ, ಕರ್ನಾಟಕ ಗ್ರಾಮೀಣ ಬ್ಯಾಂಕ್‌ನಿಂದ ಶ್ರೀ ಸಾಲೂರು ಮಠದವರೆಗೆ ರಸ್ತೆ ಮರು ಡಾಂಬರೀಕರಣ, ದಾಸೋಹ ಭವನದ ಎದುರು ಮತ್ತು ಬಸ್ ನಿಲ್ದಾಣದಲ್ಲಿ ಪಾವತಿಸಿ ಉಪಯೋಗಿಸುವ ಶೌಚಾಲಯ ಮತ್ತು ಸ್ನಾನಗೃಹ, ಪೌರಕಾರ್ಮಿಕರಿಗೆ ವಸತಿ ಗೃಹ ನಿರ್ಮಾಣ ಕಾಮಗಾರಿಗಳ ಶಂಕುಸ್ಥಾಪನೆ ನೆರವೇರಲಿದೆ ಎಂದು ಪ್ರಕಟಣೆ ತಿಳಿಸಿದೆ.

ಉಗ್ರರ ದಾಳಿ ಖಂಡಿಸಿ ಯುವ ಕಾಂಗ್ರೆಸ್ ಪ್ರತಿಭಟನೆ



ಉಗ್ರರ ದಾಳಿಯನ್ನು ಖಂಡಿಸಿ ಜಿಲ್ಲಾ ಯುವ ಕಾಂಗ್ರೆಸ್ ಚಾಮರಾಜನಗರದಲ್ಲಿ ಪ್ರತಿಭಟನೆ ನಡೆಸಿತು.

ಚಾಮರಾಜನಗರ,ಏ.23–ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ನಡೆದ ಉಗ್ರರ ದಾಳಿಯನ್ನು ಖಂಡಿಸಿ ಜಿಲ್ಲಾ ಯುವ ಕಾಂಗ್ರೆಸ್ ನಗರದಲ್ಲಿ ಪ್ರತಿಭಟನೆ ನಡೆಸಿತು.

ನಗರದ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಸಿ.ಯೋಗೇಂದ್ರ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾನಿರತರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಕೆಲಹೊತ್ತು ರಸ್ತೆತಡೆ ನಡೆಸಿ, ಉಗ್ರರ ವಿರುದ್ಧ, ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಯೋಗೇಂದ್ರ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ನಡೆದ ಅತ್ಯಂತ ಮಾರಕ ದಾಳಿಯಾಗಿದ್ದು, ಮೋದಿ ಸರ್ಕಾರ ಮತ್ತು ಗುಪ್ತಚರ ಸಂಸ್ಥೆಗಳ ವೈಫಲ್ಯವನ್ನು ಎತ್ತಿ ತೋರಿಸುತ್ತದೆ ಎಂದರು.

ಪ್ರತಿಭಟನೆಯಲ್ಲಿ ಜಿಲ್ಲಾ ಯುವ ಕಾಂಗ್ರೆಸ್ ಉಪಾಧ್ಯಕ್ಷ ಸೈಯದ್ ಮುಸಾಯಿಬ್, ಇಸ್ಮಾಯಿಲ್, ಚಂದನ್, ಎನ್‌ಎಸ್‌ಯುಐ ಜಿಲ್ಲಾಧ್ಯಕ್ಷ ಮೋಹನ್ ನಗು, ಮುಖಂಡ ನಾಗೇಂದ್ರ ನಾಯಕ, ಸೈಯದ್ ತೌಸೀಫ್, ಮುತ್ತುರಾಮ್, ಶಶಾಂಕ್, ಪ್ರದೀಪ್, ದರ್ಶನ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಪ್ಪು, ಆನಂತ್, ರಾಹುಲ್, ಕಾರ್ತಿಕ್, ನವೀನ್ ಇತರರು ಭಾಗವಹಿಸಿದ್ದರು.

ಎಆರ್‌ಕೆಗೆ ಸಚಿವ ಸ್ಥಾನ ನೀಡಲು ತಾಪಂ ಮಾಜಿ ಅಧ್ಯಕ್ಷರ ಆಗ್ರಹ



ಚಾಮರಾಜನಗರ, ಏ.23– ಶಾಸಕ ಎ.ಆರ್. ಕೃಷ್ಣಮೂರ್ತಿಗೆ ಸಚಿವ ಸ್ಥಾನವನ್ನು ನೀಡುವ ಮೂಲಕ ಸ್ಥಳೀಯ ದಲಿತ ಮುಖಂಡರಿಗೆ ಸಂಪುಟದಲ್ಲಿ ಅವಕಾಶ ಮಾಡಿಕೊಡಬೇಕೆಂದು ತಾಪಂ ಮಾಜಿ ಅಧ್ಯಕ್ಷ ಆರ್.ಮಹದೇವ್ ಒತ್ತಾಯಿಸಿದ್ದಾರೆ.

ಚಾಮರಾಜನಗರ ಜಿಲ್ಲೆಯಾಗಿ 28 ವರ್ಷಗಳು ಕಳೆದಿದ್ದು ಜಿಲ್ಲೆಯ ದಲಿತ ಮುಖಂಡರೊಬ್ಬರಿಗೆ ಸಚಿವ ಸ್ಥಾನಮಾನ ದೊರೆತಿಲ್ಲ. ಬಹಳ ವರ್ಷಗಳಿಂದ ಕಾಂಗ್ರೆಸ್‌ನ್ನು ಬೆಂಬಲಿಸಿಕೊಂಡು ಬಂದಿರುವ ದಲಿತ ಸಮುದಾಯಕ್ಕೆ ಕಾಂಗ್ರೆಸ್ಸಿಗರೊಬ್ಬರನ್ನು ಸಚಿವರನ್ನಾಗಿ ಮಾಡಲು ಸಾಧ್ಯವಾಗಿಲ್ಲ. ಹಾಲಿ ಶಾಸಕ ಕೃಷ್ಣಮೂರ್ತಿ ಪ್ರಭಾವಿ ದಲಿತ ಮುಖಂಡರಾಗಿ ಜಿಲ್ಲೆಯ ಸಮಗ್ರ ಅಭಿವೃದ್ಧಿಗಾಗಿ ದುಡಿಯುತ್ತಿದ್ದಾರೆ. ಬಿ.ರಾಚಯ್ಯ ಪತ್ನಿ ಗೌರಮ್ಮ ತಮ್ಮ ಮಗನನ್ನು ಸಂಪುಟದಲ್ಲಿ ಸಚಿವರನ್ನಾಗಿ ನೋಡಬೇಕೆಂಬ ಹಂಬಲವನ್ನು ಸಿದ್ದರಾಮಯ್ಯರಲ್ಲಿ ವ್ಯಕ್ತಪಡಿಸಿದ್ದರು. ಈ ದೃಷ್ಟಿಯಲ್ಲಿ ಜಿಲ್ಲೆಯ ಸ್ಥಳಿಯ ದಲಿತ ನಾಯಕರಾಗಿರುವ ಎ.ಆರ್. ಕೃಷ್ಣಮೂರ್ತಿ ಅವರಿಗೆ ಒಂದು ಅವಕಾಶ ನೀಡಬೇಕು ಎಂದು ಒತ್ತಾಯಿಸಿದರು.

ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ಅಧ್ಯಕ್ಷ ಹೊಂಗನೂರು ಚಂದ್ರು, ಜಿ.ಪಂ. ಮಾಜಿ ಉಪಾಧ್ಯಕ್ಷರಾದ ಯೋಗೇಶ್, ಅಯ್ಯನಪುರ ಶಿವಕುಮಾರ್, ತಾಲೂಕು ಗ್ಯಾರಂಟಿ ಅಧ್ಯಕ್ಷ ಪ್ರಭುಪ್ರಸಾದ್, ಬಿಳಿಗಿರಿರಂಗನಬೆಟ್ಟದ ಪ್ರಾಧಿಕಾರದ ಅಧ್ಯಕ್ಷ ಶ್ರೀನಿವಾಸ್, ಚಾಮುಲ್ ನಿರ್ದೇಶಕ ಕಮರವಾಡಿ ರೇವಣ್ಣ, ಸೊತ್ತನಹುಂಡಿ ಸೋಮಣ್ಣ, ಮಹದೇವಪ್ರಸಾದ್ ಘಸಿ ಪತ್ರಿಕಾ ಗೋಷ್ಠಿಯಲ್ಲಿದ್ದರು.

ಅಂಬಳೆ ಗ್ರಾಪಂ ಅಧ್ಯಕ್ಷರ ಅವಿರೋಧ ಆಯ್ಕೆ

ಯಳಂದೂರು: ತಾಲೂಕಿನ ಅಂಬಳೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಸ್ಥಾನಕ್ಕೆ ಎಲ್. ನವೀನ ಅವಿರೋಧವಾಗಿ ಆಯ್ಕೆ ಯಾಗಿದ್ದಾರೆ.

ಅಧ್ಯಕ್ಷರಾಗಿದ್ದ ಸಿ. ನಂಜುಂಡಸ್ವಾಮಿ ರಾಜೀನಾಮೆ ನೀಡಿದ್ದ ಹಿನ್ನೆಲೆಯಲ್ಲಿ ನಡೆದ ಚುನಾವಣೆಯಲ್ಲಿ ನವೀನ ಮಾತ್ರ ನಾಮಪತ್ರ ಸಲ್ಲಿಸಿದ್ದರಿಂದ ಚುನಾವಣಾಧಿಕಾರಿಯಾಗಿದ್ದ ನೀರಾವರಿ ಇಲಾಖೆಯ ಎಇಇ ಚಂದ್ರಶೇಖರ್, ಆಯ್ಕೆಯನ್ನು ಅಧಿಕೃತವಾಗಿ ಘೋಷಣೆ ಮಾಡಿದರು. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ರಸ್ತೆ, ಚರಂಡಿಗಳ ಅಭಿವೃದ್ಧಿ, ಕುಡಿಯುವ ನೀರಿಗೆ ಆದ್ಯತೆ, ಬೀದಿ ದೀಪಗಳ ಅಳವಡಿಕೆ ಸೇರಿದಂತೆ ಸಮಗ್ರ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಪ್ರಯತ್ನ ಮಾಡುವುದಾಗಿ ನವೀನ ಭರವಸೆ ನೀಡಿದರು.

ಅಂಬಳೆ ಗಾಪಂ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ನವೀನರನ್ನು ಸದಸ್ಯರು ಮತ್ತವರ ಬೆಂಬಲಿಗರು ಅಭಿನಂದಿಸಿದರು.

ಮೈಕ್ರೋ ಫೈನಾನ್ಸ್ ಕಿರುಕುಳದ ಬಗ್ಗೆ ಮಹಿಳೆ ದೂರು

ಯಳಂದೂರು: ತಾಲೂಕಿನ ಕೆಸ್ತೂರು ಗ್ರಾಮದಲ್ಲಿ ಯಳಂದೂರು ಪೊಲೀಸ್ ಠಾಣೆ ವತಿಯಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಜನ ಸಂಪರ್ಕ ಸಭೆಯನ್ನು ಅಂಬೇಡ್ಕರ್ ಭವನದಲ್ಲಿ ನಡೆಸಲಾಯಿತು.

ಮೈಕ್ರೋ ಫೈನಾನ್ಸ್‌ನವರ ಹಾವಳಿ ಜಾಸ್ತಿಯಾಗಿ ಕಿರುಕುಳ ನೀಡುತ್ತಿದ್ದಾರೆ. ಮನೆಯ ಮುಂದೆನೇ ಕೂತು ಹಣ ಕಟ್ಟಬೇಕು ಅಂತ ಹಿಂಸೆ ಮಾಡುತ್ತಿದ್ದಾರೆ ಎಂದು ಜಯಮ್ಮ ದೂರಿದರು.

ದಲಿತರಿಗೆ ಮತ್ತು ನಾಯಕ ಸಮುದಾಯದವರಿಗೆ ಸ್ಮಶಾನ ಇಲ್ಲ ದಯವಿಟ್ಟು ಅದರ ಬಗ್ಗೆ ತಹಶೀಲ್ದಾರರಿಗೆ ತಿಳಿಸಿ. ಇಲ್ಲವಾದರೆ ಶವವನ್ನು ತಾಲೂಕು ಕಚೇರಿ ಮುಂದೆ ಇರಿಸಿ ಪ್ರತಿಭಟನೆಮಾಡಲಾಗುತ್ತದೆ ಎಂದು ಗ್ರಾಮದ ಯುವಕ ರಾಜೇಶ್ ತಿಳಿಸಿದರೆ, ಗ್ರಾಮಕ್ಕೆ ಬೀಟ್ ಪೋಲೀಸ್ ಬರುತ್ತಿಲ್ಲ, ಒತ್ತುವರಿ, ಕುಡಿಯುವ ನೀರು ಅನೈರ್ಮಲ್ಯ, ಶುಚಿತ್ವ, ಗ್ರಾಮದಲ್ಲಿರುವ ಪ್ರೌಢಶಾಲೆ ತೆರಳುವ ಹೆಣ್ಣುಮಕ್ಕಳಿಗೆ ಪಡ್ಡೆ ಹುಡುಗರು ಕಿರುಕುಳ ನೀಡುತ್ತಿದ್ದಾರೆ ಎಂದು ಅಂಬೇಡ್ಕರ್ ಅಧ್ಯಕ್ಷ ಸಚಿನ್ ಬಿ ದೂರಿದರು.

ಗ್ರಾಮದಲ್ಲಿ ಕುಡುಕರ ಹಾವಳಿ ಹೆಚ್ಚಾಗಿದೆ ಕುಡಿದ ಅಮಲಿನಲ್ಲಿ ಮಾರಕಾಸ್ತ್ರಗಳನ್ನು ಹಿಡಿದುಕೊಂಡು ಬೀದಿಯಲ್ಲಿ ತಿರುಗಾಡುತ್ತಾರೆ ಹಾಗೂ ಮಹಿಳೆಯರನ್ನು ಅಶ್ಲೀಲವಾಗಿ ಬೈಯುತ್ತಾರೆ ಎಂದು ಸಿದ್ದನಾಗಮ್ಮ ದೂರಿದರು.

ಗ್ರಾಮದಲ್ಲಿ ಅಕ್ರಮ ಮದ್ಯ ಮಾರಾಟ ಹೆಚ್ಚಾಗಿದೆ ಇದರಿಂದ ಯುವ ಪೀಳಿಗೆ ಚಟಕ್ಕೆ ಬಲಿಯಾಗಿದ್ದಾರೆ ಇದಕ್ಕೆ ಕಡಿವಾಣ ಹಾಕಿ ಎಂದು ನವೀನ್ ತಿಳಿಸಿದರು.

ಗ್ರಾಮಸ್ಥರ ದೂರನ್ನು ಆಲಿಸಿದ ಸರ್ಕಲ್ ಇನ್ಸ್‌ಪೆಕ್ಟರ್ ಶ್ರೀಕಾಂತ್ ಮಾತನಾಡಿ ಈ ಎಲ್ಲಾ ಸಮಸ್ಯೆಗಳನ್ನು ಪರಿಗಣಿಸಿ ಸೂಕ್ತ ಕಾನೂನು ಕ್ರಮವನ್ನು ಕೈಗೊಳ್ಳುತ್ತೇವೆ. ಯಾವುದೇ ಸಮಸ್ಯೆಗಳಿದ್ದರೂ 112 ಗೂ ಕರೆ ಮಾಡಿ, ಹೆಣ್ಣು ಮಕ್ಕಳ ಹಿತದೃಷ್ಟಿಯಿಂದ ಆಪ್ತ ಗೆಳತಿ ಬಾಕ್ಸ್‌ಗಳನ್ನು ಶಾಲೆ ಕಾಲೇಜುಗಳಲ್ಲಿ ಇರಿಸಲಾಗಿದೆ ಪೊಲೀಸ್ ಮತ್ತು ಸಾರ್ವಜನಿಕರ ನಡುವೆ ಒಳ್ಳೆಯ ಅಭಿಪ್ರಾಯವಿರಬೇಕು. ನಿಮ್ಮೆಲ್ಲರ ಹಿತವೇ ಪೊಲೀಸ್ ಇಲಾಖೆಯ ಉದ್ದೇಶವಾಗಿದೆ.

ಪೋಲೀಸ್ ಇನ್ಸ್‌ಪೆಕ್ಟರ್ ಆಕಾಶ್, ಯಜಮಾನರಾದ ಬಿ. ನಾಗರಾಜು, ಕುಮಾರ್, ದೊರೆಸ್ವಾಮಿ, ಜಯರಾಜು, ನಾಗನಾಯಕ್, ಮಹಿಳೆಯರು, ಗ್ರಾಮದ ಮುಖಂಡರು ಹಾಜರಿದ್ದರು.

ಜಮ್ಮು ಕಾಶ್ಮೀರ ದುರಂತ: ಸಹಾಯವಾಣಿ ಸಂಪರ್ಕಕ್ಕೆ ಮನವಿ

